ಸಂಪುಟ : ೧೯
ಸಂಚಿಕೆ : ೪

ಕರ್ನಾಟಕ ಭಾರತಿ

ಅಕ್ಷಯತೃತೀಯಾ ಸಂಚಿಕೆ

ಮೇ, ೧೯೮೭

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ. ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯುಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು ಅದರಲ್ಲಿ ಪ್ರಕಟನೆಗಾಗಿ ಈ ಬಗೆಯು ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನ ಗಳಿದ್ದರೆ, ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯುನ್ನು ಕಳುಹಿಸ ಬೇಕು.

ಲೇಖನಗಳನ್ನು ಕಾಗದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿ ಯಾಗಲೀ ಇರಬಾರದು.

ಲೇಖನ ಸ್ವೀಕೃತ ವಾದಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯು ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು. ಲೇಖನಗಳನ್ನು. ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು "ಕರ್ನಾಟಕ ಭಾರತಿ"** ಕನ್ನಡ **ಅಧ್ಯಯನಪೀಠ**, ಕರ್ನಾಟಕ-ವಿಶ್ವವಿದ್ಯಾಲಯು, ಧಾರವಾಡ–೫೮೦ ೦೦೩ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸ ಬೇಕು. ಇನ್ನಿತರ ಯಾವದೇವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ,** ಕರ್ನಾಟಕ ವಿಶ್ವವಿದ್ಯಾಲಯು ಧಾರವಾಡ ಇವರಿಗೆ, ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವಸಂಚಿಕೆ	೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ	೪. ಅಕ್ಷಯ ತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮–೦೦ (ಅಂಚೆವೆಚ್ಚ ಸಹಿತ)

ಬಿಡಿಸಂಚಿಕೆಯ ಬೆಲೆ; ರೂ. ೨೫

(ಅಂಚೆ ವೆಚ್ಚ ರೂ. ೧–೨೫ ಪ್ರತೇಕ)

(ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ ದರ ರೂ. : ೪–೦೦ ಮಾತ್ರ. ಹಣ ವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೇ ಪೋಸ್ಟಲ್ ಆರ್ಡರ್ ಮೂಲಕ– **ಫಾಯನಾನ್ಸ ಆಫೀಸರ,** ಕರ್ನಾಟಕ-ವಿಶ್ವವಿದ್ಯಾಲಯು, ಧಾರವಾಡ ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೧೯   ಸಂಚಿಕೆ : ೪

ಪ್ರಧಾನ ಸಂಪಾದಕರು :

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಸಂಪಾದಕರು :

ಡಾ. ವಿಲ್ಯಂ ಮಾಡ್ತ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ ; ೧೯ ಸಂಚಿಕೆ : ೪

ಅಕ್ಷಯತೃತೀಯಾ ಸಂಚಿಕೆ

ಮೇ, ೧೯೮೭

ಪ್ರಕಾಶಕರು :

ಎಸ್. ಬಿ. ನಾಯಕ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ರಾಜಶ್ರೀ ಪ್ರಿಂಟಿಂಗ್ ಪ್ರೆಸ್
ತಡಕೋಡ ಓಣಿ,, ಧಾರವಾಡ

ಪರಿವಿಡಿ

ಭರತ ಬಾಹುಬಲಿ ವ್ಯಾಯೋಗ

● ಸಿ. ಯಂ. ವೀರಭದ್ರಯ್ಯ

ಭವಬಂಧನವನ್ನು ಗೆದ್ದು, ಆತ್ಮವನ್ನು ಉದಾತ್ತತೆಯಲ್ಲಿ ನೆಲೆಗೊಳಿಸಿ, ವಿರಕ್ತಿಯನ್ನು ಹೊಂದಿ ತನ್ನ ರಾಜ್ಯವನ್ನು ಭರತನಿಗೆ ಒಪ್ಪಿಸಿ, ತಪಸ್ಸಿಗೆ ಹೋದವನೇ ಬಾಹುಬಲಿ.

ಬಾಹುಬಲಿ, ಆದಿತೀರ್ಥಂಕರನಾದ ಪುರದೇವನ ಮಗ. ಪ್ರತಿಮಾಯೋಗ ದಲ್ಲಿ ನಿಂತುಕೊಂಡು ತಪಸ್ಸು ಮಾಡುತ್ತಿದ್ದ. ಇವನ ಮೂರ್ತಿಯನ್ನು ಭರತನು ಮಾಡಿಸಿ, ಪೌದನಪುರದಲ್ಲಿ ಪ್ರತಿಷ್ಠಿಸಿದನು. ಗಂಗರಾಜನಾದ ರಾಚಮಲ್ಲನಲ್ಲಿ ಮಂತ್ರಿಯಾಗಿದ್ದ ಚಾವುಂಡರಾಯನು ಶ್ರವಣಬೆಳ್ಗೊಳದ ದೊಡ್ಡ ಬೆಟ್ಟದ ಮೇಲೆ ಇದೇ ಮೂರ್ತಿಯನ್ನು ಕಲ್ಲಿನಲ್ಲಿ ಕಡೆಯಿಸಿದ. ಇದು ಕ್ರಿ. ಶ. ಸುಮಾರು ೯೮೦ ರಲ್ಲಿ ಪ್ರತಿಷ್ಠಿತವಾಯಿತು. ಈ ಭವ್ಯೋನ್ನತ ಮೂರ್ತಿ ಕನ್ನಡಿಗರ ಕಲಾ ವೈಭವದ ಪ್ರತೀಕವಾಗಿ ಇಂದಿಗೂ ಜನರ ಕಣ್ಮನಗಳನ್ನು ಸೆಳೆಯುತ್ತಿದೆ.

ಗೊಮ್ಮಟನದು ತುಂಗಾಕೃತಿ. ಅಂತೆಯೇ ಆತನನ್ನು ಮನುಷ್ಯರು, ನಾಗರು, ದೇವತೆಗಳು, ರಾಕ್ಷಸರು, ಖೇಚರರು ಮುಂತಾದವರು ಪೂಜಿಸುತ್ತಾರೆ. ಬಾಹು ಬಲಿಯು ಮಹೋನ್ನತ: ಅಂದಿನ ಆತನ ಔನ್ನತ್ಯ, ನುತಸೌಂದರ್ಯ, ಆತ್ಮೋಪಮ ಶ್ರೀ ರೂಪ, ಊರ್ಜಿತಾತಿಶಯ ಮುಂತಾದ ಗುಣಗಳು ಆತನನ್ನು ಕ್ಷಿತಿಸಂಪೂಜ್ಯ ನನ್ನಾಗಿ ಮಾಡಿದವು.

ಕವಿ ದೃಷ್ಟಿಯಲ್ಲಿ ಗೊಮ್ಮಟನ ಶ್ರೀರೂಪ ಕವಿಸಮಯವಾಗಿ ವರ್ಣಿತ ವಾಗಿದೆ. ಇಂದಿಗೂ ಒಂದು ಹಕ್ಕಿಯೂ ಸಹ ಆ ಗೊಮ್ಮಟ ಜಿನ ಪ್ರತಿಮೆಯ ಮೇಲೆ ಹಾರುವುದಿಲ್ಲ. ಆತನ ಕಂಕುಳ ಸ್ಥಳದಲ್ಲಿ ಪ್ರಕಾಶಮಾನವಾದ, ಸುವಾಸನಾ ಯುಕ್ತವಾದ ಕುಂಕುಮ ಕೇಸರಿ ಹೊರಹೊಮ್ಮುತ್ತಿದೆ. ಅಂತೆಯೇ ಇಂಥಹ ಮೂರ್ತಿಯನ್ನು ಅರ್ಚಿಸುವುದಕ್ಕಾಗಿ ಮೂಲೋಕದ ಜನ ಇಲ್ಲಿ ನೆರೆಯುವುದು ವಾಡಿಕೆಯಾಗಿದೆ.

ಇಂಥ ಉದಾತ್ತತೆಯು ಬರಲು ಕಾರಣ ?

ಆತ ಅನುಪಮ ರೂಪನೂ, ಮನ್ಮಥನೂ, ನಿರ್ಭೀತಚಕ್ರಿಯೂ, ಅತ್ಮಾಭಿ ಮಾನಿಯೂ, ಮಹಾತಪಸ್ವಿಯೂ, ಅನೂನಬೋಧನೂ, ವಿನಿಹತ ಕರ್ಮ ಬಂಧನನೂ ಆಗಿದ್ದ.

ಆತನ ಪ್ರತಿಮೆಯನ್ನು ನೋಡಿದರೆ ನಮಗೇನನ್ನಿಸುತ್ತದೆ ?

“ನನಗೆ ಹುಸಿ, ಕೊಲೆ, ಕಳವು, ಪರಾಂಗನಾ ಸಮ್ಮತಿ, ಅಪಹರಿಸುವ ಬುದ್ಧಿ, ಇವು ಇಹಪರದಲ್ಲಿ ಕೇಡನ್ನು ಉಂಟು ಮಾಡುತ್ತವೆ” ಎಂದು ಆ ಪ್ರತಿಮೆ ಸಾರುತ್ತಿರುವಂತೆ ಕಾಣಿಸುತ್ತದೆ.

ಇಂಥ ಮೂರ್ತಿಯನ್ನು ಇಂದ್ರಾದಿ ದೇವತೆಗಳೂ ಸಹ ಅರ್ಚಿಸಿ ಕೃತಾರ್ಥರಾಗುತ್ತಾರಂತೆ.

ಶ್ರವಣಬೆಳ್ಗೊಳದಲ್ಲಿ ಫೆಬ್ರುವರಿ ೨೧, ೧೯೮೧ ರಂದು ಶ್ರೀ ಗೊಮ್ಮಟೇಶ್ವರನ ವಿಗ್ರಹಕ್ಕೆ ಮಹಾಮಸ್ತಾಭಿಷೇಕ ಮಾಡಿದರು. ವಿಗ್ರಹ ಪ್ರತಿಷ್ಠಿಸಿ ಸಾವಿರ ವರುಷಗಳು ಸಂದ ಸವಿನೆನಪಿಗಾಗಿ ಈ ಮಹಾಭಿಷೇಕ.

ಶ್ರವಣಬೆಳಗೊಳ ಕರ್ನಾಟಕದ ಜೈನರ ಯಾತ್ರಾಸ್ಥಳ. ಸಾಮಾನ್ಯವಾಗಿ ಮಹಾಮಸ್ತಾಭಿಷೇಕ ಹನ್ನೆರಡು ವರ್ಷಕ್ಕೊಮ್ಮೆ ನಡೆಯುವುದು. ೧೦೦೮ ಕುಂಭಗಳಿಂದ ಜಿನನ ಮಸ್ತಕಕ್ಕೆ ನೀರೆರೆಯುವ ಸಂಭ್ರಮ. ಹಾಲು, ಮೊಸರು, ತುಪ್ಪಾದಿಗಳ ಅಭಿಷೇಕ, ಬಂಗಾರ, ಬೆಳ್ಳಿ ಸಮರ್ಪಣೆಯಿಂದ, ಗಂಧಾದಿ ಲೇಪನದಿಂದ ಮಹಾಪೂಜೆ ನಡೆಯುವುದು. ೭ ಅಡಿ ಜಿನನ, ಮಂಗಳ ಮಹಾಕಳಸ ದಿಲ್ಲಿಯಿಂದ ಆಗಮಿಸಿ, ಸುಮಾರು ೧೨೫ ಪಟ್ಟಣಗಳನ್ನು ಹಾಯ್ದು, ಶ್ರವಣಬೆಳಗೊಳದಲ್ಲಿ ಸ್ಥಾಪಿಸಲ್ಪಟ್ಟಿತು. ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು, ಹೆಲಿಕಾಫ್ಟರ್‌ನಲ್ಲಿ ಪುಷ್ಪಮಳೆಗರೆದರು.

ಶ್ರವಣಬೆಳಗೊಳ ಹಾಸನಜಿಲ್ಲೆ ಚೆನ್ನರಾಯಪಟ್ಟಣದ ತಾಲ್ಲೂಕಿನಲ್ಲಿದೆ. ಬೆಳಗೊಳವೆಂದರೆ “**ಬಿಳಿಯಕೊಳ**” ಎಂದು ಹೆಸರು. ಈ ಹೆಸರು ಪಟ್ಟಣದ ಮಧ್ಯದಲ್ಲಿರುವ ಕೆರೆಗೆ ಅನ್ವಯವಾಗುವುದು. ಒಬ್ಬ ಜೈನ ಸನ್ಯಾಸಿ [ಶ್ರವಣ] ಇಲ್ಲಿ ವಾಸವಾಗಿದ್ದರಿಂದ “ಶ್ರವಣ ಬೆಳಗೊಳ”ವೆಂದು ಹೆಸರಾಯಿತು. ಇದಕ್ಕೆ ಗೊಮ್ಮಟಪುರವೆಂದೂ ಕರೆಯುವರು. ಈ ಶ್ರವಣಬೆಳಗೊಳದಲ್ಲಿ ಪ್ರಕೃತಿ ಸೌಂದರ್ಯದ ಸಂಕೇತವಾಗಿ ಎರಡು ಗುಡ್ಡಗಳಿವೆ. ಒಂದು ಚಂದ್ರಗಿರಿ, ಇನ್ನೊಂದು ಇಂದ್ರಗಿರಿ. ಇಂದ್ರಗಿರಿಯ ಮೇಲೆಯೇ ಗೊಮ್ಮಟ ಜಿನಮೂರ್ತಿಯ ಪ್ರತಿಷ್ಠಾಪನೆಯಾಗಿದೆ. ಸಮೀಪದಲ್ಲಿ ಕಲ್ಯಾಣತೀರ್ಥವೆಂಬ ಕೆರೆ ಇದೆ. ಈ ಕೆರೆಯ ಸ್ಥಾಪನೆಯ ಕಾಲ ಕ್ರಿ.ಶ. ೧೭೩೧ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಇಂದ್ರಗಿರಿಯ ಎತ್ತರ ೪೭೧ ಅಡಿ. ಮೇಲಕ್ಕೆ ಹತ್ತಲು ೫೦೦ ಮೆಟ್ಟಿಲುಗಳಿವೆ. ಕೆಳಗಿನಿಂದ ಮೇಲಿನವರೆಗೂ ಹತ್ತುವಾಗ ಶಿಲಾಶಿಲ್ಪದ ವೈಭವ, ಕಲಾ

ಸೌಂದರ್ಯಪೂರ್ಣ ದೇವಸ್ಥಾನಗಳು ಕಂಗೊಳಿಸುವವು. ತುತ್ತತುದಿಯಲ್ಲಿರುವುದೇ ಗೊಮ್ಮಟಮೂರ್ತಿಯ ಶಿಲ್ಪ.

ಈ ಗೊಮ್ಮಟಮೂರ್ತಿ ಭಾರತದಲ್ಲಿಯೇ ಎತ್ತರವುಳ್ಳದ್ದಾಗಿದೆ. ಈ ಬತ್ತಲೆ ಮೂರ್ತಿಗೆ ವಿಶಾಲವಾದ ಬಾಹುಗಳೂ, ಕಿರಿದಾದ ನಿತಂಬಗಳೂ ಇರುವುದನ್ನು ಗಮನಿಸಬಹುದು. ಮೊಣಕಾಲಿನಿಂದ ಕೆಳಗೆ ವಿಗ್ರಹದ ಪ್ರಮಾಣ ಸರಿಯಾಗಿರದೆ ಸಣ್ಣಾಗಿದೆ. ಬಹುಶಃ ಇದಕ್ಕೆ ಕಾರಣ ಶಿಲೆ ಅಖಂಡವಾಗಿದ್ದು, ಶಿಲ್ಪಿಗಳು ಶಿಲ್ಪ ಕೆತ್ತನೆಯನ್ನು ತಲೆಯಿಂದ ಆರಂಭಿಸಿ, ಮೊಳಕಾಲ ಸ್ಥಾನಕ್ಕೆ ಬರುವ ಹೊತ್ತಿಗೆ ಕಲ್ಲು ಸಾಕಷ್ಟು ಇಲ್ಲದಿರುವುದೇ ಇದಕ್ಕೆ ಕಾರಣವಾಗಿರಬಹುದು. ಅಂತೆಯೇ ಮೊಳ ಕಾಲ ಕೆಳಭಾಗದ ವಿಗ್ರಹ ಕೆತ್ತನೆ ಸಮಪ್ರಮಾಣವಾಗಿಲ್ಲ.

ಮೂರ್ತಿಯ ಮೇಲಿನ ಭಾಗ ತುಂಬಾ ಕಲಾಪೂರ್ಣವಾಗಿದೆ. ಗುಂಗುರು ಗೂದಲು, ವಿಶಾಲ ಬಾಹುಗಳು, ರಮಣೀಯ ನಿತಂಬಗಳು ನಿಜವಾಗಿಯೂ ಸೌಂದರ್ಯಪೂರ್ಣವಾಗಿವೆ. ಕೆಳಭಾಗದಲ್ಲಿ ಪಾದಗಳ ಸುತ್ತ ಹುತ್ತ ಬೆಳೆದಿರು ವಂತೆ, ಹುತ್ತಗಳ ಕಿಂಡಿಗಳಿಂದ ಹಾವುಗಳು ಮೈಮೇಲೆ ಏರುವಂತೆ ಕೆತ್ತಲಾಗಿದೆ. ಪಾದದಿಂದ ಬಳ್ಳಿ ಹಬ್ಬಿ, ಶರೀರವನ್ನು ಆವರಿಸಿದೆ. ಒಟ್ಟಿನಲ್ಲಿ ಈ ಮೂರ್ತಿಯ ವೈಶಿಷ್ಟ್ಯವು ಇಡೀ ವಿಗ್ರಹವೊಂದೇ ಅಖಂಡ ಶಿಲೆಯಲ್ಲಿ ಕತ್ತಿರುವುದು. ಯಾರೂ ಆ ಶಿಲೆಯನ್ನು ಅಲ್ಲಿಗೆ ಹೊತ್ತುಕೊಂಡು ಹೋಗಿಲ್ಲ. ನೈಸರ್ಗಿಕವಾಗಿರುವ ಆ ದೊಡ್ಡ ಗುಂಡಿನಲ್ಲಿ ಭವ್ಯ ಮೂರ್ತಿಯ ಆಕಾರವನ್ನು ಕಂಡರಿಸಿದ್ದಾರೆ.

ಒಟ್ಟು ವಿಗ್ರಹದ ಎತ್ತರ ೫೮ ಅಡಿಗಳು. ಕೆಳಗಿನಿಂದ ಕಿವಿಗಳ ತನಕ ೫೦ ಅಡಿ. ತಲೆಯ ಎತ್ತರ ೮ ಅಡಿ. ಪಾದಗಳ ಅಳತೆ ೮ ೧/೪ ಅಡಿ. ಪಾದದೊಳಗಿನ ಮಧ್ಯಬೆರಳು ೨ ೧/೪ ಅಡಿ. ತೊಡೆಯ ಸುತ್ತಳತೆ ೨೦ ಅಡಿ, ಕುತ್ತಿಗೆಯಿಂದ ಕಿವಿಯವರೆಗಿನ ಅಂತರ ೨ ಅಡಿ ೬ ಇಂಚು.

ಕಿವಿಯಿಂದ ತಲೆಯ ಎತ್ತರ ೬ ಅಡಿ ೬ ಇಂಚು. ಎದೆಯ ಸುತ್ತಳತೆ ೧೦ ಅಡಿ. ಬಾಹುಗಳ ವಿಸ್ತಾರ ೨೩ ಅಡಿ ೭ ೧/೨ ಇಂಚು. ತೋರು ಬೆರಳಿನ ಉದ್ದ ೩ ೧/೨ ಅಡಿ, ಹಸ್ತದೊಳಗಿನ ಮಧ್ಯ ಬೆರಳಿನ ಉದ್ದ ೬ ಅಡಿ. ೩ನೇ ಬೆರಳು ೪ ಅಡಿ ೮ ಇಂಚು. ೪ನೆಯ ಬೆರಳು ೩ ಅಡಿ ೨ ಇಂಚು ಇರುವುದು.

ಫರ್ಗ್ಯೂಸನ್ ಎಂಬ ಪ್ರವಾಸಿಕ ಇಂಥ ವಿಗ್ರಹವನ್ನು ಎಲ್ಲಿಯೂ ನೋಡಿಲ್ಲ ವೆಂದು ಬರೆದಿದ್ದಾನೆ. ಸುಮಾರು ಸಾವಿರ ವರ್ಷಗಳಿಂದ ಬಿಸಿಲು ಗಾಳಿಗೆ ಎದೆ ಯೊಡ್ಡಿ ನಿಂತ ಈ ವಿಗ್ರಹದ ಮೇಲೆ ಅಲ್ಲಲ್ಲಿ ಸೀಳುಗಳು ಕಾಣಿಸಿಕೊಂಡಿವೆ. ಪುರಾ

ತನ ರಕ್ಷಣಾ ಶಾಖೆಯವರು ಇದರ ದುರಸ್ತಿ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಸಿಮೆಂಟು ಮತ್ತಿತರ ರಾಸಾಯನಿಕ ದ್ರವ್ಯಗಳನ್ನು ಈ ಸೀಳುಗಳಲ್ಲಿ ತುಂಬಿ: ಮೂಲ ವಿಗ್ರಹದ ಸ್ವರೂಪ ಬದಲಾಗದಂತೆ ಕಾಪಾಡಿದ್ದಾರೆ.

ಮಳೆಯ ನೀರು ಸೀಳುಗಳಲ್ಲಿ ಇಳಿಯಬಾರದೆಂದು ಒಂದು ವಿಧವಾದ ರಾಸಾಯನಿಕ ದ್ರವ್ಯವನ್ನು ವಿಗ್ರಹಕ್ಕೆ ಬಳಿಯಲಾಗಿದೆ. ಇಂದ್ರಗಿರಿಯಿಂದ ಚಂದ್ರ ಗಿರಿಯನ್ನು ನೋಡಬಹುದು. ಈ ಗಿರಿಯ ಮೇಲೆ ಸುಮಾರು ೧೨ ದೇವಾಲಯ ಗಳಿವೆ. ಪಾರ್ಶ್ವನಾಥ ದೇವಾಲಯ ಕ್ರಿ. ಶ. ೧೦೦೦ ದಲ್ಲಿ ಕಟ್ಟಿರಬಹುದೆಂದು ವಿದ್ವಾಂಸರ ಅಭಿಪ್ರಾಯವಿದೆ. ಇಲ್ಲಿಯ ವಿಗ್ರಹ ೧೫ ಅಡಿ ಎತ್ತರವಾಗಿದೆ. ಈ ಪಾರ್ಶ್ವನಾಥನು ಗೊಮ್ಮಟೇಶನ ಸಹೋದರನಾಗಿರಬೇಕೆಂದು ಅಭಿಪ್ರಾಯವಿದೆ.

ಗೊಮ್ಮಟೇಶ್ವರನ ವಿಗ್ರಹಗಳನ್ನು ಕಾರ್ಕಳದಲ್ಲಿಯೂ, ವೇಣೂರಿನಲ್ಲಿಯೂ ಮತ್ತು ಧರ್ಮಸ್ಥಳದಲ್ಲಿಯೂ ನೋಡಬಹುದಾಗಿದೆ.

ಇಂಥ ಮಹಿಮನ ಮೂಲ ವೃತ್ತಾಂತವನ್ನು ತಿಳಿಯೋಣ :

ವೃಷಭನಾಥನಿಗೆ ನೂರು ಮಂದಿ ರಾಜಕುಮಾರರಿದ್ದರು. ಇವರಲ್ಲಿ ಭರತ ದೊಡ್ಡವನು. ಬಾಹುಬಲಿ ಎರಡನೆಯವನು. ಇಬ್ಬರೂ ಯೌವನಕ್ಕೆ ಬರುತ್ತಲೇ ವೃಷಭನಾಥನು ರಾಜ್ಯಾಡಳಿತವನ್ನು ಮಕ್ಕಳಿಗೆ ವಹಿಸಿ, ತಾನು ವಿಶ್ರಮಿಸುವ ಯೋಚನೆ ಮಾಡಿದ.

ಅಂತೆಯೇ ತನ್ನ ರಾಜ್ಯವನ್ನು ಎರಡು ಭಾಗಗಳನ್ನಾಗಿ ಮಾಡಿದ. ಭರತನು ಅಯೋಧ್ಯೆಯ ಅರಸನಾದರೆ, ಬಾಹುಬಲಿ ಪೌದನಪುರದ ಅರಸನಾದ. ಭರತ ಧೈರ್ಯ ಮುತ್ಸದ್ಧಿತನಗಳಿಗೆ ಪ್ರಸಿದ್ಧನಾದರೆ; ಬಾಹುಬಲಿಯು ಹೆಸರಿಗೆ ತಕ್ಕಂತಹ ಬಲಿಷ್ಠ ದೇಹಿ ಹಾಗೂ ಸುಂದರಾಂಗನಾದ. ಈ ಇಬ್ಬರೂ ಅರಸು ಕುಮಾರರ ವಿವೇಚನಾಪರ ಆಡಳಿತದಿಂದಾಗಿ ಎಲ್ಲೆಡೆ ಪ್ರಜೆಗಳೂ ಸುಖ–ಸಂಪತ್ತಿನಲ್ಲಿ ಓಲಾಡಿದರು.

ಹೀಗಿರುತ್ತಿರಲಾಗಿ ಭರತನ ಆಯುಧಾಗಾರದಲ್ಲಿ ಹೊಳೆವ ಚಕ್ರ ಹುಟ್ಟಿತು. ಚಕಿತಗೊಂಡ ರಾಜ ಈ ಕೌತುಕ ಪರೀಕ್ಷೆಗೆ ಸಿದ್ಧನಾದ. ಅನುಭವ ಅಮಾತ್ಯರು, 'ಆಯುಧಾಗಾರದಲ್ಲಿ ಚಕ್ರ ಹುಟ್ಟುವುದು ಅಪೂರ್ವ! ನೀವು ಚಕ್ರಾಧಿಪತಿಗಳಾಗುವ ಸಂಕೇತವನ್ನು ಅದು ಸಾರುತ್ತದೆ. ಚಕ್ರವನ್ನು ಅನುಸರಿಸಿ ನಾವು ಸೈನ್ಯ ಸಮೇತ ವಿಜಯೋತ್ಸವ ಕೈಗೊಳ್ಳಬೇಕು. ಚಕ್ರವೆಲ್ಲಿ ನಿಲ್ಲುವುದೋ ಆ ರಾಜ್ಯದ ರಾಜ ನಮ್ಮ ಅಧಿರಾಜನಾಗಿ ಕಪ್ಪ ಕಾಣಿಕೆ ಸಲ್ಲಿಸಬೇಕು" ಎಂದು ಸೂಚಿಸಿದರು.

ಎಲ್ಲರೂ ಸಮ್ಮತಿಸಿದ ಮೇಲೆ ವಿಜಯದಶಮಿಯ ಶುಭ ದಿನದಿ ಭರತ ಭಾರೀ ಸೈನ್ಯದೊಂದಿಗೆ ವಿಜಯ ಯಾತ್ರೆ ಕೈಗೊಂಡ.

ಸೈನ್ಯವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿದರು. ಪದಾತಿ ಸೈನ್ಯ, ಅಶ್ವ ಸೈನ್ಯ, ಗಜಸೈನ್ಯ ಮತ್ತು ಮಹಾರಥ ಸೈನ್ಯ ಮುನ್ನಡೆದವು. ಪೂರ್ವ ಸಮುದ್ರದ ವರೆಗೂ ಎಲ್ಲಾ ರಾಜರುಗಳು ತಾವಾಗಿಯೇ ಶರಣಾಗತರಾದರು. ಎಲ್ಲಿಯೂ ರಕ್ತ ಚೆಲ್ಲಲಿಲ್ಲ. ಆದರೆ, ಮಗಧರಾಜ ಶರಣಾಗತನಾಗಲಿಲ್ಲ. ಹತ್ತು ಯೋಜನ ದೂರದ ಆ ರಾಜ್ಯಕ್ಕೆ ಭರತ ವಿಶೇಷ ರಥದಲ್ಲಿ ಪ್ರಯಾಣ ಮಾಡಿ, ಅರಮನೆಯ ಮೇಲೆ ಬಾಣಗಳ ಮಳೆಗರೆಯಹತ್ತಿದ. ಗುಡುಗಿನಾರ್ಭಟದಿ ಶರಗಳು ಅರಮನೆಯನ್ನು ನಡುಗಿಸಿದವು. ಬಾಣವೊಂದಕ್ಕೆ ಕಟ್ಟಿದ ಪತ್ರದ ಒಕ್ಕಣಿಕೆ ಹೀಗಿತ್ತು, "ಎಲೈ ಮಗಧಾಧಿಪಾ– ಷಟ್‌ಖಂಡ ಮಂಡಲಾಧಿಪನಾದ ನನಗೆ, ನೀನು ಯಾವ ಷರತ್ತುಗಳಿಲ್ಲದೆ ಶರಣಾಗು ಇಲ್ಲವೆ ಯುದ್ಧ ಭೂಮಿಯಲ್ಲಿ ಭೇಟಿ ಮಾಡು" ಎಂದು ಬರಯಿಸಿದ್ದ ಭರತ.

ಮಗಧರಾಜ ತನ್ನ ಅಮಾತ್ಯರ ಸೂಚನೆಯ ಮೇರೆಗೆ ಭರತನಿಗೆ ಶರಣಾಗತ–ನಾದ. ಚಕ್ರ ದಕ್ಷಿಣ ಸಮುದ್ರದೆಡೆಗೆ ಸಾಗಹತ್ತಿತು. ಅಲ್ಲಿ ಎಲ್ಲಾ ರಾಜ್ಯಗಳನ್ನು ಗೆದ್ದ ಮೇಲೆ, ಆ ಚಕ್ರರತ್ನ ಪಶ್ಚಿಮಾಭಿಮುಖವಾಗಿ ಚಲಿಸತೊಡಗಿತು. ಸಿಂಧೂ ನದಿಯ ಉತ್ತರಕ್ಕೆ ಚಕ್ರ ಸಾಗಿ ಬಂದಿತು. ಆದರೆ, ಮಧ್ಯದಲ್ಲಿ 'ವಿಜಯಾರ್ಧ ಬೆಟ್ಟಗಳು' ಅಡ್ಡವಾದವು. ಅದನ್ನು ದಾಟಲು ಆ ಬೆಟ್ಟಗಳ ಮಧ್ಯೆ ಸುರಂಗವಿದೆ. ಆದರೆ ಆ ಸುರಂಗದ ಬಾಯಿ ದೊಡ್ಡ ವಜ್ರ ವೈಡೂರ್ಯದ ಬಂಡೆಯಿಂದ ಬಲವಾಗಿ ಮುಚ್ಚ–ಲ್ಪಟ್ಟಿದೆ.

ಒಂದು ಪಕ್ಷ ಬಾಯಿ ಒಡೆದರೆ. ಅದರೊಳಗಿನ ಜ್ವಾಲೆಯು ೧೨ ಗಾವುದದ–ವರೆಗೂ ಹರಡಿ. ಮಧ್ಯೆ ಸಿಕ್ಕಿದ್ದನ್ನೆಲ್ಲಾ ಸುಟ್ಟು ಬೂದಿ ಮಾಡುತ್ತದೆ. ಅಂತೆಯೇ ಭರತ ಇಂಥ ಕಠಿಣ ದಾರಿಯ ಪಯಣವನ್ನು ಸುಗಮಗೊಳಿಸುವ ಉಪಾಯವನ್ನು ಕಂಡುಕೊಂಡ. ಪ್ರವಹಿಸುವ ಜ್ವಾಲೆಯನ್ನು ಆರಿಸಲೆಂದು ಒಂದು ದೀರ್ಘವಾದ ಕಾಲುವೆಯನ್ನು ತೋಡಿಸಿದ. ಇದರಿಂದ ಭಾರೀ ನೀರು ಉಕ್ಕಿತು.

ಕೂಡಲೇ ಭರತ, ಒಂದು ದಿವ್ಯಾಸ್ತ್ರದಿಂದ ಸುರಂಗದ ಬಾಯಿಗೆ ಹೊಡೆದ. ವಜ್ರದ ಬಂಡೆ ನುಚ್ಚು ನೂರಾಯಿತು. ಪ್ರವಹಿಸಿದ ಜ್ವಾಲೆಯನ್ನು ಉಕ್ಕಿ ಬರುವ ಜಲಧಾರೆ ಆರಿಸಿತು. ರಾಜಾಧಿರಾಜರೆಲ್ಲಾ ಚಕಿತಗೊಂಡರು. ಭರತನಿಗೆ ಸನ್ಮಾನ ಮಾಡಿದರು. ಗಂಧರ್ವರಾಜನೂ ತನ್ನ ಸುಂದರ ಕುವರಿಯರೊಂದಿಗೆ ಅಲ್ಲಿಗೆ ಬಂದು ಭರತನನ್ನು ಸನ್ಮಾನಿಸಿ, ತನ್ನ ಮಕ್ಕಳನ್ನು ಕೊಟ್ಟು ಲಗ್ನ ಮಾಡಿದನು.

ಸುರಂಗದ ಜ್ವಾಲೆ ಆರಲು ಸುಮಾರು ಆರು ತಿಂಗಳು ಕಾಲ ಬೇಕಾಯಿತು. ಸುರಂಗದಲ್ಲಿ ಹಾದು ಹೋಗಬೇಕೆಂದರೆ ಭಾರೀ ಕಗ್ಗತ್ತಲು. ಅಂತೆಯೇ ಭರತ ಒಂದು ಉಪಾಯ ಹೂಡಿದ. **'ಕಾಕಿನಿ'** [Kakini gem] ಎಂಬ ರತ್ನ ಸೂರ್ಯ–ಚಂದ್ರರ ಬಿಂಬವನ್ನು ಸುರಂಗದ ಗೋಡೆಗಳ ಮೇಲೆ ಬೀಳುವಂತೆ ಮಾಡಿತು. ಆ ಬಿಂಬದ ಕಿರಣ ಒಂದು ಗಾವುದ ದೂರದವರೆಗೂ ಬೆಳಕು ಮೂಡಿಸುತ್ತಿತ್ತು. ಇದ–ರಿಂದ ಭರತ ಸೈನ್ಯ ಮುನ್ನಡೆಯುವಂತಾಯ್ತು.

ಸುರಂಗದ ಅರ್ಧ ದಾರಿ ನಡೆದಿರಬಹುದು. ವೇಗವಾಗಿ ಹರಿಯುವ ಸಿಂಧು ನದಿ ಕಾಣಿಸಿತು. ನದಿಗೆ ಬಲವಾದ ಸೇತುವೆಯನ್ನು ಕಟ್ಟಿ, ನದಿಯನ್ನು ದಾಟಿದರು. ಆಗ ಸೈನ್ಯ ಬೆಟ್ಟದ ಸಾನು ಪ್ರದೇಶದಲ್ಲಿ ವಿರಮಿಸಿತು. ಆಕಾಶದಲ್ಲಿ ಹೊಳೆವ ಸೂರ್ಯ, ಸುತ್ತಲೂ ಮನಮೋಹಕ ದಟ್ಟವಾದ ಹಸಿರಿನ ಕಾಡು: ಅದೆಷ್ಟೋ ಆನಂದವನ್ನುಂಟು ಮಾಡಿದವು. ಆದರೆ, ಆ ಪ್ರದೇಶದ **ಚಿಲತ** ಮತ್ತು **ಆವರ್ತ** ರಾಜರು ತಮ್ಮ ಮನೆದೇವರಾದ **ಕಾಲಾಮುಖ, ಮೇಘಾಮುಖ**ರನ್ನು ಸ್ತುತಿಸಿ ಭರತನನ್ನು ರಕ್ಷಿಸಲು ಬೇಡಿಕೊಂಡರು.

ಇದ್ದಕ್ಕಿದ್ದಂತೇ ಆಕಾಶದಲ್ಲಿ ಕಪ್ಪು ಮೋಡಗಳು ಆವರಿಸಿ, ಧರೆಗೆ ಕಗ್ಗತ್ತಲನ್ನು ಉಂಟು ಮಾಡಿದವು. ಗುಡುಗಿನ ಆರ್ಭಟದಿಂದ ಎಲ್ಲೆಡೆಯೂ ಮಳೆ ಸುರಿಯಿತು, ಭರತ ಬಹಳ ಯೋಚಿಸಿ, ಒಂದು ರತ್ನವನ್ನು ಅಭಿಮಂತ್ರಿಸಿದ. ಕೂಡಲೇ ವಿಶಾಲವಾದ ಛತ್ರಿಯೊಂದು ಆವಿರ್ಭವಿಸಿ ಅವನ ಜನರನ್ನು ರಕ್ಷಿಸಿತು. ಮತ್ತೊಂದು ರತ್ನವನ್ನು ಅಭಿಮಂತ್ರಿಸಿದಾಗ ಎಲ್ಲೆಡೆಯೂ 'ಮಳೆಯ ರೊಜ್ಜಿನ' ಮೇಲೆ ತೊಗಲಿನ ಹಾಸಿಗೆ ಸಿದ್ಧವಾಯಿತು. 'ಕಾಕಿನಿ' ರತ್ನವನ್ನು ಮಂತ್ರಿಸಿದ್ದರಿಂದ ಸೂರ್ಯತೇಜದ ಸಮಾನ ಆ ರತ್ನ ಹೊಳೆದು ಬೆಳಕು ಚೆಲ್ಲಿತು. ಜಯನೆಂಬ ಯೋಧ ಭರತನ ಆಜ್ಞಾನುಸಾರ ಆಕಾಶಕ್ಕೆ ವಿಮಾನದಿಂದ ಜಿಗಿದು. ಆವರಿಸಿದ ಮೋಡವನ್ನು ಚದುರಿಸಿದ. ಕ್ಷುದ್ರ ದೇವತೆಗಳನ್ನು ಸೆರೆಹಿಡಿದು ತಂದ. ಅವರೆಲ್ಲಾ ಭರತನ ಪಾದಕ್ಕೆರಗಿದರು.

ಹೀಗೆ ಭರತ ಷಟ್‌ಖಂಡ ಚಕ್ರವರ್ತಿಯೆನಿಸಿ ವಿಜಯೋತ್ಸಾಹದಿಂದ ರಾಜಧಾನಿಗೆ ಹಿಂತಿರುಗಿದ. ಆದರೆ ! ಪೌದನಪುರದ ಹೊರಬಾಗಿಲಲ್ಲಿ ಚಕ್ರ ನಿಂತಿತು. ಕಾರಣವೇನೆಂದು ವಿಚಾರಿಸಿದಾಗ, ಬಾಹುಬಲಿ ಭರತನ ತಮ್ಮ. ಅತ್ಯಂತ ಅಭಿಮಾನಿ ಹಾಗೂ ಕ್ಷಾತ್ರತೇಜಸ್ವಿ, "ಅಣ್ಣನೆಂದು ನಮಸ್ಕರಿಸಬಹುದು, ಆದರೆ, ಚಕ್ರವರ್ತಿಯೆಂದು ನಮಸ್ಕರಿಸೆನ್. ರಾಜನಾದವನು ಕಾದಾಡಿಯೇ ಗೆಲ್ಲಬೇಕು" ಎಂದು

ತನ್ನ ನಿರ್ಧಾರವನ್ನು ತಿಳಿಸಿದ್ದ. ಇದರಿಂದ ಇಬ್ಬರಿಗೆ ಘನಘೋರ ಯುದ್ಧಕ್ಕೆ ಕಾರಣವಾಗುತ್ತದೆಂದು ಊಹಿಸಿದ ಅಮಾತ್ಯರು,

ಅಣ್ಣ–ತಮ್ಮರ ಯುದ್ಧ ಲಕ್ಷಾಂತರ ಜೀವಿಗಳ ನಾಶಕ್ಕೆ ಕಾರಣವಾಗುತ್ತದೆ! ಪ್ರಯುಕ್ತ ತಾವಿಬ್ಬರೇ ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳನ್ನು ಮಾಡಬಹುದೆಂದೂ ಸೂಚಿಸಿದರು. ಅದಕ್ಕೆ ಇಬ್ಬರೂ ಸಮ್ಮತಿಸಿದರು.

ಆ ಎಲ್ಲಾ ಯುದ್ಧಗಳಲ್ಲಿ ಭರತನು ಪರಾಭವ ಹೊಂದಿದ. ಸಿಗ್ಗಿನಿಂದ ತಲೆ ತಗ್ಗಿಸಿದ. ಅಸೂಯೆಯು ಅವನ ಸಿಟ್ಟಿನ ಜ್ವಾಲೆಗೆ ಗಾಳಿ ಹಾಕಿತು. ಸಿಧ್ಧವಾಗಿ ನಿಂತಿದ್ದ ಚಕ್ರದಿಂದ ನಿಶ್ಶಸ್ತ್ರನಾದ ಬಾಹುಬಲಿಗೆ ಹೊಡೆದ. ಚಕ್ರ ಬಾಹುಬಲಿಗೆ ಪ್ರದಕ್ಷಿಣೆ ಹಾಕಿ, ಬಲಭುಜದಲ್ಲಿ ಬಂದು ಕುಳಿತಿತು. ಕೂಡಲೇ ಬಾಹುಬಲಿಯು, "ಅಯ್ಯೋ! ರಾಜ್ಯ, ಅಧಿಕಾರ, ಸಿಂಹಾಸನಕ್ಕಾಗಿ ನನ್ನಣ್ಣ ಭ್ರಾತೃತ್ವವನ್ನೇ ಮರೆತ. ಇಂಥ ಕ್ಷುಲ್ಲಕ ರಾಜ್ಯಲಕ್ಷ್ಮಿಯನ್ನು ನಾನು ಒಲ್ಲೆ. ಮೋಕ್ಷಲಕ್ಷ್ಮಿಗಾಗಿ ತಪಸ್ಸಿಗೆ ಹೋಗುವೆನೆಂದು ಬಗೆದ."

ತಾನು ಗೆದ್ದ ರಾಜ್ಯವನ್ನು ಭರತನಿಗೆ ಒಪ್ಪಿಸಿ, ಪ್ರತಿಮಾಯೋಗದಲ್ಲಿ, ನಿರ್ಜನ ಪ್ರದೇಶದ ಬೆಟ್ಟದಲ್ಲಿ ನಿಂತುಬಿಟ್ಟ.

ಕನ್ನಡದಲ್ಲಿ ರ್-ಡ್ ಕಾರಗಳ ಸಮರೂಪಧಾರಣೆ

● ಎ. ಮುರಿಗೆಪ್ಪ

ತನ್ನ ಪರಿಸರದಲ್ಲಿ ಬರುವ ಉಲಿಯೊಂದನ್ನು ಅನುಸರಿಸಿ, ಅದರಿಂದ ಪ್ರಭಾವಿತವಾಗಿ ಪಕ್ಕದ ಅಥವ ಸಮೀಪ ಉಲಿಯೊಂದು ಆ ಉಲಿಯ ಉಲಿಗುಣಗಳನ್ನು ಇಡಿಯಾಗಿ ಅಥವ ಭಾಗಶಃ ಪಡೆಯುವುದನ್ನು ಸಮರೂಪಧಾರಣೆ ಎಂದು ಗುರುತಿಸಲಾಗಿದೆ. ಒಂದು ಉಲಿ ಪರಿಸರದ ಉಲಿಗುಣಗಳೆಲ್ಲವನ್ನೂ ಸ್ವೀಕರಿಸಿ ಪೂರ್ಣ ಸಮರೂಪಧಾರಣೆಗೊಳಗಾಗಬಹುದು. ಅಥವ ಪರಿಸರದ ಉಲಿಗುಣಗಳಲ್ಲಿ ಕೆಲವೊಂದು ಗುಣಗಳನ್ನು ಪಡೆದು ಭಾಗಶಃ ಸಮರೂಪಧಾರಣೆಗೊಳಗಾಗಬಹುದು. ಹೆಚ್ಚಿನ ಭಾಷೆಗಳ ಇತಿಹಾಸದಲ್ಲಿ ಈ ರೀತಿಯ ಸಮರೂಪಧಾರಣೆಯನ್ನು ಸಹಜವಾಗಿ ಕಾಣಬಹುದಾದರೂ ಸ್ಥಾನಿಕವಾಗಿಯೂ ಸಮರೂಪಧಾರಣೆ ಇಲ್ಲದಿಲ್ಲ. ಕನ್ನಡದ ಗ್ರಂಥಸ್ಥ ಅಥವ ಪ್ರಮಾಣಭಾಷೆಯಿಂದ ಆಡುನುಡಿಯ ರೂಪಗಳನ್ನು ನಿರ್ಮಿಸುವಾಗ ಕಂಡುಬರುವ ರ್–ಡ್ ಉಲಿಗಳ ನಡುವೆ ನಡೆಯುವ ಸಮರೂಪಧಾರಣೆಯನ್ನು ಇಲ್ಲಿ ಅಭ್ಯಸಿಸಲಾಗಿದೆ.

ಪ್ರಮಾಣಭಾಷೆಯ ಪದಗಳನ್ನು ಆಡುನುಡಿಯಲ್ಲಿ ಬಳಸಿದಾಗ ಪದಮಧ್ಯ ಮತ್ತು ಪದಾಂತ್ಯ ಉಲಿಗಳ, ಅಕ್ಷರಗಳ ಲೋಪವು ಹೆಚ್ಚಿನ ಭಾಷೆಗಳಲ್ಲಿ ಕಂಡುಬರುತ್ತದೆ. ಪದಮಧ್ಯ ಸ್ವರಲೋಪವು ವ್ಯಂಜನಗಳೆರಡನ್ನು ಒತ್ತಾಗಿಸಿ ವ್ಯಂಜನದ್ವಿತ್ವಕ್ಕೆ ಎಡೆ ಮಾಡಿಕೊಡುತ್ತದೆ.

ಕನ್ನಡಭಾಷೆಯ ಕರಡಿ, ಕರಡ, ಹರಡು, ಬರಡು, ಕೊರಡು. ಕುರುಡ ಇತ್ಯಾದಿ ಪದಗಳನ್ನು ಪ್ರಮಾಣಭಾಷೆಯಿಂದ ಆಡುನುಡಿಗೆ ಬಳಸಿದಾಗ ಎರಡನೆಯ ಅಕ್ಷರದ ಸ್ವರಲೋಪವಾಗುತ್ತದೆ. ಈ ಲೋಪದಿಂದಾಗಿ ಕರ್ಡಿ, ಕರ್ಡ. ಹರ್ಡು, ಬರ್ಡು, ಕೊರ್ಡು, ಕುರ್ಡ ಇತ್ಯಾದಿ ರೂಪಗಳು ನಿರ್ಮಾಣವಾಗುತ್ತವೆ. ಈ ಲೋಪವು ಮೇಲಿನ ವ್ಯಂಜನ ದ್ವಿತ್ವಕ್ಕೆ ಕಾರಣವಾಗುತ್ತದೆ. ಈ ವ್ಯಂಜನದ್ವಿತ್ವದಲ್ಲಿ ಆದಿವ್ಯಂಜನವು ಉಚ್ಚಾರಣೆಯ ದೃಷ್ಟಿಯಿಂದ ವರ್ತ್ಸ್ಯ ಕಂಪಿತ ಸತತ ವ್ಯಂಜನ. ಎರಡನೆಯದು ಮೂರ್ಧನ್ಯ ಸ್ಪರ್ಶ (?) ವ್ಯಂಜನ. ಇವೆರಡರ ನಡುವಿನ ಸ್ವರಲೋಪವಾದಾಗ ಆಡುನುಡಿಯಲ್ಲಿ ಎರಡನೆಯ ವ್ಯಂಜನವು ಆದಿವ್ಯಂಜನವ ಮೇಲೆ ಪ್ರಭಾವವನ್ನು ಬೀರುತ್ತದೆ. ಇದರಿಂದಾಗಿ ಆದಿವ್ಯಂಜನವು ಮುಂದಿನ ಉಚ್ಚಾರವನ್ನು ಅನುಲಕ್ಷಿಸಿ, ಕಂಪಿತ ಉಚ್ಚಾರಣಾ ರೀತಿಯಿಂದ ಪಾರ್ಶ್ವಿಕ ಉಚ್ಚಾರವಾಗಿ ತನ್ನ ಉಚ್ಚಾರಣಾ ರೀತಿಯಲ್ಲಿ ಬದಲಾವಣೆ ಹೊಂದುತ್ತದೆ. ಈ ಬದಲಾವಣೆಯು

ಕಳ್ಡಿ, ಕಳ್ಡ, ಹಳ್ಡು, ಬಳ್ಡು, ಕೊಳ್ಡು, ಕುಳ್ಡ ಇತ್ಯಾದಿ ರೂಪಗಳಿಗೆ ಕಾರಣವಾಗುತ್ತದೆ.

ಈ ಪದರೂಪಗಳನ್ನು ಕರ್ನಾಟಕದ ಎಲ್ಲ ಭಾಗಗಳ ಹೆಚ್ಚಿನ ಆಡುನುಡಿಗಳಲ್ಲಿ ನಾವು ಕಾಣಬಹುದು. ಕೆಲವೊಂದು ಆಡುನುಡಿಗಳು ಮಾತ್ರ ಈ ಬದಲಾವಣೆಯನ್ನು ಗ್ರಾಮ್ಯವೆಂದು ಭಾವಿಸುವ ಕಾರಣ ಸ್ವರಲೋಪಯುಕ್ತ ಕರ್ಡಿ, ಕರ್ಡ, ಹರ್ಡು ಇತ್ಯಾದಿ ರೂಪಗಳನ್ನು ಮುಂದುವರಿಸಿದ್ದು ಗೋಚರಕ್ಕೆ ಬರುತ್ತದೆ.

ಮೇಲಿನ ಉದಾಹರಣೆಗಳಲ್ಲಿ ಪ್ರಮಾಣ ಭಾಷೆಯ ಪದಗಳನ್ನು ಆಡುನುಡಿಗೆ ಸ್ವೀಕರಿಸಿದಾಗ ಅವು ಭಾಗಶಃ ಸಮರೂಪಧಾರಣೆ ಹೊಂದಿರುವುದನ್ನು ಗಮನಿಸಬಹುದು. ಕರ್ನಾಟಕದ ಉತ್ತರದ ಜಿಲ್ಲೆಗಳ ಹೆಚ್ಚಿನ ಆಡುನುಡಿಗಳಲ್ಲಿ ಈ ರೂಪಗಳ ಜೊತೆಗೆ ಕಡ್ಡಿ, ಕಡ್ಡ, ಹಡ್ಡು, ಬಡ್ಡು, ಕೊಡ್ಡು ಇತ್ಯಾದಿ ರೂಪಗಳು ಅಧಿಕವಾಗಿ ಬಳಕೆಯಲ್ಲಿವೆ. ಈ ಪ್ರದೇಶಗಳಲ್ಲಿ ರ್-ಡ್ ಕಾರಗಳ ನಡುವಿನ ಸ್ವರಲೋಪವಾದಾಗ ರ್ ಕಾರವು ಳ್ ಕಾರವಾಗುವುದರ ಮೂಲಕ ಭಾಗಶಃ ಸಮರೂಪಧಾರಣೆಯನ್ನೂ ಡ್ ಕಾರವಾಗುವುದರ ಮೂಲಕ ಪೂರ್ಣಸಮರೂಪಧಾರಣೆಯನ್ನೂ ಹೊಂದಿರುವುದು ಗಮನಿಸಬೇಕಾದ ಅಂಶ. ಈ ಬದಲಾವಣೆಗಳನ್ನು ಸ್ಥಾನಿಕ (ಏಕಕಾಲಿಕ)ವಾದ ಎರಡು ರೀತಿಯ ಸಮರೂಪಧಾರಣೆಯೆಂತಲೂ ಅಥವಾ ಐತಿಹಾಸಿಕವಾದ ಒಂದೇ ರೀತಿಯ ಬದಲಾವಣೆಯೆಂದೂ ಕೆಳಗಿನ ಸೂತ್ರಗಳ ಮುಖಾಂತರ ವಿವರಿಸಬಹುದು.

> ಕಳ್ಡ
೧) ಕರಡ > ಕರ್ಡ
> ಕಡ್ಡ

೨) ಕರಡ > ಕರ್ಡ > ಕಳ್ಡ > ಕಡ್ಡ

ಸೂತ್ರ ಒಂದರ ಪ್ರಕಾರ ಸ್ವರಲೋಪದ ನಂತರದ ಭಾಗಶಃ ಸಮರೂಪಧಾರಣೆ ಮತ್ತು ಪೂರ್ಣಸಮರೂಪಧಾರಣೆಗಳು ಏಕಕಾಲಿಕ ಬೆಳವಣಿಗೆ. ಸೂತ್ರ ಎರಡರ ಪ್ರಕಾರ ಸ್ವರಲೋಪ ನಂತರದ ಬದಲಾವಣೆಗಳು ಅನೇಕ ಕಾಲಿಕ. ಅಂದರೆ, ಒಂದರ ನಂತರ ಒಂದು ನಡೆಯುವ ಸಮರೂಪಧಾರಣೆಯ ಎರಡು ಘಟ್ಟಗಳು. ಭಾಗಶಃ ಸಮರೂಪಧಾರಣೆ ಇವರಲ್ಲಿ ಮೊದಲನೆಯ ಘಟ್ಟ, ಪೂರ್ಣಸಮರೂಪಧಾರಣೆ ಎರಡನೆಯ ಘಟ್ಟ.

ಉತ್ತರದ ಕರ್ನಾಟಕ ಪ್ರದೇಶಗಳಲ್ಲಿ ಈ ಎರಡೂ ಪ್ರಕಾರಗಳು ಪ್ರಚಲಿತವಿವೆ. ಭಾಗಶಃ ಸಮರೂಪಧಾರಣೆ ಹೊಂದಿದ ರೂಪಗಳು ಬಳಕೆಯಲ್ಲಿದ್ದರೂ

ಬಳಕೆಯು ವೃಷ್ಟಿಯಿಂದ ಪೂರ್ಣಸಮರೂಪಧಾರಣೆ ಹೊಂದಿದ ರೂಪಗಳಿಗಿಂತ ಕಡಿಮೆ ಬಳಕೆಯಲ್ಲಿವೆ. ಪೂರ್ಣಸಮರೂಪಧಾರಣೆ ಹೊಂದಿದ ರೂಪಗಳು ಪ್ರಸ್ತುತವಾಗಿ ಇಲ್ಲಿ ಹೆಚ್ಚು ಬಳಕೆಯಲ್ಲಿವೆ. ಈ ಎರಡು ಪ್ರಕಾರಗಳು ಭಿನ್ನ ಪ್ರದೇಶಗಳಿಗೆ ಸೀಮಿತವಾಗಿರದೆ ಒಂದೇ ಪ್ರದೇಶದಲ್ಲಿ ಕಂಡುಬರುವ ಕಾರಣ ಪ್ರಾದೇಶಿಕ ಪ್ರಕಾರಗಳಾಗಲಾರವು. ಈ ಎಲ್ಲ ಅಂಶಗಳನ್ನು ಗಮನಿಸಿ ಎರಡನೆಯ ಸೂತ್ರವನ್ನು ಕನ್ನಡದ ರ್–ಡ್ ಕಾರಗಳ ಸಮರೂಪಧಾರಣಾಕ್ರಿಯೆಯ ಇತಿಹಾಸದಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ.

ಕನ್ನಡದ ರ್–ಡ್ ಸಮರೂಪಧಾರಣಾ ಇತಿಹಾಸದಲ್ಲಿ ಕರ್ನಾಟಕದ ಉತ್ತರ-ದಕ್ಷಿಣ ಪ್ರದೇಶಗಳೆರಡಕ್ಕೂ ಎರಡನೆಯ ಅಕ್ಷರದ ಸ್ವರಲೋಪವು ಸಾಮಾನ್ಯಕ್ರಿಯೆಯಾಗಿದ್ದು ಕರ್ನಾಟಕದ ದಕ್ಷಿಣ ಪ್ರದೇಶಗಳಲ್ಲಿ ಮೂರು ಘಟ್ಟಗಳನ್ನು ಗುರುತಿಸಬಹುದು.

ರ–ರ್–ళ್.

ಕರಡಿ–ಕರ್ಡಿ–ಕಳ್ಡಿ ಈ ಪ್ರದೇಶಗಳಲ್ಲಿ ಸಮರೂಪಧಾರಣೆಯು ಭಾಗಶಃ ಸಮರೂಪಧಾರಣಾ ಘಟ್ಟಕ್ಕೆ ನಿಂತುಬಿಡುತ್ತದೆ. ಕರ್ನಾಟಕದ ಉತ್ತರದ ಪ್ರದೇಶಗಳಲ್ಲಿ ಇದಕ್ಕೆ ಸಂಬಂಧಿಸಿದಂತೆ ನಾಲ್ಕು ಘಟ್ಟಗಳನ್ನು ಗುರುತಿಸಬೇಕಾಗುತ್ತದೆ.

ರ–ರ್–ಳ್–ಡ್

ಕರಡಿ–ಕರ್ಡಿ–ಕಳ್ಡಿ–ಕಡ್ಡಿ.

ಕರ್ನಾಟಕದ ಉತ್ತರದ ಜಿಲ್ಲಾ ಪ್ರದೇಶಗಳಲ್ಲಿಯೇ ಧಾರವಾಡ ಉಪಭಾಷೆ, ಬೆಳಗಾವಿ ಉಪಭಾಷೆ, ರಾಯಚೂರು ಉಪಭಾಷೆ ಇತ್ಯಾದಿಯಾಗಿ ಭಿನ್ನ ಉಪಭಾಷಾ ಪ್ರದೇಶಗಳನ್ನು ಗುರುತಿಸಬಹುದಾದರೂ ಉತ್ತರದ ಕರ್ನಾಟಕವನ್ನು ದಕ್ಷಿಣವಲಯದಿಂದ ಬೇರ್ಪಡಿಸಬಹುದಾದ ಕೆಲವು ಸಮಾನ ಭಾಷಾ ಅಂಶಗಳು ಈ ಉಪಭಾಷಾ ಪ್ರದೇಶಗಳಲ್ಲಿ ಕಂಡುಬರುತ್ತವೆ. ರ್–ಡ್ ಕಾರ ವ್ಯಂಜನದ್ವಿತ್ವದ ಪೂರ್ಣಸಮರೂಪಧಾರಣೆಯು ಈ ಅಂಶಗಳಲ್ಲಿ ಒಂದು. ಕರ್ನಾಟಕದ ಉತ್ತರದ ಭಾಷಾವಲಯವನ್ನು ಗುರುತಿಸುವ ತನ್ಮೂಲಕ ಭಾಷಾಭೂಪಟವನ್ನು ಚಿತ್ರಿಸಲು ಸಹಾಯಿಸುವ ಅಂಶಗಳಲ್ಲಿ –ರ್ಡ್– ವ್ಯಂಜನದ್ವಿತ್ವದ ಪೂರ್ಣಸಮರೂಪಧಾರಣೆಯು ಪ್ರಮುಖ ಅಂಶವಾಗಬಲ್ಲುದು.

ಕೊಕಟನೂರು : ಒಂದು ಐತಿಹಾಸಿಕ ಸಮೀಕ್ಷೆ

● ವ್ಹಿ. ಎಸ್. ಮಾಳಿ

ಅಥಣಿಯಿಂದ ಪೂರ್ವಕ್ಕೆ ಸು. ೧೬ ಕಿ.ಮಿ. ದೂರದಲ್ಲಿರುವ ಕೋಕಟನೂರು, ಅಥಣಿ ತಾಲೂಕಿನ ಹಿರಿಯ ಗ್ರಾಮಗಳಲ್ಲೊಂದು. ಇತ್ತೀಚಿನ ದಿನಗಳಲ್ಲಿ ಕೊಕಟನೂರು, ಯಲ್ಲಮ್ಮನ ದೇವಸ್ಥಾನದಿಂದ ಹೆಚ್ಚು ಪ್ರಸಿದ್ಧಿ ಪಡೆಯುತೊಡಗಿದೆ. ಗ್ರಾಮದ ಪೂರ್ವಕ್ಕೆ ಸು.೩ ಕಿ.ಮೀ. ಅಂತರದಲ್ಲಿರುವ ಯಲ್ಲಮ್ಮನ ದೇವಸ್ಥಾನ ಈ ಗ್ರಾಮದ ಸಾಂಸ್ಕೃತಿಕ ಜೀವನದಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಲಿದೆ.

ಪಶ್ಚಿಮದಿಕ್ಕಿನಿಂದ ಗ್ರಾಮವನ್ನು ಪ್ರವೇಶಿಸುತ್ತಿದ್ದಂತೆಯೇ ಹಾಳು ಬಿದ್ದಿರುವ ಅರಮನೆ, ಕೋಟೆ ಕೊತ್ತಳಗಳು ವೀಕ್ಷಕರ ಗಮನ ಸೆಳೆಯುತ್ತವೆ. ಪ್ರಾಚೀನ ವೈಭವವನ್ನು ವರ್ಣಿಸುವ ತುಂಡು ಶಾಸನಗಳೂ ಜೀರ್ಣ ದೇವಾಲಯಗಳೂ, ಭಗ್ನ ಮೂರ್ತಿಗಳೂ ಊರಮುಂದಿನ ಹಾಳುಪ್ರದೇಶದಲ್ಲಿ ಬಿದ್ದುಕೊಂಡಿವೆ. ಪ್ರಾಕ್ತನ ಇಲಾಖೆ ಮತ್ತು ಸಂಶೋಧಕರಿಂದ ವಂಚಿತಗೊಂಡು ಅಜ್ಞಾತವಾಸ ಅನುಭವಿಸುತ್ತಿರುವ ಕೊಕಟನೂರಿನ ಇತಿಹಾಸದತ್ತ ವಿದ್ವಾಂಸರ ಗಮನಸೆಳೆಯುವುದೇ ಪ್ರಸ್ತುತ ಲೇಖನದ ಉದ್ದೇಶ.

ಜನಜೀವನದಲ್ಲಿ ನೀರಿನ ಪಾತ್ರ ಮಹತ್ತರವಾದುದು. ಸಾಮಾನ್ಯವಾಗಿ ನೀರಿನ ನೆರೆಯ ಮಗ್ಗುಲಲ್ಲಿಯೇ ಶಾಶ್ವತ ವಸತಿ ನೆಲೆಗಳು ಹುಟ್ಟಿ ಬೆಳೆಯುತ್ತವೆ. ಈ ಗ್ರಾಮವಾದರೂ 'ಹಿರಿಹಳ್ಳ' ವೆಂದು ಖ್ಯಾತಿಪೊಂದಿದ ತಾಲೂಕಿನ ದೊಡ್ಡ ಹಳ್ಳದ ಬಲದಂಡೆಯ ಮೇಲೆ ಹಬ್ಬಿಕೊಂಡಿದೆ. ಗ್ರಾಮನಾಮ ನಿಷ್ಪತ್ತಿ ಗ್ರಾಮದ ಅಧ್ಯಯನದಲ್ಲಿ ಮೊದಲನೆಯ ಅಂಶ. ಗ್ರಾಮನಾಮ ನಿಷ್ಪತ್ತಿ ಕುರಿತು ಅಲ್ಲಿಯ ಗ್ರಾಮಸ್ಥರನ್ನು ಕೇಳಿದಾಗ ಅವರು ಹೀಗೆ ಹೇಳುತ್ತಾರೆ–ಊರಿನ ಪಶ್ಚಿಮಕ್ಕಿರುವ ಮೊರಡಿಯಲ್ಲಿ ಕೊಕಟೆಗಳು (ಒಂದು ಜಾತಿಯ ಬೇಟೆ ಪ್ರಾಣಿಗಳು) ಬಹಳ. ಅವುಗಳನ್ನು ದಾಸರು ಬೇಟೆಯಾಡುತ್ತಾರೆ. ಇದರಿಂದ 'ಕೊಕಟ್ಯಾನ ಊರು' ಎಂಬ ಅಭಿಧಾನ ರೂಢಿಗತವಾಯಿತು. ಮುಂದೆ ಇದೇ ಕೊಕಟನೂರು ಆಯಿತು. ಡಾ॥ ಎಂ. ಎಂ. ಕಲಬುರ್ಗಿಯವರ ಪ್ರಕಾರ ಇದು ಪಾಮರ ನಿಷ್ಪತ್ತಿ. ಲಿಖಿತ ದಾಖಲೆಗಳ ಆಧಾರದಿಂದ ನಿಜನಿಷ್ಪತ್ತಿಯನ್ನು ಹುಡುಕಬೇಕಾಗುತ್ತದೆ. ಕೋಕಟನೂರಿನ ಉಪಲಬ್ಧ ಅತಿ ಪ್ರಾಚೀನ ಶಾಸನದಲ್ಲಿ (ಕ್ರಿ. ಶ. ೧೦೫೦-೫೧) ಈ ಗ್ರಾಮವನ್ನು 'ಕೊಗ್ಗಣಟನೂರು' ಎಂದು ಕರೆಯಲಾಗಿದೆ. ಅಲ್ಲಿಯ ಕ್ರಿ. ಶ. ೧೧೬೯ರ ಶಾಸನದಲ್ಲಿ 'ಕೊಗಣಟನೂರು'ವೆಂದೂ. ಕ್ರಿ. ಶ. ೧೨೫೫ರ ಶಾಸನದಲ್ಲಿ

'ಕೊಗ್ಗಟನಗ್ರಹಾರ'ವೆಂದೂ ಕರೆಯಲಾಗಿದೆ. ಈ ಗ್ರಾಮದ ಮೂಲ ಹೆಸರು ಕೊಗ್ಗರ್ಟನೂರು. ಕೊಗ್ಗರ್ಟನೆಂಬ ವ್ಯಕ್ತಿ ಈ ಗ್ರಾಮ ಸ್ಥಾಪನೆಗೆ ಕಾರಣನಾಗಿರಬಹುದು. ಅವನಿಂದ ಈ ಗ್ರಾಮಕ್ಕೆ ಆ ಹೆಸರು ಬಂದಿದೆ. ಕೊಗ್ಗರ್ಟನೂರು> ಕೊಗ್ಗಟನೂರು> ಕೊಗಟನೂರು> ಕೊಕಟನೂರು ಆಯಿತು.

ಕರಹಡ ನಾಲ್ವಾಸಿರದ ಉಪವಿಭಾಗ ಕನಂಬಡೆ ಮುನ್ನೂರು. ಕೊಗ್ಗರ್ಟನೂರು ಕನಂಬಡೆ ಮುನ್ನೂರಲ್ಲಿಯ ಒಂದು ಅಗ್ರಹಾರ. ಅಗ್ರಹಾರವೆಂದರೆ ವಿದ್ಯಾವಂತ ಬ್ರಾಹ್ಮಣರು ನೆಲೆಗೊಳ್ಳಲು ರಾಜನು 'ಸರ್ವನಮಸ್ಯ'ವಾಗಿ ಬಿಟ್ಟ ಗ್ರಾಮ. ಆ ಗ್ರಾಮದಿಂದ ರಾಜಾದಾಯಕ್ಕೆ ಸಂದಾಯವಾಗಬೇಕಾಗಿದ್ದ ಆದಾಯ ಆ ಬ್ರಾಹ್ಮಣರಿಗೆ ಸಲ್ಲುತ್ತದೆ. ಈ ಅಗ್ರಹಾರದ ಮಹಾಜನರ ಸಂಖ್ಯೆಯೆಷ್ಟಿ-ತ್ತೆಂಬುದು ಶಾಸನಗಳಿಂದ ತಿಳಿದುಬರುವುದಿಲ್ಲ.

ಇಲ್ಲಿಯ ಉಪಲಬ್ಧ ಶಾಸನಗಳ ಒಟ್ಟು ಸಂಖ್ಯೆ ೯. ಇನ್ನೂ ಅನೇಕ ಶಾಸನಗಳು ಸಿಗುವ ಸಂಭವವುಂಟು. ಉಪಲಬ್ಧ ಶಾಸನಗಳಲ್ಲಿ ಒಟ್ಟು ೭ ಶಾಸನಗಳು ಸುಸ್ಥಿತಿಯಲ್ಲಿದ್ದು, ಉಳಿದೆರಡು ಬರೀ ಅವಶೇಷಗಳು ಮಾತ್ರ. ಇವುಗಳಲ್ಲಿ ಒಂದು ಕಲ್ಯಾಣ ಚಾಲುಕ್ಯರಿಗೆ, ೩ ಕಲಚೂರ್ಯರಿಗೆ ಮತ್ತು ೨ ದೇವಗಿರಿ ಯಾದವರಿಗೆ ಸಂಬಂಧಪಟ್ಟಿವೆ. ಉಳಿದ ಶಾಸನಗಳು ಸಂಪೂರ್ಣ ವಿಕಾರಗೊಂಡಿದ್ದು, ರಾಜಮನೆತನಗಳ ವಿಷಯ ಕಾಣದೊರೆಯಲಾರದು.

ಕ್ರಿ. ಶ. ಸು. ೧೦೫೦–೫೧ರಲ್ಲಿ ರಚಿತಗೊಂಡ ಶಾಸನ, ಕ. ಚಾಲುಕ್ಯ ಸಾಮ್ರಾಟ ತ್ರೈಲೋಕ್ಯಮಲ್ಲನಿಗೆ ಸಂಬಂಧಿಸಿದ್ದು, 'ಕಲ್ಯಾಣ' ಚಾಲುಕ್ಯರ ರಾಜಧಾನಿಯಾಗಿತ್ತೆಂದು ಹೇಳುವ ಉಪಲಬ್ಧ ಪ್ರಪ್ರಥಮ ಶಾಸನ. ಕರಹಡ ನಾಲ್ಸಾಸಿರ ಮತ್ತು ವಿರಿಂಜೆ ಮೂಸಾಸಿರಗಳನ್ನು 'ಬೀಡಾನುವೃತ್ತಿ'ಯಿಂದ ಆಳುತ್ತಿದ್ದ ತ್ರೈಲೋಕ್ಯಮಲ್ಲನ ಮಹಾಮಂಡಳೇಶ್ವರ ಜೋಗಪಯ್ಯರಸ ಹಾಗೂ ಅವನ ರಾಣಿ ಪೊಲ್ಲಿಕಬ್ಬೆಯರು ತ್ರೈಪುರುಷದೇವಾಲಯಕ್ಕೆ ದಾನಬಿಟ್ಟ ವಿಷಯ ಈ ಶಾಸನದಲ್ಲಿದೆ.

ಕಲಚೂರ್ಯರ ೩ ಶಾಸನಗಳಲ್ಲಿ ೨ ಬಿಜ್ಜಳನ ಕಾಲದಲ್ಲಿ ರಚಿತಗೊಂಡಿದ್ದರೆ. ೧ ಅವನ ಮಗ ರಾಯಮುರಾರಿ ಸೋವಿದೇವನ ಕಾಲದಲ್ಲಿ ರಚಿಸಲ್ಪಟ್ಟಿದೆ. ಮೊದಲೆರಡು ಶಾಸನಗಳಲ್ಲಿ ತೇದಿ ನಷ್ಟವಾಗಿದೆ. ಈಗಿನ ಕಲ್ಮೇಶ್ವರ ದೇವಾಲಯದ ಹೊರಗೋಡೆಯಲ್ಲಿರುವ ತುಂಡು ಶಾಸನದಲ್ಲಿ ಪೆರ್ಮಾಡಿಯ ಮಗ ಬಿಜ್ಜಳನಿಗೆ ಮೈಲುಗಿಯೆಂಬ ಸೋದರನಿರುವುದಾಗಿ ಹೇಳಲಾಗಿದೆ. ಪಾಪನಾಶಿ ದೇವಾಲಯದ ಬಾಗಿಲು ಚೌಕಟ್ಟಿಗಿರುವ ಶಾಸನವೊಂದು ಸಂಪೂರ್ಣ ನಾಶವಾಗಿದ್ದು. ಅವರಲ್ಲಿ ಬಿಜ್ಜಳ ಪಾಪನಾಶಿ ದೇವಾಲಯಕ್ಕೆ ವತ್ತಿ ಬಿಟ್ಟ ಅಸ್ಪಷ್ಟ ವಿಷಯವಿದೆ. ಇದೇ

ದೇವಾಲಯದ ಕ್ರಿ. ಶ. ೧೧೭೪ರ ಶಾಸನ ಬಿಜ್ಜಳನ ತದನಂತರ ಪಟ್ಟಕ್ಕೆ ಬಂದ ರಾಯಮುರಾರಿ ಸೋವಿದೇವನ ಕಾಲದ್ದಾಗಿರುತ್ತದೆ.

ಕಲ್ಮೇಶ್ವರ ದೇವಾಲಯದಲ್ಲಿರುವ ಕ್ರಿ. ಶ. ೧೨೩೫ರ ಶಾಸನದಲ್ಲಿ ಯಾದವ ಚಕ್ರವರ್ತಿ ಸಿಂಘನದೇವನ ಪ್ರಸ್ತಾಪವಿದ್ದರೆ, ಪಾಪನಾಶಿ ದೇವಾಲಯದಲ್ಲಿರುವ ಕ್ರಿ. ಶ. ೧೩೦೬ರ ಶಾಸನದಲ್ಲಿ ಯಾದವ ಪ್ರೌಢಪ್ರತಾಪ ಚಕ್ರವರ್ತಿ ರಾಮಚಂದ್ರನ ಉಲ್ಲೇಖವಿದೆ.

ಲಿಖಿತ ದಾಖಲೆಗಳಿಗನುಗುಣವಾಗಿ ಕಾಲಕ್ರಮದಂತೆ ಕಲ್ಯಾಣ ಚಾಲುಕ್ಯ, ಕಲಚೂರ್ಯ, ದೇವಗಿರಿ ಯಾದವರ ಆಡಳಿತಕ್ಕೆ ಒಳಪಟ್ಟ ಕೊಕಟನೂರು ಯಾದವರ ಅಸ್ತಂಗತವರೊಂದಿಗೆ ವಿಜಾಪುರ ಸುಲ್ತಾನರ ಆಧಿಪತ್ಯಕ್ಕೆ ಸೇರಿತು. ಉತ್ತರ ಕರ್ನಾಟಕದ ಭೀಮಾನದಿಯ ತೀರದ ಅವರಾದಿಗ್ರಾಮದ ಗ್ರಾಮಾಧಿಪತಿ ಚಂದ್ರಗೌಡನ ಮಗ ವಿಟ್ಟಗೌಡನ ಶೌರ್ಯ ಸಾಹಸಗಳನ್ನು ಮೆಚ್ಚಿದ ವಿಜಾಪುರದ ಒಂದನೆಯ ಇಬ್ರಾಹಿಂ ಆದಿಲ್‌ಷಾ ಅವನಿಗೆ ಕೊಕಟನೂರು ಪರಗಣೆಯನ್ನು ಇನಾಮವಾಗಿ ನೀಡಿದನು. ತಾಳಿಕೋಟೆಯ ಕಾಳಗದಲ್ಲಿ ಶೌರ್ಯವನ್ನು ಮೆರೆದು.ರಾಜನನ್ನು ಮೆಚ್ಚಿಸಿದ ವಿಟ್ಟಗೌಡ (೧೫೬೫–೧೫೯೦) ಬೆಳವಲನಾಡನ್ನು ಪಡೆದನು. ಇವನು ಕೂಡು (ಕುಡಿ) ಒಕ್ಕಲಿಗ ಮತಸ್ಥ. ಇವನ ವಂಶಜರಾದ ಇಲ್ಲಿಯ ದೇಸಾಯಿಯವರು ಹಲವು ವರ್ಷ ಆಳಿದರು. ಇವರ ಸಮಗ್ರ ಅಭ್ಯಾಸದ ಅವಶ್ಯಕತೆಯಿದೆ. ಮುಸ್ಲಿಂರ ಪತನಾನಂತರ ಇದು ಮರಾಠರ ಆಡಳಿತಕ್ಕೆ ಒಳಪಟ್ಟಿತು. ಕ್ರಿ. ಶ. ೧೭ನೆಯ ಶತಮಾನದಲ್ಲಿ ಪ್ರೋಳ ಸರಕಾರ ಊರಿನ ಸುತ್ತಲೂ ಕೋಟೆ ನಿರ್ಮಿಸಿ ಅರಮನೆಯನ್ನು ಕಟ್ಟಿಸಿದನು. ಈಗ ಊರಿನ ಪಶ್ಚಿಮ ಹೊರವಲಯದಲ್ಲಿ ಹಾಳುಬಿದ್ದ ಕೋಟೆ ಕೊತ್ತಳಗಳು ಇವನೇ ನಿರ್ಮಿಸಿದವು. ಇಂಗ್ಲೀಷರ ಆಡಳಿತ ಕಾಲದಲ್ಲಿ ಇದು ಮುಂಬಯಿ ಪ್ರಾಂತಕ್ಕೆ ಸೇರಿತ್ತು.

"ಬಹುಧರ್ಮಕ್ಷೇತ್ರನಿವಹಕ್ಕಾದೊಂಬಲಂ ಕರ್ನಾಟಕಂ" ಎಂಬ ಮಾತು ಕೊಕಟನೂರಿಗೆ ಅಕ್ಷರಶಃ ಅನ್ವಯಿಸುತ್ತದೆ. ಇದು ಸರ್ವಧರ್ಮಗಳ ಸಂಗಮವಾಗಿತ್ತೆಂಬುದಕ್ಕೆ ಅಲ್ಲಿದ್ದ ತ್ರೈಪುರುಷ ದೇವಾಲಯವೇ ಹಿರಿಯ ಸಾಕ್ಷಿ.

ಹರಿ, ಹರ, ಹಿರಣ್ಯಗರ್ಭರ ತ್ರೈಪುರುಷ ದೇವಾಲಯವನ್ನು ಈ ಗ್ರಾಮದ ವೈಶ್ಯಾಗ್ರಣಿ ಕೂಚಿಸೆಟ್ಟಿ ಕಟ್ಟಿಸಿದ ಸಂಗತಿ ಕ್ರಿ. ಶ. ೧೦೫೦–೫೧ರ ಶಾಸನ ಹೇಳುತ್ತದೆ. ಮಂಡಳೀಶ ಜೋಗಪಯ್ಯರಸನು ಜನ್ನವಾಡಗ್ರಾಮವನ್ನು ಆ ದೇವರಿಗೆ ಸಂಕ್ರಾಂತಿ ಪರ್ವ ನಿಮಿತ್ತವಾಗಿ ಬಿಟ್ಟುಕೊಟ್ಟರು. ಕೂಚಿಸೆಟ್ಟಿಯೂ ಆ ದೇವರಿಗೆ ದಾನ ಬಿಡುತ್ತಾನೆ. ಈಗ ಇಲ್ಲಿ ತ್ರೈಪುರುಷ ದೇವಾಲಯವಿಲ್ಲ. ಆದರೆ ಹೂಗಾರ

ಓಣಿಯಲ್ಲಿ ಈ ದೇವಾಲಯದ ಅವಶೇಷಗಳನ್ನು ನೋಡಬಹುದಾಗಿದೆ. ಈ ಸಂಗತಿ-
ಗಳನ್ನು ತಿಳಿಸುವ ಶಾಸನ ಮಣ್ಣಿನಲ್ಲಿ ಹೂಳಲ್ಪಟ್ಟಿದೆಯಂತೆ ?

ಬಿಜ್ಜಳನಿಂದ ಮತ್ತು ಅವನ ಮಗ ಸೋವಿದೇವನಿಂದ ದತ್ತಿಯನ್ನು ಪಡೆದ ಪಾಪನಾಶಿ ದೇವಾಲಯ. ಗ್ರಾಮದ ಈಶಾನ್ಯದಲ್ಲಿ ಹಿರಿಹಳ್ಳದ ಬಲದಂಡೆಯ ಮೇಲಿದೆ. ಇದು ಹಿಂದೆ ಪ್ರಸಿದ್ಧ ಮತ್ತು ಪವಿತ್ರ ಸ್ಥಾನವಾಗಿರಬಹುದೆಂದು ಅದರ ಹೆಸರಿನ ಮೇಲಿಂದ ಊಹಿಸಬಹುದಾಗಿದೆ. ಸು. ೨೦ ವರ್ಷಗಳ ಹಿಂದೆಯಷ್ಟೇ ಜೀರ್ಣೋದ್ಧಾರಗೊಂಡು ನಾಲ್ಕು ಚಿಕ್ಕಗೂಡುಗಳಾಗಿ ಮಾರ್ಪಟ್ಟಿರುವ ಈ ದೇವಾ-ಲಯದ ಬಳಿ ಮಡುವಿದ್ದು, ಪಾಪನಾಶಕ್ಕಾಗಿ ಜನರು ಮೊದಲು ಅಲ್ಲಿ ಸ್ನಾನಮಾಡಿ ದೇವರ ದರ್ಶನ ಪಡೆಯುತ್ತಿದ್ದಂತೆ ಕಾಣುತ್ತದೆ. ತೀವ್ರತರವಾದ ಬೇಸಿಗೆಯಲ್ಲಿಯೂ ತುಂಬಿನಿಲ್ಲುವ ಈ ಮಡು ಈಗ ನಾಲ್ಕು ಕೊಡಗಳಷ್ಟು ಮಾತ್ರ ನೀರನ್ನು ಹೊಂದಿದೆ. ಪಾಪನಾಶಿ ದೇವಾಲಯಕ್ಕೆ ಹೊಂದಿ ಒಂದು ಮಠವಿದ್ದು. ಅದೊಂದು ಪ್ರಸಿದ್ಧ ವಿದ್ಯಾಕೇಂದ್ರವೂ ಆಗಿತ್ತು. ಕ್ರಿ. ಶ. ೧೧೬೯ರ ಅಲ್ಲಿಯ ಶಾಸನದಲ್ಲಿ ಸೋವಿದೇವ, ಆಚಾರ್ಯ ವಿದ್ಯಾರಾಶಿಪಂಡಿತರಿಗೆ ಗ್ರಾಮದಾನ ಬಿಟ್ಟ ವಿಷಯವಿದೆ. ವಿದ್ಯಾರಾಶಿ ಪಂಡಿತರು ಪಾಪನಾಶಿ ದೇವಾಲಯದ ಸ್ಥಾಪನಾಚಾರ್ಯರಾಗಿರಬಹುದು.

ಪಾಪನಾಶಿ ದೇವಾಲಯದಿಂದ ಪೂರ್ವಕ್ಕೆ ಸುಮಾರು ಒಂದು ಫರ್ಲಾಂಗ ದೂರದಲ್ಲಿರುವ ಈಗಿನ ಸಿದ್ಧೇಶ್ವರ ದೇವಾಲಯವೇ ಪ್ರಾಚೀನಕಾಲದ ಭಾವಸುದ್ಧ ದೇವಾಲಯವಾಗಿರಬಹುದು. ಈ ದೇವಾಲಯ ಈಗ ಜೀರ್ಣಗೊಂಡಿದ್ದು, ಕಲ್ಲು-ಗಳನ್ನು ಸಾವಳಗಿಗೆ ಸಾಗಿಸಲಾಗಿದೆ. ಭಾವಸುದ್ಧದೇವರಿಗೆ ಕೊಕಟನೂರಿನ ಪ್ರಭು ಪಾರ್ವರ ಬಲ್ಲಹಮಲ್ಲದೇವನು ಹಾಗೂ ಕನಂಬಡೆ ಮುನ್ನೂರರ ಅಧಿಪತಿ ನಾಗ-ರಸರು ಭೂದಾನ ಮಾಡಿದ ಉಲ್ಲೇಖ ಈಗ ಕಲ್ಮೇಶ್ವರ ದೇವಾಲಯದಲ್ಲಿರುವ ಕ್ರಿ. ಶ. ೧೨೩೫ರ ಶಾಸನದಲ್ಲಿದೆ.

ಮೂರು ತಿಂಗಳು ಶೈವ ವ್ರತಾಚರಣೆಯಲ್ಲಿ ಮಗ್ನನಾಗಿ ಮಡಿದ ಲಿಂಗಪ್ರೇಮಿ ಮಲ್ಲಿದೇವನ ಸದ್ಭಕ್ತಿಯ ವರ್ಣನೆ ಶಾಸನದಲ್ಲಿ ತುಂಬ ಸೊಗಸಾಗಿದೆ.

"ಅಷ್ಟವಿಧಾರ್ಚನೆ ನೇಮಂ
ನಿಷ್ಠೆಯ ಲಿಂಗಾನುಪ್ರೇಮುಭಯ ಭಕ್ತಿಚಲಂ
ಸೃಷ್ಟಿಗತಿ ಹೊಸತು ಶಿವಪಥ
ದೃಷ್ಟಾಂತಂ ಕಂಡು ಭಾಯ್ಯಲಿಂಗನುಗೊಂಡಂ ॥

ಪಾಪನಾಶಿ ದೇವಾಲಯದಲ್ಲಿರುವ ಕ್ರಿ. ಶ. ೧೩೦೬ರ ಶಾಸನವೊಂದು, ಯಾದವ ಪ್ರೌಢಪ್ರತಾಪ ಚಕ್ರವರ್ತಿ ರಾಮಚಂದ್ರದೇವರ ಮಹಾಪ್ರಧಾನಿ.

ಸರ್ವಾಧಿಕಾರಿ ರಂಗನಾಥದೇವರ ಆಜ್ಞೆಯಂತೆ ಪ್ರಭು ಮೂಲಿಗರ ಸಮಸ್ತ ಮಾನ್ಯಕಾರ ಸನುಮತದಿಂದ ಕುಡಿಯರ ಕಲ್ಲಿಗೌಡ, ಹೊಲ್ಲಗೊಂಡ, ನಾಗನಗೌಡ, ಭಾಯಿಗೌಡ, ಮಲ್ಲಗೊಂಡ ಮುಖ್ಯ ಸಮಸ್ತರು. 'ಬೆಳಲಿಗೆ' (ಬೆಳ್ಳಿಗೆ)ಯ ಮೂಲಸ್ಥಾನ ಕಲ್ಲಿನಾಥದೇವರಿಗೆ ಭೂಮಿ ಹಾಗೂ ನಿವೇಶನ ದಾನ ನೀಡಿದ ವಿಷಯವನ್ನು ತಿಳಿಸುತ್ತದೆ. ಇದು ಆ ಗ್ರಾಮದ ಜನರ ಭಯ ಭಕ್ತಿಗಳನ್ನು ಪ್ರಕಟಿಸುತ್ತದೆ.

ಕುಂಬಾರ ಓಣಿಯಲ್ಲಿ ಪೂರ್ವಕ್ಕೆ ಮುಖ ಮಾಡಿ ಇರುವ ಕಲ್ಮೇಶ್ವರನ ತ್ರಿಕೂಟ ದೇವಾಲಯವೇ ಪ್ರಾಚೀನ ಚಂದಿಕೇಶ್ವರ ದೇವಸ್ಥಾನ. ಪ್ರಾಚೀನ ಶಿಲ್ಪಕಲೆಯ ಒಂದು ಅಪೂರ್ವ ಕಲಾಕೃತಿಯಾಗಿರುವ ಈ ದೇವಾಲಯದ ಮುಖ್ಯ ಗರ್ಭಗೃಹದಲ್ಲಿ ಲಿಂಗವಿದ್ದು, ಪಕ್ಕದ ಎರಡೂ ಗರ್ಭಗೃಹಗಳೂ ಖಾಲಿಯಿವೆ. ಹೊಯ್ಸಳ ಮಾದರಿಯ ದೇವಾಲಯವಿದ್ದು ಒಳ-ಹೊರಗು ಸುಂದರ ಮೂರ್ತಿಗಳ ಕೆತ್ತನೆಯಿಂದ ಭವ್ಯವಾಗಿದೆ. ಇದನ್ನೊಂದು ಬಿಟ್ಟರೆ ಈ ಗ್ರಾಮದಲ್ಲಿ ಯಾವ ಪ್ರಾಚೀನ ವಾಸ್ತುಗಳೂ ಸುಸ್ಥಿತಿಯಲ್ಲಿಲ್ಲ. ಈ ದೇವಾಲಯವಾದರೂ ಜೀರ್ಣೋದ್ಧಾರಗೊಂಡಂತಿದೆ.

ಚಂದಿಕೇಶ್ವರ ದೇವಸ್ಥಾನದಲ್ಲಿ ನಡೆಯುವ ಸೌಪರ್ಣದಲ್ಲಿ ಮಹಾಜನರ ತಾಂಬೂಲಕ್ಕಾಗಿ ಮಹಾಪ್ರಧಾನಿ ದಂಡನಾಯಕರ ಅಕ್ಕನ ಮಗ ನಾಗರಸ ಮತ್ತು ಸವದಿಯ ಚಿಬಲರಾಜ ಹಾಗೂ ಲಕ್ಕಿಯಪ್ಪ ಹಣವನ್ನು ದಾನ ನೀಡಿದ ಉಲ್ಲೇಖ ಕ್ರಿ. ಶ. ೧೩ನೇ ಶತಮಾನದ ಕಲ್ಮೇಶ್ವರ ದೇವಾಲಯದ ಶಾಸನವೊಂದರಲ್ಲಿ ಬರುತ್ತದೆ.

ಚೀರೇಶ್ವರ, ಮಹಾದೇವ, ಹನುಮಂತ, ಯಲ್ಲಮ್ಮ, ಕೋಣಮ್ಮ, ಚಂದ್ರಪ್ಪ, ದುರ್ಗವ್ವ–ಇವು ಇಲ್ಲಿಯ ಆಧುನಿಕ ಪ್ರಮುಖ ದೇವಾಲಯಗಳು.

ಮಹಾವೀರ ತೀರ್ಥಂಕರರ ಹೊಸ ಬಸದಿ ಬ್ರಾಹ್ಮಣರ ಓಣಿಯ ಪಕ್ಕದಲ್ಲಿದೆ. ಪ್ರಾಚೀನಕಾಲದಲ್ಲಿಯೂ ಬಸದಿ ಇಲ್ಲದಿದ್ದಿರಬಹುದಾದರೂ ಉಲ್ಲೇಖನೀಯ ಸ್ಪಷ್ಟ ಸಾಮಗ್ರಿ ಲಭ್ಯವಿಲ್ಲ. ಹನುಮಂತದೇವರ ಗುಡಿಯ ಮುಂದೆ ಹಾಳು ಮಣ್ಣಿನಲ್ಲಿ ಹೂತುಕೊಂಡಿರುವ ನಿಷಧಿಗಲ್ಲಿನ ಮೇಲೆ, ಸಮಾಧಿಮರಣದಿಂದ ಮುಡುಪಿದ ಜೈನವ್ರತಸ್ಥನ ವಿಷಯ ತಿಳಿಸುವ ಶಾಸನವಿದ್ದು ವಿಕಾರಗೊಂಡಿದೆ. ಇಲ್ಲಿ ಶೈವ, ವೀರಶೈವದಂತೆ ಜೈನಧರ್ಮವೂ ಪ್ರಬಲವಾಗಿತ್ತು.

ಈಗ ಸದ್ಯ ಇಲ್ಲಿ ಮೂರು ಮಠಗಳಿದ್ದು, ಅವುಗಳಲ್ಲೊಂದು ವಿರಕ್ತಮಠವಿದೆ. ಅದು ಕನಮಡಿಯ ಶಾಖಾಮಠ. ಈ ಎಲ್ಲ ಮಠಗಳು ಸಂಪೂರ್ಣ ಜೀರ್ಣ

ಗೊಂಡಿದ್ದು, ಬರಿ ಅವಶೇಷಗಳಾಗಿ ಉಳಿದಿವೆ. ಸುಸ್ಥಿತಿಯಲ್ಲಿರುವ ನಾಲ್ಕು ಮಸೀದೆಗಳು ಇಲ್ಲಿವೆ. ಒಟ್ಟಿನಲ್ಲಿ ಈ ಗ್ರಾಮ ಕರ್ನಾಟಕದ ಪ್ರಮುಖ ಮತ-ಧರ್ಮಗಳ ತವರೂರು.

ಒಂದು ಜನಾಂಗದ ಏಳಿಗೆಯಲ್ಲಿ ವಿದ್ಯೆಯ ಪಾತ್ರ ಪ್ರಮುಖವಾದುದು ಮತ್ತು ವಿಶಿಷ್ಟವಾದುದು ಅಗ್ರಹಾರಗಳು ಪ್ರಾಚೀನ ಕರ್ನಾಟಕದ ವಿದ್ಯಾಕೇಂದ್ರಗಳು ಎಂಬ ಸಂಗತಿ ಜನಜನಿತವಾಗಿದೆ. ಆದರೆ ಈ ವಿಷಯದಲ್ಲಿ ಸಂಶಯ ಬರುತ್ತಿದ್ದು, ಎಲ್ಲ ಅಗ್ರಹಾರಗಳೂ ವಿದ್ಯಾಕೇಂದ್ರಗಳಾಗಿರಲಿಕ್ಕಿಲ್ಲ. ಅಗ್ರಹಾರದ ಮಹಾಜನರ ವರ್ಣನೆ ರಾಜರ ಬಿರುದಾವಳಿಯಂತೆ ಸಾಂಪ್ರದಾಯಿಕವಾಗಿದ್ದು, ಎಲ್ಲ ಮಹಾಜನರು ಅಧ್ಯಾಪನಕಾರ್ಯ ಮಾಡುತ್ತಿರಲಿಲ್ಲ. ಕೆಲವು ಅಗ್ರಹಾರಗಳಲ್ಲಿ ಮಾತ್ರ ವಿದ್ಯಾಭ್ಯಾಸ ಸೌಕರ್ಯವಿತ್ತು. ಅಂಥಲ್ಲೆಲ್ಲ ತ್ರೈಪುರುಷ ದೇವಾಲಯವಿದ್ದು, ಅದು ವಿದ್ಯಾಭ್ಯಾಸದ ಕೇಂದ್ರವಾಗಿತ್ತು. ಇಲ್ಲಿ ಓದುವ ವಿದ್ಯಾರ್ಥಿಗಳಲ್ಲಿ ಶೈವ ಮತ್ತು ವೈಷ್ಣವ ಎರಡೂ ಮತಗಳಲ್ಲಿ ಭಕ್ತಿ, ನಿಷ್ಠೆ, ಆದರಭಾವ ದೃಢೀಕರಿಸುವ ಸಲುವಾಗಿ ತ್ರೈಪುರುಷದೇವರ (ಶಿವ, ವಿಷ್ಣು, ಬ್ರಹ್ಮ) ಪ್ರತಿಷ್ಠಾಪನೆ ಮಾಡುತ್ತಿದ್ದರು. ಕೊಗ್ಗಟನೂರಿನ ವೈಶ್ಯಾಗ್ರಣಿ ಕೂಚಿಶೆಟ್ಟಿ ಇಲ್ಲಿ ತ್ರೈಪುರುಷ ದೇವಾಲಯವನ್ನು ನಿರ್ಮಿಸಿ, ಅಲ್ಲಿ ಓದುವ ವಿದ್ಯಾರ್ಥಿಗಳಿಗೂ, ಓದಿಸುವ ಜನರಿಗೂ ದಾನಬಿಟ್ಟ ವಿಷಯ, ಕ್ರಿ. ಶ. ೧೦೫೦-೫೧ರ ಶಾಸನದಲ್ಲಿ ವರ್ಣಿಸಲಾಗಿದೆ.

> "ಸುರರಿತು ವಿಮಾನವೆಂದಿರ
> ಲೀ......ಕೂಚಸೆಟ್ಟಿ ಕೊಗ್ಗಟನೂರೊಳ್
> ಧರೆಗೆ ಪಡಿಚನ್ದವಾಗಿರೆ
> ನಿರತಂ ತ್ರೈಪುರುಷಶಾಲೆಯಂ ಮಾಡಿಸಿದಂ"

ಅಲ್ಲಿದ್ದ ಎಂಟು ಜನ ನಿವಿಷ್ಟರು (ಅಧ್ಯಾಪಕರು) ಪಾಲಿಸಬೇಕಾದ ನಿಯಮಗಳನ್ನು ೩ ಪದ್ಯಗಳಲ್ಲಿ ಹೇಳಲಾಗಿದೆ:

> "ಶಾಲೆಯ ಪರಿಸೂತ್ರದೊಳು
> ತ್ಮಾಲಯಮಂ ಮಾಡಿಕೊಳ್ಳುದಲ್ಲದೆ ಪೆಱತೊ
> ನ್ದಾಲಯದೊಳಿರ್ಪವಂ ಪ್ರತಿ
> ಕೂಲ ಲೋಲಂ ನಿವಿಷ್ಟನಲ್ಲಂ ದುಷ್ಟಂ"

ಕಲ್ಯಾಣ ಚಾಲುಕ್ಯಚಕ್ರವರ್ತಿ ತ್ರೈಲೋಕ್ಯಮಲ್ಲನ ಮಹಾಮಂಡಳೇಶ್ವರ ಜೋಗಮಯ್ಯರಸ ಮತ್ತು ಪೊಲ್ಲಿಕಬ್ಬೆಯರಸಿಯರು ಜನ್ಮವಾದ ಗ್ರಾಮವನ್ನು ಈ ದೇವಾಲಯಕ್ಕೆ ಬಿಟ್ಟು ಕೊಡುತ್ತಾರೆ.

ಈ (ಕ್ರಿ. ಶ. ೧೦೫೦–೫೧) ಶಾಸನವನ್ನು ಜಿನವರ್ಮ ಪಂಡಿತನೆಂಬ ಕವಿ ರಚಿಸಿದ್ದು. ಅವನಿಗೆ 'ವಿದ್ವಜ್ಜನಾಂಭೋಜಿನೀಹಂಸ' ಎಂಬ ಬಿರುದು ಇತ್ತು. ಜೋಗ ಭೂಪನ ಆಜ್ಞೆಯಂತೆ ಶಾಸನವನ್ನು ರಚಿಸಿರುವುದಾಗಿ ಹೇಳಿಕೊಂಡ ಅವನು ಪ್ರಾಯಶಃ ಜೋಗಭೂಪನ ಆಸ್ಥಾನವಲ್ಲಿದ್ದಿರಬಹುದು. ಶಾಸನ ಪ್ರೌಢ ಚಂಪೂ ಮಾರ್ಗದಲ್ಲಿದ್ದು, ತುಂಬ ಸಾಹಿತ್ಯಮಯವಾಗಿದೆ. ಈ ಕವಿಯ ಹೆಸರಿನ ಮೇಲಿಂದ ಇವನು ಜೈನಮತಸ್ಥನಾಗಿರಬಹುದೆಂದು ಊಹಿಸಬಹುದು.

ಪಾಪನಾಶಿ ದೇವಾಲಯದ ಮುಂದಿರುವ ಕ್ರಿ. ಶ. ೧೧೬೯ರ ಶಾಸನವಲ್ಲಿ ರಾಯಮುರಾರಿ ಸೋವಿದೇವ ಕನಂಬಡೆ–೩೦೦ ರಲ್ಲಿಯ ತುಂಗಳ–೩೦ರ ನಾಗರ-ಪಾಳ ಗ್ರಾಮವನ್ನು ಕೊಗ್ಗಟನೂರಿನ ಆಚಾರ್ಯ ವಿದ್ಯಾರಾಶಿ ಪಂಡಿತರಿಗೆ, ದೇವರ ಅಂಗಭೋಗ–ರಂಗಭೋಗಕ್ಕೆ, ಖಂಡಸ್ಫುಟಿತ–ಜೀರ್ಣೋದ್ಧಾರ, ಮಠದ ತಪೋಧನ ವಿದ್ಯಾರ್ಥಿಗಳಿಗೆ ದಾನ ಬಿಟ್ಟ ಉಲ್ಲೇಖವಿದ್ದು. ಅದು ಕೊಗ್ಗಟನೂರಿನಲ್ಲಿ ಒಂದು ಮಠವಿತ್ತೆಂಬ ಅಂಶದ ಮೇಲೆ ಶಾಸನ ಬೆಳಕು ಚೆಲ್ಲುತ್ತದೆ. ಅಮರಕೋಶ-ದಲ್ಲಿ 'ಮಠ' ಎಂಬುದಕ್ಕೆ ಶಿಷ್ಯರಿರುವ ಸ್ಥಳ ಎಂದು ಅರ್ಥ ಹೇಳಲಾಗಿದೆ. ಮಠದಲ್ಲಿ ಎರಡು ರೀತಿಯ ವಿದ್ಯಾರ್ಥಿಗಳಿದ್ದು, ಅವರನ್ನು ಮಾಣಿಯರು ಮತ್ತು ತಪೋಧನ-ರೆಂದು ಕರೆಯುತ್ತಿದ್ದರು. ತಪೋಧನರು ಬ್ರಹ್ಮಚರ್ಯವ್ರತಸ್ಥರಾಗಿದ್ದು, ವಿದ್ಯಾ-ರ್ಜನೆ ನಂತರ ಒಂದು ಮಠದ ಸ್ಥಾನಾಚಾರ್ಯರಾಗುತ್ತಿದ್ದರು.

ಮಠ, ಶೈವ ವಿದ್ಯಾಭ್ಯಾಸ ಕೇಂದ್ರ. ಇದು ಪ್ರಾಯಶಃ ಪಾಪನಾಶಿ ದೇವಾ-ಲಯಕ್ಕೆ ಹೊಂದಿಕೊಂಡಿದ್ದಿರಬಹುದು. ಆಚಾರ್ಯ ವಿದ್ಯಾರಾಶಿ ಪಂಡಿತರು ಅಲ್ಲಿಯ ಯತಿಗಳಾಗಿದ್ದು, ಅವರು ಪಾಪನಾಶಿ ದೇವಾಲಯದ ಸ್ಥಾನಾಚಾರ್ಯ-ರಾಗಿದ್ದಿರಬಹುದು.

ಇಂದಿನ ಕೊಕಟನೂರು ಪ್ರಾಚೀನ ಕರ್ನಾಟಕದ ಒಂದು ಪ್ರಸಿದ್ಧ ವಿದ್ಯಾಭ್ಯಾಸ ಕೇಂದ್ರವಾಗಿತ್ತೆಂಬ ವಿಷಯವನ್ನು ಕ್ರಿ. ಶ. ೧೦೫೦ ಮತ್ತು ೧೧೬೯ರ ಶಾಸನಗಳು ಸ್ಪಷ್ಟಪಡಿಸುತ್ತವೆ.

ಒಂದು ಜನಾಂಗ ತನ್ನದೇ ಆದ ಕೆಲವು ಧ್ಯೇಯ–ಆದರ್ಶಗಳನ್ನು ಹೊಂದಿದ್ದು ಅವುಗಳ ರಕ್ಷಣೆಗಾಗಿ ಪ್ರಾಣವನ್ನು ಪಣಕ್ಕೆ ಹಚ್ಚಿ ಹೋರಾಡುತ್ತದೆ. ಇಂಥ ಸಾಮಾ-ಜಿಕ ಮೌಲ್ಯಗಳ ಪೂಜನೀಯ ಫಲವಾಗಿ ವೀರಗಲ್ಲು, ಮಾಸ್ತಿಗಲ್ಲು, ನಿಷಧಿಗಲ್ಲುಗಳು ಹುಟ್ಟಿಕೊಂಡಿವೆ. ಈ ಗ್ರಾಮದಲ್ಲಿ ಅಲಿಖಿತ 'ಪೆಣ್ಬುಯ್ಯಲ್' ವೀರಗಲ್ಲೊಂದು ಕಾಣಸಿಗುತ್ತದೆ. ವೀರಗಲ್ಲಿನ ಮೊದಲನೆಯ ಪಟ್ಟಿಕೆಯಲ್ಲಿ ದ್ವಂದ್ವ ಕಾಳಗದ ಚಿತ್ರ

ವಿದ್ದು. ಅದರ ಬಲಪಕ್ಕದಲ್ಲಿ ಮಗುವನ್ನು ಎದೆಗವಚಿಕೊಂಡು ನಿಂತಿರುವ ನಗ್ನ ಸ್ತ್ರೀಯನ್ನು ಕೆತ್ತಲಾಗಿದೆ. ಬೇರೆ ಗ್ರಾಮದ ಯಾವನೋ ಒಬ್ಬ ದುಷ್ಟ ಸ್ಥಳೀಯ ಅಬಲೆಯನ್ನು ಅಪಹರಿಸಿಕೊಂಡು ಬಿಡುವ ಅಥವಾ ಅವಮಾನ ಮಾಡುವ ಪ್ರಯತ್ನ ಮಾಡಿದಾಗ ವೀರನೊಬ್ಬ ಅವನೊಂದಿಗೆ ಕಾಳಗ ಮಾಡಿ ಮಡಿದಿರುವಂತೆ ಕಾಣು-ತ್ತದೆ. ಅವನ ಸ್ಮರಣಾರ್ಥವಾಗಿ ಈ ವೀರಗಲ್ಲು ಹುಟ್ಟಿದೆ.

ಕುದುರೆ ಕಾಳಗದ ಚಿತ್ರವನ್ನು ಹೊಂದಿದ ಮತ್ತೊಂದು ವೀರಗಲ್ಲಿನ ತುಂಡ ವೊಂದು ಹನುಮಂತದೇವರ ಗುಡಿಯ ಗೋಡೆಗೆ ಹಾಕಲಾಗಿದೆ. ಇದರ ಮೇಲೆ ಶಾಸನವಿದ್ದರೂ ಓದುವ ಸ್ಥಿತಿಯಲ್ಲಿಲ್ಲ

'ಕೋಣಮ್ಮ' ಕೊಕಟನೂರಿನ ಗ್ರಾಮದ ದೇವತೆ. ಕಲ್ಮೇಶ್ವರ ದೇವಾಲಯದ ಬಲಪಕ್ಕದಲ್ಲಿಯೇ ಕೋಣಮ್ಮ ದೇವಾಲಯವಿದೆ. ಇವಳ ಮೇಲೆ ಸ್ಥಳೀಯ ಐತಿಹ್ಯವೊಂದಿದೆ.

ಪೋಳ ಸರಕಾರ ಊರಿನ ಸುತ್ತಲೂ ರಕ್ಷಕ ಗೋಡೆಯನ್ನು, ನಿರ್ಮಿಸುವ ಸಮ ಯದಲ್ಲಿ ಈಗಿನ ಕೋಣಮ್ಮ ದೇವಾಲಯದ ಮುಂದಿನ ಬುರುಜು ಪದೇ ಪದೇ ಬೀಳತೊಡಗಿತು. ಜ್ಯೋತಿಷಿಯೊಬ್ಬ ಅದಕ್ಕೆ ಗರ್ಭಿಣಿ ಸ್ತ್ರೀಯನ್ನು ಬಲಿಕೊಡಬೇಕಾಗಿ ಹೇಳಿದನು. ಸರಕಾರ ಊರಿನಲ್ಲಿ ಡಂಗುರ ಸಾರಿಸಿದನು. ಆಗ ಕೋಣಮ್ಮ ಎಂಬ ಬ್ರಾಹ್ಮಣ ಚೊಚ್ಚಿಲು ಬಸುರಿ ಊರಿನ ರಕ್ಷಣೆಗಾಗಿ ಪ್ರಾಣತ್ಯಾಗ ಮಾಡಲು ಮುಂದೆ ಬಂದಳು. ಆ ಬುರುಜಿನಲ್ಲಿ ಸಣ್ಣ ಕೋಣೆಯೊಂದನ್ನು ನಿರ್ಮಿಸಿ, ಅದರಲ್ಲಿ ಅವಳನ್ನು ಕೂಡ್ರಿಸಿ ಬಾಗಿಲು ಮುಚ್ಚಿದರು. ಕೆಲವು ದಿನ ಕಿಂಡಿಯ ಮೂಲಕ ಅವಳಿಗೆ ಆಹಾರ ನೀರು ಒದಗಿಸುತ್ತಿದ್ದು,ಅದನ್ನು ಸೇವಿಸಿ ಅವಳು ಜೀವಂತಳಾಗಿದ್ದ ಳಂತೆ. ಒಂದು ದಿನ ರಾತ್ರಿ ಗಸ್ತಿಯವರು ಅವಳ ಉಲುವು ಕೇಳಿ, ಅವಳನ್ನು ಅಣು-ಕಿಸಿದರಂತೆ. ಸಿಟ್ಟಿನಿಂದ ಕೋಣಮ್ಮ ಕೋಟೆ ಬಿದ್ದು ಹಾಳು ಬೀಳಲಿ ಎಂದು ಶಾಪ ಕೊಟ್ಟು ತೀರಿಕೊಂಡಳು. ಕೋಟೆ ಬಿದ್ದು ಹೋಯಿತು. ಹಾಳುಕೋಟೆಯ ಆ ಬುರುಜಿನಲ್ಲಿ ಈಗಲೂ ಒಂದು ಚಿಕ್ಕಮನೆಯಿದ್ದು ಅದನ್ನು ಗ್ರಾಮಸ್ಥರು 'ಕೋಣ-ಮ್ಮನ ಮನೆ' ಎಂದು ಕರೆಯುತ್ತಾರೆ. ಸರಕಾರ ಕೋಣಮ್ಮನ ಮನೆಯವರಿಗೆ ಹಾಕಿಕೊಟ್ಟ ಉಂಬಳಿ ಜಮೀನನ್ನು ಗ್ರಾಮಸ್ಥರು ತೋರಿಸುತ್ತಾರೆ.

ಕೊಕಟನೂರಿನಲ್ಲಿ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅನೇಕ ಸಾಮಗ್ರಿಗಳು ಸಿಗುವ ಸಂಭವ ಹೆಚ್ಚು. ಅವುಗಳ ಶೋಧನೆ ಹಾಗೂ ರಕ್ಷಣೆಯ ಕಾರ್ಯ ಸರಕಾರ ದೃಷ್ಟಿಯಲ್ಲಿ ಜನತೆಯದೂ ಸಹ. ಆಗ ಅದರ ಸ್ಪಷ್ಟ ಇತಿಹಾಸವನ್ನು ರಚಿಸ-ಬಹುದು. ಆ ದಿಶೆಯಲ್ಲಿ ಇದೊಂದು ಸಣ್ಣ ಪ್ರಯತ್ನ ಮಾತ್ರ.

ಗ್ರಂಥಋಣ

1) The Descriptive list of Stone & Copper Plate Inscriptions 1940-41 to 1942-43.

2) ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲದೇವನ ಕೊಕಟನೂರು ಶಾಸನ ಆರ್. ಎನ್. ಗುರವ. 'ಕರ್ನಾಟಕ ಭಾರತಿ' ૩-೨

3) The Inscriptions of north Karnatak and Kolhapur District. —K. G. Kundanagar.

4) ಕುಂದಣ (ಕೆ. ಜಿ. ಕುಂದಣಗಾರರ ಅಭಿನಂದನ ಗ್ರಂಥ).

5) ಸಿರಸಂಗಿ ಲಿಂಗರಾಜರು__ಡಾ॥ ದೇವೇಂದ್ರಕುಮಾರ ಹಕಾರಿ.

* ಈ ಲೇಖನವನ್ನು ಪರಾಮರ್ಶಿಸಿದ ಡಾ॥ ಬಿ. ಆರ್. ಹಿರೇಮಠ ಅವರಿಗೆ ಋಣಿಯಾಗಿದ್ದೇನೆ.

○

'ಒಡೀಸಿ'—ಒಂದು ವಿವೇಚನೆ

● ಗುರುಪಾದ ಮರಿಗುದ್ದಿ

[ಕರ್ನಾಟಕ ನಾಟಕ ಅಕಾಡಮಿಯು ಕನ್ನಡದಲ್ಲಿ ಇಂದು ನಾಟಕಗಳ ರಚನೆ ಕುಂಠಿತಗೊಂಡಿರುವುದನ್ನು ಅನುಲಕ್ಷಿಸಿ, ಉತ್ತೇಜನ ನೀಡುವ ವಿಚಾರದಿಂದ ರಾಜ್ಯ ಮಟ್ಟದಲ್ಲಿ ನಾಟಕ ಸ್ಪರ್ಧೆಯೊಂದನ್ನು ಕೆಲ ತಿಂಗಳುಗಳ ಹಿಂದೆ ನಡೆಯಿಸಿತು. ೧೯೮೬ರ ಈ ಸ್ಪರ್ಧೆಯಲ್ಲಿ ಸಂಕೇಶ್ವರದ ಶ್ರೀ ರಾ. ಕೃ. ನಾಯಿಕರ ನಾಟಕ 'ಒಡೀಸಿ' ಪ್ರಥಮ ಬಹುಮಾನ ಪಡೆಯಿತು. ನಂತರದಲ್ಲಿ ಅದು ಪ್ರಕಟಗೊಳ್ಳುವ ಸೂಚನೆಗಳು ಕಾಣುತ್ತಿಲ್ಲವಾಗಿ, ಸಾಹಿತ್ಯಾಸಕ್ತರಿಗೆ ಇಂಥ ನಾಟಕದ ಪರಿಚಯ ನೀಡುವ ಪ್ರಯತ್ನವಾಗಿ ಈ ಲೇಖನವಿಲ್ಲಿದೆ.]

ಮಹಾಕಾವ್ಯಗಳು ತುಂಬ ಹಿಂದಿನ ದಿನಗಳಿಂದ ಜನಮನವನ್ನು ತಿದ್ದುತ್ತ ಬಂದಿವೆ. ಅವು ದೇಶ, ಕಾಲ, ಜನಾಂಗಗಳನ್ನು ಮೀರಿ ಪ್ರಭಾವ ಬೀರಿರುವುದನ್ನು ಗಮನಿಸಿದರೆ ಜನಪ್ರಿಯತೆ ಮಾತ್ರ ಅದಕ್ಕೆ ಕಾರಣವಲ್ಲ ಎಂಬುದು ಸ್ಪಷ್ಟ. ಜನಪ್ರಿಯತೆ ಸಾಹಿತ್ಯಕ್ಕೆ ಮಾನದಂಡವಾಗಿಯೂ ವಿಮರ್ಶಕರಿಂದ ಮನ್ನಣೆ ಪಡೆದಿಲ್ಲ. ಮಹಾಕಾವ್ಯಗಳಲ್ಲಿ ಯಾವುದೋ ಅದ್ಭುತಶಕ್ತಿ—ಅದು ಕುತೂಹಲಾಸಕ್ತಿಯನ್ನು ಮೂಡಿಸುವ ಸಹಜ ಗುಣಕ್ಕಿಂತ ಮಿಗಿಲಾದದ್ದು–ತುಂಬಿಕೊಂಡಿದೆ. ನಿಸರ್ಗದ, ಮಾನವ ಪ್ರಪಂಚದ ಒಳ–ಹೊರಗುಗಳ ರಹಸ್ಯಗಳನ್ನು ಶೋಧಿಸುತ್ತ ಹೋಗುವ ಪ್ರಯತ್ನಗಳಾಗಿ ಆಕರ್ಷಕತೆಯನ್ನು, ಚಿರಂತನಮೌಲ್ಯಗಳ ಶೋಧಕ್ಕಾಗಿನ ಸಂಘರ್ಷವನ್ನೂ ಅಪೂರ್ವವಾಗಿ ಒಳಗೊಂಡಿರುತ್ತವೆ. ಭಾರತದ ರಾಮಾಯಣ ಮಹಾಭಾರತಗಳಾಗಲಿ, ಗ್ರೀಕ ದೇಶದ ಈಲಿಯಡ್, ಒಡೀಸಿಗಳಾಗಲಿ ಈ ಸಾಲಿನ ಮೇರುಕೃತಿಗಳು. ಅವು ಕಾಲಕಾಲಕ್ಕೆ ಹೊಸ ರೀತಿ, ರೂಪ, ರಚನೆಗಳಲ್ಲಿ ಮತ್ತೆ ಮತ್ತೆ ಸೃಷ್ಟಿಗೊಳ್ಳುವುದಕ್ಕೆ ಕಾವ್ಯಗಳ ಒಡಲಲ್ಲಿನ ಮೀಸಲಳಿಯುವ, ಒಂದು ತೆರನಾದ, ಕನ್ಯತ್ವಗುಣ ಕಾರಣವಾಗಿರಬೇಕು. ಪಂಪ, ರನ್ನ, ಕುಮಾರವ್ಯಾಸ. ನಾಗಚಂದ್ರ, ಲಕ್ಷ್ಮೀಶ, ಮುದ್ದಣ್ಣ, ಕುವೆಂಪು ಮುಂತಾದ ಕವಿಗಳು ರಾಮಾಯಣ, ಮಹಾಭಾರತಗಳನ್ನೇ ಬರೆದಿದ್ದರೂ ಅವು ಮೂಲದಂತೆಯಾಗಲಿ, ಪರಸ್ಪರ ಒಂದೇ ಯಾಗಲಿ ಇಲ್ಲವೆಂಬುದು ಕಂಡರೆ ಈ "ಕನ್ಯತ್ವ" ಗುಣ ಅರ್ಥವಾದೀತು.

ಪ್ರಸ್ತುತ ಶ್ರೀ ರಾ. ಕೃ. ನಾಯಿಕರ "ಒಡೀಸಿ" ಗ್ರೀಕ ಮಹಾಕವಿಯ ಅದೇ ಹೆಸರಿನ ಮಹಾಕಾವ್ಯವನ್ನು ಆಧರಿಸಿ ರಚಿತಗೊಂಡಿದೆ. ಸುಪ್ರಸಿದ್ಧವಾದ ಟ್ರಾಯ್ ಯುದ್ಧದಲ್ಲಿ ತನ್ನ ವೀರಾಳುಗಳೊಂದಿಗೆ ಒಂಭತ್ತು ವರ್ಷಗಳ ಕಾಲ ಯುದ್ಧಮಾಡಿ ಜಯಶಾಲಿಯಾಗಿ, ಸ್ವದೇಶಕ್ಕೆ ಮರಳುವ ದಾರಿಯಲ್ಲಿ ದೇವತೆಗಳ ಕೋಪಕ್ಕೆ ಶಾಪಕ್ಕೆ

ತುತ್ತಾಗಿ ಮುಂದೆ ಹತ್ತುವರ್ಷಗಳ ಕಾಲ ನಿರಂತರ ಪ್ರಯತ್ನದಿಂದಲೂ, ಸೋಲನ್ನೊಪ್ಪದ ಸಂಘರ್ಷದಿಂದಲೂ ಕಷ್ಟ ಪರಂಪರೆಗಳಿಂದ ವಿಮುಕ್ತನಾಗಿ ತನ್ನ ನೆಲವನ್ನು ಜನವನ್ನು ಸೇರುವ ಗ್ರೀಕ ರಾಜನಾದ ವೀರ ಓಡೀಸಿಸ್‌ನ ಕಥೆ ಈ ನಾಟಕದ ವಸ್ತುವಾಗಿದೆ. ಈ ಸಿದ್ಧವಸ್ತುವನ್ನು ನಾಟಕವಾಗಿ ಮಾರ್ಪಡಿಸುವಲ್ಲಿ ಅನುಕೂಲಗಳು-ಅನಾನುಕೂಲಗಳು ಸಹಜವಾಗಿ ಎದುರಾಗುತ್ತವೆ. ಜೊತೆಗೆ ಮೂಲಕ್ಕೆ ಕೆಲವು ಸೇರ್ಪಡೆಗಳನ್ನು, ಬದಲಾವಣೆಗಳನ್ನು ತುಂಬುವದೂ, ಕೆಲ ವಿವರಗಳನ್ನು ಕೈಬಿಡುವುದೂ ಇಂಥ ಪ್ರಯತ್ನಗಳಲ್ಲಿ ಸಾಮಾನ್ಯವಾಗಿರುತ್ತವೆ. ಅವೆಲ್ಲವುಗಳ ನಡುವೆಯೂ ನಾಟಕವಾಗಿಸುವ ಜಾಣ್ಮೆ ಮತ್ತು ತುಂಬಿರುವ ಅರ್ಥ ಶ್ರೀಮಂತಿಕೆಗಳು ಈ ಕೃತಿಯಲ್ಲಿ ಎದ್ದುತೋರುವಂತಿವೆ.

ಗ್ರೀಕ್ ರುದ್ರನಾಟಕಗಳ ಇಲ್ಲವೆ ಸಂಸ್ಕೃತ ನಾಟಕಗಳಲ್ಲಿಯ ನಾಟಕ ನಿರ್ವಹಣಾ ತಂತ್ರವಾದ ಗಾಯಕ, ಹಿಮ್ಮೇಳಗಳ ಬಳಿಕೆ ಇಲ್ಲಿ ಸೂಕ್ತವಾಗಿ ಬಂದಿವೆ. ಅದೊಂದು ನಿರೂಪಣಾ ತಂತ್ರವಾಗಿಯೂ ಚುರುಕುತನ, ಬಿಗಿಯನ್ನು ಕಥಾಘಟಕ್ಕೆ ನೀಡಿ, ಕಾವ್ಯಾಂಶವನ್ನು ಮೈದುಂಬಿಸಿಕೊಂಡಿವೆ. ನಾಟಕದ ನಡುವೆ ಒಂದೆಡೆಗೆ ಗಾಯಕರು ಹಾಡುವ ಹಾಡೊಂದರ ಭಾಗ ಇಂತಿದೆ;

> "............................
> ಅವನೆ ಪ್ರೇತ, ಸೃಷ್ಟಿಗೊಡೆಯ, ಚರಮದೇವನೊ
> ಅವನ ಸೇರ । ದುಳಿವನಾರು ॥ ಯಮಸದನಕೆ । ನೆರೆಯನಾರು ॥
> ಉಸಿರುವನ್ನ । ಹೆಸರು ಹೇಳಿ ॥ ಉಸಿರುನಿಲ್ಲೆ । ಯಮನ ಸಾರಿ ॥
> ಯಮಸದನವ ಸೇರಿಕೊಂಬೆವೊ । ನಾವೆಲ್ಲ ಸೇರಿಕೊಂಬೆವೊ."

ಜನಪದ ಲಯ, ಗತ್ತುಗಳು, ನಾಟಕೀಯತೆ, ಅಭಿನಯಗಳು ಈ ಕಾವ್ಯದಲ್ಲಿ ಬೆರೆತುಕೊಂಡು ಸೊಗಸಾಗಿ ವ್ಯಕ್ತಗೊಂಡಿವೆ.

ಮೂಲದಲ್ಲಿ ಓಡೀಸಿಸ್‌ನ ಮೇಲೆ ಬಿದ್ದಿರುವ ಒತ್ತನ್ನು ನಾಟಕವು ಸಮರೂಪವಾಗಿ ಇತಿಕಾದ ಆಗುಹೋಗುಗಳ ಮೇಲೂ, ಓಡೀಸಿಸ್‌ನ ಮೇಲೂ ಹಂಚಿದೆ. ಈ ಹಂಚಿಕೆಯು ಕೃತ್ರಿಮವಾಗಿರದೆ ಕಲಾತ್ಮಕವಾಗಿವೆ. ವ್ಯಕ್ತಿಕೇಂದ್ರವಾಗಿರುವುದನ್ನು ಉಳಿಸಿಕೊಂಡೂ ಇತರೆಲ್ಲ ಆಗು-ಹೋಗುಗಳಿಗೂ ಸಮಾನ ಅವಕಾಶ ನೀಡಲಾಗಿದೆ. ನಾಟಕದ ಆರಂಭದಿಂದ ಸ್ವದೇಶದಿಂದಲೂ, ಸ್ವಜನರಿಂದಲೂ ದೂರವಾಗಿರುವ ಓಡೀಸಿಸ್‌ನ ಬಗೆಗೆ ಕುತೂಹಲಾಸಕ್ತಿಗಳು ಬೆಳೆಯುತ್ತ ಹೋಗುತ್ತವೆ. ಇನ್ನೊಂದೆಡೆಗೆ ರಾಣಿಯಾದ ಪಿನಲಪಿಯ ಸ್ಥಿತಿಗತಿ,-ಟೆಲಿಮ್ಯಾಕಸ್‌ನು ತಂದೆಗಾಗಿ ನಡೆಸುವ ಶೋಧದ ಪ್ರಯತ್ನ, ಪ್ರೇಮಾರ್ಥಿಗಳ ಸಮಯಸಾಧಕತನ ನಾಟಕದ ಶಿಲ್ಪದಲ್ಲಿ ಸ್ಪಷ್ಟವಾಗಿ ಬೆಳೆದು ಹುರಿಗೊಳ್ಳುತ್ತವೆ.

ಪಿನಲಪಿಯ ದ್ವಂದ್ವ, ತಳಮಳ, ಅಸಹಾಯಕತೆಗಳು ಸಹಜವಾಗಿ ಮೂಡಿಬಂದಿವೆ. ಅಪೂರ್ವ ಸೌಂದರ್ಯವತಿಯಾದ ಆಕೆಯ ಮಾತುಗಳಲ್ಲಿ ಬಂದಿರುವ ವಿಷಾದವು ಓದುಗರನ್ನು ತಟ್ಟುತ್ತದೆ. "ನನ್ನಲ್ಲಿದ್ದುದೆಲ್ಲವೂ ಎಂದು ಆಗ್ರೈವರು ಇಲಿಯಂ ಪಟ್ಟಣದ ಮೇಲೆ ಏರಿಹೋದರೊ ಅಂದೆ ಕರಗಿಹೋಯಿತು. ಈಗ ಉಳಿದಿರುವುದು ಬರೀ ನೆರಳು......ಆಕಿಮನ್ ಕುಲನಾಮಕರೆಲ್ಲರೂ ಹಿಂದುಗಟ್ಟಿ ಮರುಮದುವೆಗೆ ನನ್ನನ್ನು ಒತ್ತಾಯಿಸುತ್ತಿದ್ದಾರೆ. ಚಿತ್ತವನ್ನು ಕಲಕುತ್ತಿದ್ದಾರೆ" ಎನ್ನುವಲ್ಲಿ ಅವಳ ಸುಖ–ಸಂತೋಷಗಳು ಓಡೀಸಿಸ್‌ನೊಂದಿಗೆ ಹೋಗಿ ಈಗ ಸುತ್ತಲಿಂದ ಒದಗುತ್ತಿರುವ ಹಲವು ಹತ್ತು ಕಷ್ಟಗಳ ಯಾತನೆಯು ವ್ಯಕ್ತಗೊಂಡಿದೆ. ಸುಪ್ರಸಿದ್ಧ ರಾಜ ಓಡೀಸಿಸ್‌ನ ಪ್ರೇಮದ ಪತ್ನಿಯಾಗಿ, ಇತಿಕಾದ ಸಕಲ ವೈಭವದ ಒಡತಿಯಾಗಿ, ಟೆಲಿಮ್ಯಾಕಸ್‌ನಂಥ ವೀರ ಯುವಕನ ತಾಯಿಯಾಗಿ, ಪಿನಲಪಿ ಅವೆಲ್ಲವುಗಳಿದ್ದೂ ಇಲ್ಲದಂತಾಗಿ 'ದೇವರೆ, ನನ್ನನ್ನು ಬೇಗನೆ ಮುದುಕಿಯನ್ನಾದರೂ ಮಾಡಬಾರದೆ ? ......ಯೌವನವೆಲ್ಲ ಯೋಗಿನಿಯಂತೆ ಒಣಗಿಡೆ"೪ ಎನ್ನುವ ಮಹಾರಾಣಿ ಪಿನಲಪಿ ಎಂಥ ಅಸಹಾಯಕಳು!

ಟೆಲಿಮ್ಯಾಕಸ್‌ನ ಸಂಚಾರ, ತಂದೆಯ ಶೋಧದ ಯತ್ನ ನಾನಾದೇಶಗಳ ಬಗೆಬಗೆಯ ಅನುಭವಗಳು ಮೂಲದಲ್ಲಿ ತುಂಬ ಸುದೀರ್ಘವಾಗಿ ವರ್ಣಿತವಾಗಿರುವುದನ್ನು ನಾಟಕದಲ್ಲಿ ಕಾಣಲಾರೆವು. ಆ ವೃತ್ತಾಂತವನ್ನು ಬೇರೆ ತಂತ್ರದಲ್ಲಿ ಸಂಗ್ರಾಹ್ಯಗೊಳಿಸಲಾಗಿದೆ. ಚಿಂತೆಯಲ್ಲಿರುವ ತಾಯಿಯನ್ನು ಕಂಡು ತನ್ನ ಯಾತ್ರೆಯ ವಿವರಗಳನ್ನು ನೀಡುವಲ್ಲಿ ಮೂಲದ ವಿವರಣೆಯು ಕೇವಲ ಉಲ್ಲೇಖದ ಅಂಶಗಳಾಗಿ ಬಿಡುತ್ತದೆ. ಒಂದೆಡೆ ತಂದೆಯನ್ನು ಹುಡುಕುವ ಆಶೆ, ಇನ್ನೊಂದೆಡೆ ತಾಯಿಯನ್ನು ಪ್ರೇಮಾರ್ಥಿಗಳಿಂದ ಕಾಪಾಡುವ ಹೊಣೆಗಳೆರಡರ ನಡುವೆ ಆತ ವಯಸ್ಸಿಗೆ ಮೀರಿದ ಪ್ರಬುದ್ಧತೆಯನ್ನು ಮೆರೆದಿದ್ದಾನೆ. ಆ ಪ್ರಬುದ್ಧತೆಯು ತಂದೆಯನ್ನು ಗುರುತಿಸಿದಾಗ್ಗೆ, ಮಾರುವೇಷದಲ್ಲಿಯ ಓಡೀಸಿಸ್‌ನು ಪ್ರೇಮಾರ್ಥಿಗಳಿಂದ ಅಪಮಾನ ಪಡುವಲ್ಲಿ ಚೆನ್ನಾಗಿ ವ್ಯಕ್ತಗೊಳ್ಳುತ್ತದೆ. ತಾಯಿಯ ಮಾನಸಿಕ ತುಮುಲವನ್ನು ತಿಳಿದು ಮಾತನಾಡುವ ಮತ್ತು ಸಮಯಕ್ಕೆ ತಕ್ಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಅವನ ಜಾಣ್ಮೆ ನಾಟಕದ ಬಿಗುವಿಗೆ ವಿಚಿತ್ರವಾದ ಮೆರಗನ್ನು ನೀಡಿದೆ.

ಪ್ರೇಮಾರ್ಥಿಗಳ ಸಂಖ್ಯೆ ವಿಪುಲವಾಗಿದೆ. ರಾಣಿಯ ಸೌಂದರ್ಯ, ಮೋಹಕತೆಗಳತ್ತ ಆಕರ್ಷಿತರಾಗಿರುವ ಅವರೆಲ್ಲರೂ ಭಿನ್ನ ಭಿನ್ನ ಮನೋಭಾವದ, ವ್ಯಕ್ತಿತ್ವದ ವ್ಯಕ್ತಿಗಳಾಗಿ ಚಿತ್ರಿತವಾಗಿದ್ದಾರೆ. ತನ್ನ ಸೋದರನು ದೊರೆ ಓಡೀಸಿಸ್‌ನೊಂದಿಗೆ ಯುದ್ಧಕ್ಕೆ ಹೋಗಿರುವುದನ್ನು ರಾಣಿಯ ಪ್ರೇಮಯಾಚನೆಯ ಅಧಿಕಾರವೆಂದು ಭಾವಿಸುವ ಯುರಿನೋಮಸ್, ಒಳಗೊಳಗೆ ಎಲ್ಲರಂತೆ ರಾಣಿಯನ್ನು

ಹೊಂದುವ ಮನಸ್ಸಿದ್ದರೂ ಓಡೀಸಿಸ್‌ನ ಜನಪ್ರಿಯತೆ ಹೆದರುವ ಅಂತಿನೆಸ್, ಅರಮನೆಯ ದಾಸಿಯರನ್ನು ಹಿಂಸಿಸಿ ರಾಣಿಯ ಮೇಲೆ ಒತ್ತಡ ತರುವ ಲಿಯೋಕ್ರಿಟಸ್. ಹೀಗೆ ನಾನಾತೆರ ಗುಣ–ಸ್ವಭಾವಗಳ ಜೀವಂತ ವ್ಯಕ್ತಿಗಳಾಗಿ ಬರುತ್ತಾರೆ. ಹಲವು ಭಿನ್ನತೆಗಳ ನಡುವೆಯೂ ಅವರಲ್ಲಿ ಏಕಾಭಿಪ್ರಾಯವಿದೆ; ರಾಣಿಯು ಮರು–ಮದುವೆಯಾಗಬೇಕೆಂದು!

ಪ್ರವಾದಿಗಳ, ದಾಸ–ದಾಸಿಯರ ಪಾತ್ರಗಳು ಸೀಮಿತ ಅವಕಾಶದಲ್ಲಿಯೂ ಸ್ಫುಟಗೊಂಡಿವೆ. ಪ್ರವಾದಿಗಳು ಮುಂದಿನ ಘಟನೆಗಳನ್ನು, ಶುಭಾಶುಭಗಳನ್ನು ಸಂಕೇತಗಳ ಮೂಲಕ ಸೂಚಿಸುತ್ತ ನಾಟಕೀಯ ಸುಖಾಂತಕ್ಕೆ ಕಥಾನಿರೂಪಣೆಯನ್ನು ತಿರುಗಿಸಿ, ಎಲ್ಲವನ್ನೂ ಸಜ್ಜಾಗಿಡುತ್ತಾರೆ. ಜೊತೆಗೆ ಅವರಲ್ಲಿ ಒಳಿತು-ಕೆಡಕುಗಳ ಬಗೆಗಿನ ತೀರ್ಪು ಕೂಡ ಸ್ಪಷ್ಟವಿದೆ. ದಾಸಿಯರಲ್ಲಿ, ಸೇವಕರಲ್ಲಿ ನಿಷ್ಠೆ, ನಂಬಿಕೆಗಳು ಸಹಜವಾಗಿ ಏಕೀಭವಿಸಿವೆ. ಹೀಗೆ ಪ್ರಧಾನ ಪಾತ್ರಗಳು, ಸಾಮಾನ್ಯ ಪಾತ್ರಗಳು__ಎಲ್ಲವೂ ತಮ್ಮ ಗುಣ-ದೋಷಗಳೊಂದಿಗೆ ಸಹಜವಾಗಿ ಲವಲವಿಕೆಯಿಂದ ಕಾಣಿಸಿಕೊಳ್ಳುತ್ತವೆ. ಪಾತ್ರಗಳ ಬಾಹುಳ್ಯ ಕಂಡರೆ—ಇಪ್ಪತ್ತೈದಕ್ಕಿಂತ ಕಡಿಮೆಯಿಲ್ಲದಂತೆ ಪಾತ್ರಗಳಿವೆ!–ಈ ಸಹಜತೆಯಾಗಲಿ, ಲವಲವಿಕೆಯಾಗಲಿ ಅವುಗಳಲ್ಲಿ ಕಂಡುಬರುವುದು ಈ ನಾಟಕದ ವಿಲಕ್ಷಣ ಅಂಶವೇ ಎಂದು ಸ್ಪಷ್ಟವಾಗುತ್ತದೆ.

ಕಥಾವಸ್ತುವನ್ನು ಗ್ರೀಕ ಮಹಾಕಾವ್ಯದಿಂದ ಎತ್ತಿಕೊಂಡು ಅದೇ ಹೆಸರಿನಲ್ಲಿ ನಾಟಕವಾಗಿ ಹೆಣೆದಿದ್ದರೂ, ಕೇವಲ ಗ್ರೀಕ ಪೌರಾಣಿಕ ಕಥೆಯನ್ನು ಇಲ್ಲಿ ನಾಟಕವಾಗಿಸಲಾಗಿದೆ ಎನ್ನಲಾಗದು. ಹಾಗೆ ಗ್ರಹಿಸಿದರೆ ಕೇವಲ ಮೇಲ್ನೋಟದ ಅನಿಸಿಕೆಯಾಗುತ್ತದೆಯೇ ಹೊರತು ನಾಟಕದ ಸತ್ವವಾಗಲಿ, ಉದ್ದೇಶವಾಗಲಿ ದೂರಕ್ಕೆ ಉಳಿದು ಬಿಡುತ್ತದೆ. ಕಥೆ ನೆಪಮಾತ್ರವಾಗಿದ್ದು ಆ ಮೂಲಕ ಸಮಕಾಲೀನ ವಿಶ್ಲೇಷಣೆಗೆ ತೊಡಗುವ ನಾಟಕ ಎತ್ತರಕ್ಕೆ ಏರುತ್ತದೆ. ಮಾನವನ ಮೂಲಭೂತ ಗುಣಗಳು, ಸ್ವಭಾವ, ವರ್ತನೆಗಳನ್ನು, ನಿಷ್ಠೆ, ಕೃತಜ್ಞತೆ, ಉಪಕಾರ, ಪ್ರೇಮ ಮೊದಲಾದವುಗಳನ್ನು ಪರಂಪರಾಗತ ಅರ್ಥದಿಂದ ಭಿನ್ನವಾಗಿ ಕಾಣುವ ಪ್ರಯತ್ನ ಮಾಡಲಾಗಿದೆ. ಓಡೀಸಿಸ್ ಇರುವಾಗ ಆತನನ್ನು ಭಯ–ಭಕ್ತಿಗಳಿಂದ ಪೂಜಿಸುತ್ತಿದ್ದವರು, ಆತನ ಅನುಪಸ್ಥಿತಿಯಲ್ಲಿ ಅವನ ಪ್ರೇಮದ ರಾಣಿಯನ್ನು ಹೊಂದಲು ಯೋಚಿಸುವುದು, ಕಾಲಬಂದಂತೆ ಬದಲಾಗುವುದು ಒಳಿತೋ ಕೆಡುಕೋ ಸೂಕ್ಷ್ಮಗಳಾಗಿ ಬಿಡುವ ಚಿತ್ರಣ ಮನನೀಯವಾಗಿದೆ. ಓಡೀಸಿಸ್ ಇಲ್ಲದಿದ್ದಾಗ್ಗೆ ಮೊದಲಿನ ನಂಬಿಕೆ ವಿಶ್ವಾಸವನ್ನೇ ತೋರುವ ದಾಸ–ದಾಸಿಯರಿಗೆ ಲಿಯೋಕ್ರಿಟಸ್ "ವ್ಯವಸ್ಥೆಯನ್ನು ಸ್ಥಿರಪಡಿಸಲು ಮಾಡಿಕೊಂಡ ಒಂದು ಅನುಕೂಲ ಸ್ವಾಮಿನಿಷ್ಠೆ"* ಎನ್ನುತ್ತಾನೆ. ಸ್ವಾಮಿನಿಷ್ಠೆ ಬಗೆಗೆ ಗೌರವಾದರಗಳಿಂದ ನೋಡುವ ಹಿಂದಿನ ರೂಢಿಗತ ದೃಷ್ಟಿಗೆ ಇಲ್ಲಿ ಏಟು ಬೀಳುತ್ತದೆ. ವಿಚಾರಿಸಿದರೆ ಬದಲಾವಣೆಗೆ ಅಪ್ಪದವಿಲ್ಲದಂತೆ

ವ್ಯವಸ್ಥೆಯನ್ನು ಯಥಾವತ್ತಾಗಿ ಮುನ್ನಡೆಸಲು ಈ 'ಸ್ವಾಮಿನಿಷ್ಠೆ' ಹೇಗೆ ಪೂರಕ-ವಾಗಿದೆ ಎಂಬುವಕ್ಕೆ ಲಿಯೋಕ್ರಿಟಸ್ ಇಲ್ಲಿ ಎತ್ತಿತೋರುತ್ತಾನೆ. ಆದರೆ ಅವನಿಂದ ಬರುವ ಈ ಮಾತಿನಿಂದ ಆತ ಬಹು ಗಂಭೀರ ಚಿಂತಕನೆಂದು ಓದುಗರಲ್ಲಿ ಗೌರವ ಮೂಡದು! ಈ ವಿಚಾರವಾದವೆಲ್ಲ ತನ್ನ ಸ್ವಾರ್ಥಕ್ಕಾಗಿ, ಎಂದರೆ ಪಿನಲಪಿಯ ವಿವಾಹವಾಗಲು__ಬಳಸುವುದರಿಂದಾಗಿ ತಿರಸ್ಕಾರವೇ ಉಕ್ಕುತ್ತದೆ.

ನಾಟಕದಲ್ಲಿ ಮನುಷ್ಯನ ಬದುಕಿಗೆ, ಆತನ ಹೋರಾಟ–ಪ್ರಯತ್ನಗಳಿಗೆ, ಏಳು ಬೀಳುಗಳಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ದೇವತ್ವಕ್ಕಿಂತ ಮಾನವತ್ವಕ್ಕೆ, ದೇವ-ಲೋಕಕ್ಕಿಂತ ಮಾನವಲೋಕಕ್ಕೆ ಒತ್ತು ನೀಡಿರುವುದು ನಾಟಕಕಾರರ ದೃಷ್ಟಿಯನ್ನು ಬಿಂಬಿಸುತ್ತದೆ. ನಾಯಕ ಓಡೀಸಿಸ್‌ನಿಗೆ ಅಮರನಾಗುವ ಸಂದರ್ಭ ಬಂದರೂ ಆತ "ನನ್ನ ಮಾನವ ಜೀವನದ ಬದಲು ನಾನು ದೇವತೆಗಳ ಅಮರತ್ವಕ್ಕೆ ಆಶೆ ಮಾಡ-ಲಾರೆ……"[೬] ಎಂದು ನಿರಾಕರಿಸುತ್ತಾನೆ. ಆಶಾವಾದವನ್ನು ಎತ್ತಿಹಿಡಿಯುತ್ತಾನೆ. ತನ್ನೆಲ್ಲ ಸಂಕಷ್ಟಗಳು ಕೊನೆಗೊಂಡು, ಆಂತರಿಕ ಶತ್ರುಗಳು ನಾಶವಾಗಿ, ರಾಜ್ಯ, ಅಧಿಕಾರ, ಸಂಪತ್ತು, ಪ್ರಿಯ ಪತ್ನಿ, ಮಗ, ತಂದೆ- ಹೀಗೆ ಕಳೆದುದೆಲ್ಲ ಮರಳಿ ಹೊಂದಿದ ಓಡೀಸಿಸ್ ಹೇಳುವುದು ಗಮನಾರ್ಹವಾಗಿದೆ. "ನಮ್ಮ ದೇಶದ ಬಿಲ್ಲನ್ನು ಬಾಗಿಸಿ, ಪ್ರೇಮದ ಹೆದೆ ಏರಿಸಿ ಡಂಭಾಚಾರಕ್ಕೆ ಗುರಿಯಿಟ್ಟು ಜೀವನವನ್ನು ನಿತ್ಯವೂ ಹಸನು ಮಾಡಬೇಕು."[೭] ಇಲ್ಲಿ ಓಡೀಸಿಸ್ ತತ್ವಜ್ಞಾನಿಯಂತೆ ಕಂಡರೂ. ನಾಟಕ ಕೇವಲ ಗ್ರೀಕ್ ವೀರನೊಬ್ಬನ ಬದುಕಿನ ಆಗುಹೋಗುಗಳ ಚಿತ್ರಣ ಮಾತ್ರವಾಗದೆ, ಬದುಕಿನಲ್ಲಿ ಪ್ರತಿಯೊಬ್ಬನೂ ನಿರಂತರ ಹೋರಾಟ ಮಾಡಲೇ ಬೇಕಾದುದನ್ನು ಕೂಡ ಧ್ವನಿಸುತ್ತದೆ. ಆ ಹೋರಾಟ ವ್ಯಕ್ತಿಗಳ ವಿರುದ್ಧ ಎಂದು ಆತ ತಿಳಿದಿದ್ದರೆ, ಏನೂ ಮಹತ್ವ ಕೊಡಬೇಕಾಗಿರಲಿಲ್ಲ ಆದರೆ ಅದು ಅವಗುಣಗಳ. ವಿಷಮತೆಗಳ ವಿರುದ್ಧ ಎಂಬುದೇ ಮುಖ್ಯವಾಗುತ್ತದೆ ಇದು ನಾಟಕದ ಸಂದೇಶವಾಗಿಯೂ ಪ್ರಮುಖವಾಗಿದೆ.

ನಾಟಕಕಾರರು ಉತ್ತರ ಕರ್ನಾಟಕದ ಆಡುನುಡಿಯನ್ನು ಉಳಿಸಿದ್ದು. ಅಲ್ಲಲ್ಲಿ ದೇಸೀಯ ಹೇಳಿಕೆ, ಗಾದೆಗಳು ಜನಪದರ ಶಬ್ದಗಳು ಸುಂದರವಾಗಿ ಸೇರಿಕೊಂಡಿವೆ. 'ಹತ್ತರ ಕೂಡ ಹನ್ನೊಂದಾಗು' 'ಉಂಡ ಮನೆಯ ಗಳಎಣಿಸು' 'ಗೂಳಿ ಬಿದ್ದಾಗ ಆಳಿಗೊಂದು ಕಲ್ಲು' 'ಮಾಡಿದ್ದಣ್ಣೊ ಮಾರಾಯಾ' 'ಗಾಳಿ ಗುದ್ದಿ ಮೈನೋಯಿಸಿ ಕೊಳ್ಳು'…ಮುಂತಾದ ಗಾದೆಗಳು ಹೇಳಿಕೆಗಳು ಸಾಂದರ್ಭಿಕವಾಗಿ ಸೇರ್ಪಡೆಯಾಗಿ ಸಂಭಾಷಣೆಗೆ ಶಕ್ತಿತುಂಬಿವೆ. 'ಮಟಾಮಾಯವಾಗು, ಹೊಳೆಗಾಣಿಸು, ಮೂಗಿಗೆ ತುಪ್ಪಹಚ್ಚು, ಪೇಚು, ರೌಡಿಗಳು, ಯೋಗಾಯೋಗ. ಬೇವರ್ಸಿ, ಜಂಗುತಿನ್ನು. ಗುತ್ತಿಗೆ, ಬೊಗಳು–ಮೊದಲಾದ ಆಡುನುಡಿಯ ಸಹಜ ಶಬ್ದಗಳು ಯಾವುದೇ

ಕೃತ್ರಿಮತೆ ಇಲ್ಲದಂತೆ ಹಿತಮಿತವಾಗಿ ಬಳಕೆಗೊಂಡಿವೆ. ಜೊತೆಗೆ ಹಳಗನ್ನಡ, ನಡುಗನ್ನಡ ಕಾವ್ಯಗಳ ಪ್ರಭಾವ ಎಂಬಂತೆ 'ಮಾರಿಗೌತಣ, ರತ್ನಪರೀಕ್ಷಕ, ಗೊರವರ ಡುಂಡುಚಿ' ಬಂದು ವಿಚಿತ್ರ ಮೆರಗು ನೀಡಿವೆ. ಓದುಗ ಯಾವುದೇ ಅಡೆ-ತಡೆಯಿಲ್ಲವಂತೆ ಸರಳವಾಗಿ ಆಸ್ವಾದಿಸಲು ಸಾಧ್ಯವಾಗುವ ಶೈಲಿ, ಚುರುಕಾದ ಸಂಭಾಷಣೆಗಳು ಓದಿಸಿಕೊಳ್ಳುತ್ತವೆ.

ಆದರೆ ನಾಟಕವು ಈ ಎಲ್ಲಾ ವಿಶೇಷತೆಗಳಿದ್ದರೂ ಕನ್ನಡ ಆವರಣವನ್ನು ಪಡೆಯದೆ, ಗ್ರೀಕ್ ಪರಿಸರವನ್ನು ತುಂಬ ಸಮರ್ಥವಾಗಿ ತಾರದೆ ಎಲ್ಲೋ ದೂರಕ್ಕೆ ಉಳಿದುಬಿಡುವ ಭಯವನ್ನು ತಳ್ಳಿ ಹಾಕುವಂತಿಲ್ಲ. ಇದು ನೀಗಬೇಕಾದರೆ ನಾಟಕದ ಒಳಗೆ ಅಂಥ ಆವರಣ ಮೂಡಿಸಲು ಯತ್ನಿಸುವುದೂ, ಜೊತೆಗೆ ನಾಟಕಕ್ಕೆ ಪೂರ್ವಭಾವಿಯಾಗಿ ಟ್ರಾಯ್ ಯುದ್ಧದ ಮೊದಲಿನ-ನಂತರದ ಸಂಗತಿಗಳ ಸಂಕ್ಷಿಪ್ತ ಕಥಾನಕವನ್ನು ಪೀಠಿಕಾರೂಪದಲ್ಲಿ ಸೇರಿಸಬಹುದು. ಇದರಿಂದ ಓದುಗನಿಗೆ ನಾಟಕ ಪ್ರವೇಶಕ್ಕೆ ತಕ್ಕ ಸಿದ್ಧತೆ ಒದಗುತ್ತದೆ. ನಾಟಕದ ನಿರೀಕ್ಷಿತ ಪ್ರಭಾವ-ಪರಿಣಾಮಕ್ಕೆ ಅಡ್ಡಿಯಾಗಿ ಹಿಮ್ಮೇಳದವರು, ಯುರಿಕ್ಲಿಯಾ ಮತ್ತು ಪ್ರವಾದಿಗಳು ಹೇಳುವ ಭವಿಷ್ಯದ ಸಂಗತಿಗಳು, ಸೂತ್ರಪ್ರದ ಹೇಳಿಕೆಗಳು ಮತ್ತೆ ಮತ್ತೆ ಬಂದು ಬೇಸರಗೊಳಿಸುತ್ತವೆ. ಎಷ್ಟೋ ಸಲ ತೀರ ಗಹನವಾದ, ಗಂಭೀರವಾದ ತತ್ವಜ್ಞಾನದಂಥ ಮಾತುಗಳು ಸಾಮಾನ್ಯ ಪಾತ್ರಗಳಿಂದ ಬರುವುದರಿಂದಾಗಿ, ಅವು ಕೃತಕ ಎನ್ನಿಸುತ್ತವೆ. ಮೊದಮೊದಲು ಕಥೆಯು ತೆಳುವಾಗಿ ಹರಿಯುತ್ತ ಬರುಬರುತ್ತ ಗಾಢವಾಗಿ ತೀವ್ರವಾಗುವುದು ಒಳ್ಳೆಯ ಬೆಳವಣಿಗೆಯಾದರೂ ಕೊನೆಯಲ್ಲಿಯ ಅವಸರದ ಘಟನೆಗಳು ಮುಕ್ತಾಯದ ಸುಖಾಂತದತ್ತ ಓಡುವಂತಿದೆ. ನಾಟಕಕಾರರು ಅರಿಕೆಯಲ್ಲಿ ಇದು ಅನುವಾದವಲ್ಲ, ಪ್ರತಿಪಾದನೆಯುಲ್ಲ, ಚರಿತ್ರೆಯಲ್ಲ, ಅಮಾನುಷ ಸೃಷ್ಟಿಯಲ್ಲ ಎಂದಿದ್ದರೂ ಅವೆಲ್ಲದರ ಛಾಯೆಯಿಂದ ತಪ್ಪಿಸಿಕೊಳ್ಳಲಾಗಿಲ್ಲ. ಇದಕ್ಕೆ ಮೂಲ ಕಥಾವಸ್ತು ಕೂಡ ಒಂದು ಕಾರಣ.

'ಒಡೀಸಿ'ಯು ಸಾಹಿತ್ಯಿಕ ಗುಣಾವಗುಣಗಳೇನಿದ್ದರೂ ನಾಟಕ ದೃಶ್ಯವಾಗಿಯೂ ಮುಖ್ಯವಿರುವುದರಿಂದ ರಂಗ ಸಾಧ್ಯತೆಯ ಬಗೆಗೆ ವಿಚಾರಿಸುವದು ಸೂಕ್ತ. ಪಾತ್ರಗಳ ಬಾಹುಳ್ಯದಿಂದಾಗಿ, ಗ್ರೀಕ್ ರಂಗಭೂಮಿಯ ರಚನೆಯ, ಪರಿಚಯವು ಬಾರದಿದ್ದರೆ ದೃಶ್ಯವಲ್ಲಿ ಸರಿಯಾಗಿ ಬರಲಿಕ್ಕಿಲ್ಲ. ಆದರೆ ಮೇಳದವರಲ್ಲಿ ಕೆಲ ಪಾತ್ರ ಕೈಬಿಟ್ಟು ಇಲ್ಲವೆ ನೇಪಥ್ಯದಿಂದ ಧ್ವನಿಸಿ, ಪ್ರೇಮಾರ್ಥಿಗಳ ಸಂಖ್ಯೆಯಲ್ಲಿ ಕಡಿತ ಮಾಡಿ ನಿರ್ದೇಶಕರೇನಾದರೂ ಸ್ವಾತಂತ್ರ್ಯವಹಿಸಿದರೆ ಯಶಸ್ವಿ ಪ್ರಯೋಗದ ಸಾಧ್ಯತೆಗಳಿವೆ. ನಿರ್ದೇಶಕರಿಗಿರುವ ಸ್ವಾತಂತ್ರ್ಯದ ಹಿನ್ನಲೆಯಲ್ಲಿ ಇದನ್ನು ನೋಡಿದರೆ ರಂಗಸ್ಥಳಕ್ಕೆ ಸೊಗಸಾಗಿ ತರಬಹುದು.

ಹೀಗೆ ನಾಟಕವು ಸಾಹಿತ್ಯಾಂಶಗಳಿಂದ ಶ್ರವ್ಯವಾಗಿಯೂ ನಾಟ್ಯಾಂಶಗಳಿಂದ ದೃಶ್ಯವಾಗಿಯೂ ಗಮನಾರ್ಹವಾಗಿದೆ ಗ್ರೀಕ್ ಪೌರಾಣಿಕ ಕಲ್ಪನೆಯೊಂದನ್ನು ರಂಗ ಭೂಮಿಗೆ ಒದಗಿಸಿದ ಮತ್ತು ಕನ್ನಡದಲ್ಲಿ ನಾಟಕಗಳ ಸೃಷ್ಟಿಯಲ್ಲಿಯ ವಿರಳತೆಯ ಕೊರಗನ್ನು ತಕ್ಕಮಟ್ಟಿಗೆ ಕಡಿಮೆಗೊಳಿಸಿವ ಪ್ರಸ್ತುತ ನಾಟಕಕಾರರ ಪ್ರಯತ್ನ ಅಭಿ ನಂದನೀಯವಾಗಿದೆ. ಜೊತೆಗೆ ಒಂದು ಹೊಸ ಪ್ರಯೋಗವಾಗಿಯೂ ಇದೊಂದು ಸ್ವಾಗತಾರ್ಹ ರಚನೆ.

ಟಿಪ್ಪಣಿಗಳು :

೧. ಇಲ್ಲಿ 'ಮೂಲ'ವೆಂದಾಗಲೆಲ್ಲ ಗ್ರೀಕ್ ಭಾಷೆಯ ಮೂಲವಲ್ಲ; ಗ್ರೀಕ್ ಭಾಷೆಯಿಂದ ಪೆಂಗ್ವಿನ್ ಮಾಲಿಕೆಯಲ್ಲಿ ಕಾದಂಬರಿ ಮಾದರಿಯಲ್ಲಿ ರಚನೆಗೊಂಡ 'ಒಡೀಸಿಸ್' ಎಂಬ ಆಂಗ್ಲಕೃತಿ ಮೂಲವಾಗಿದೆ.

೨. ಶ್ರೀ ರಾ. ಕೃ. ನಾಯಿಕರ 'ಒಡೀಸಿ' ನಾಟಕದ ಹಸ್ತಪ್ರತಿ ಪುಟ-೬

೩. ಅದೇ ಪುಟ-೧೮

೪. ಅದೇ ಪುಟ-೧೯

೫. ಅದೇ ಪುಟ-೧೭

೬. ಅದೇ ಪುಟ-೬೬

೭. ಅದೇ ಪುಟ-೮೫

ಹಿಂದೀ ಸಾಹಿತ್ಯದಲ್ಲಿ ಹಾಲಾವಾದ

● ವಿ.ವಿ. ಹೆಬ್ಬಳ್ಳಿ

ನಾವಿಂದು ಭಾರತೀಯ ಭಾಷಾ-ಸಾಹಿತ್ಯಗಳಲ್ಲಿ ಅನೇಕ ಪ್ರವೃತ್ತಿಗಳನ್ನು ಕಾಣುತ್ತೇವೆ. ಆದರೆ ಹಿಂದೀ ಸಾಹಿತ್ಯದಲ್ಲಿ ಇಂದು ವಿವಿಧ ಕಾವ್ಯ ಪ್ರವೃತ್ತಿ ಇಲ್ಲವೆ ವಾದಗಳು ಬೆಳೆದು ಬಂದಿವೆ. ಈ ಸಾಹಿತ್ಯದಲ್ಲಿ ಬೆಳೆದು ಬಂದ ಪ್ರವೃತ್ತಿಗಳನ್ನು ಭಾರತೀಯ ಇನ್ನಿತರ ಭಾಷೆಗಳಲ್ಲಿ ಬಹುಶಃ ಕಾಣಸಿಗುತ್ತವೆ. ಛಾಯಾವಾದ, ರಹಸ್ಯ ವಾದ. ಪ್ರಗತಿವಾದ, ಪ್ರಯೋಗವಾದ-ನಯಿಕವಿತಾ (ನವ್ಯಕಾವ್ಯ), ಪಲಾಯನ ವಾದ, ಯಥಾರ್ಥವಾದ, ಆದರ್ಶವಾದ, ಪ್ರತೀಕವಾದ, ಅಸ್ತಿತ್ವವಾದ, ಅಭಿವ್ಯಂಜನಾವಾದ, ಹಾಲಾವಾದ ಮೊದಲಾದ ಪ್ರವೃತ್ತಿಗಳು ಈ ಸಾಹಿತ್ಯದಲ್ಲಿ ಬೆಳೆದು ಬಂದಿವೆ.

'ಹಾಲಾ' ದ ಶಾಬ್ದಿಕ ಅರ್ಥ ಮದ್ಯ ಇಲ್ಲವೆ ಮದಿರಾ. ಮದಿರೆಯ ಗುಣ ನಶೆ ಮತ್ತು ತಜ್ಜನ್ಯ ಮೂರ್ಛಾವಸ್ಥೆ. ಮದಿರೆಯ ಈ ನಶೆಯು ಕೆಲಕಾಲದ ವರೆಗೆ ದುಃಖ-ದುಮ್ಮಾನಗಳನ್ನು ಮರೆಸುತ್ತದೆ. ಮಾನವ ಕಲ್ಪಿತ ಸುಖವನ್ನನು-ಭವಿಸುತ್ತಾನೆ. ಮದಿರಾಲಯ ಪ್ಯಾಲಾ (Peg) ಸುರಾಹಿ, ಸಾಕಿ (ಮಧುಪಾನ ಮಾಡಿಸುವವ) ಮೊದಲಾದ ಪ್ರತೀಕಗಳ ಕ್ಷಣಿಕ ದರ್ಶನದ ಸಾಹಿತ್ಯಿಕ ಅಭಿವ್ಯಕ್ತಿಯೇ 'ಹಾಲಾವಾದ'.

ಈ ದುಃಖಮಯ ಕ್ಷಣಿಕ ಜೀವನದಲ್ಲಿ ದೊರೆತ ಆನಂದದ ಕ್ಷಣಗಳ ಉಪ ಯೋಗ ಮಾಡಿಕೊಳ್ಳಬೇಕೆಂಬ ತತ್ವವೇ ಈ ದರ್ಶನದ ಉದ್ದೇಶ. ಹಾಲಾವಾದಿ ದರ್ಶನದ ಆಧಾರ ಪರ್ಶಿಯಾ ದೇಶದ ಸೂಫೀ ದರ್ಶನವಾಗಿದೆ. ಸೂಫೀ ಕವಿಗಳು ಅತಿಯಾದ ಪ್ರೇಮಭಾವ ಹಾಗೂ ತನ್ಮಯತೆಯನ್ನು ಮದಿರೆಯ ನಶೆಯ ಪ್ರತೀಕ ರೂಪದಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ. ಮೇಲ್ನೋಟಕ್ಕೆ ಈ ದರ್ಶನವು ವಾಸನಾತ್ಮಕ ವಾಗಿ ಕಂಡು ಬಂದರೂ ಇದರಲ್ಲಿ ಆತ್ಮ (ಆಶಿಕ), ಪರಮಾತ್ಮ (ಮಾಶೂಕ) ಇವುಗಳ ಸೌಂದರ್ಯ, ಪ್ರೇಮವಿರಹಗಳಿಂದೊಡಗೂಡಿದ ಸಂಬಂಧವನ್ನು ಸೂಚಿಸುತ್ತದೆ.

ಇರಾಣದ ಬೃಹತ್ರಯಿಗಳಾದ ರೂಮಿ, ಹಾಫಿಜ ಮತ್ತು ಉಮರ ಖೈಯಾಮ ಇವರು ಈ 'ಹಾಲಾವಾದಿ ಕಾವ್ಯಧಾರೆಯ ಪರಿಕಾರರು. ಈ ಕವಿಗಳು ಮದಿರೆಯು ಈಶ್ವರ-ಪ್ರೇಮದ ತನ್ಮಯತೆಯ ಪ್ರತೀಕವೆಂದು ಪ್ರತಿಪಾದಿಸಿದರು. ರೂಮಿ ಕವಿಯು ಅದ್ವೈತವಾದ, ಆತ್ಮಾ-ಪರಮಾತ್ಮಾ ಇವುಗಳ ಮಾಧುರ್ಯ ಭಾವನೆಗಳು ಸುರೆಯಿಂದ ತುಂಬಿ ತುಳುಕುವ ಪ್ಯಾಲಾ (ಬಟ್ಟಲು) ಎಂದು ತಿಳಿಯ

ಲಾಗಿದೆ. ಪರಮಾತ್ಮ ಪ್ರೇಮ ಹಾಗೂ ಅವನ ರೂಪವನ್ನು ಕಣ ಕಣದಲ್ಲಿ ಕಾಣುವುದು ಮನುಷ್ಯ ಪ್ರೇಮದ (ಇಶ್ಕ ಮಿಜಾಜ) ಮತ್ತು ಈಶ್ವರ ಪ್ರೇಮ (ಇಶ್ಕ ಹಕೀಕಿ)ದ ಸೋಪಾನ ಈಶ್ವರ ಮತ್ತು ಗುರುಭಕ್ತಿಯ ಪ್ರತೀಕ ಪ್ರೇಮದ ಮಾದಕತೆಯೆಂದು ತಿಳಿಯಲಾಯಿತು.

ಸುರೆ. ಸುರಾಪಾತ್ರ, ಮಧು ಕಲಶ, ಸಾಕಿ, ಮೊದಲಾದ ಪ್ರತೀಕಗಳ ವರ್ಣನೆ ಇಸ್ಲಾಮ ಧರ್ಮದ ಕಟ್ಟರತೆಯನ್ನು ವಿರೋಧಿಸುವ ಒಂದು ಆಂದೋಲನವಾಗಿತ್ತು. ಅರಬಿ ಸಂಸ್ಕೃತಿಯ ಮೇಲೆ ಫಾರಸಿ ಸಂಸ್ಕೃತಿಯ ವಿಜಯ ಸಾಧಿಸುವದೇ ಈ ಆಂದೋಲನದ ಉದ್ದೇಶವಾಗಿತ್ತು. ಜೀವ–ಬ್ರಹ್ಮ ಒಂದೇ ಎಂಬ ಉದ್ಘೋಷಣೆ ತತ್ಕಾಲೀನ ಮುಸ್ಲಿಮ ಸಿದ್ಧಾಂತದ ವಿರುದ್ಧವಾದುದರಿಂದ ಅನಲ್‌ಹಕ್ (ಅಹಂ ಬ್ರಹ್ಮಾಸ್ಮಿ) ಎಂದು ಘೋಷಣೆ ಮಾಡಿದ ಮನ್ಸೂರನು ಜೀವ ತೆತ್ತಬೇಕಾಯಿತು.

ಆಡಂಬರವಾದಿ, ಹಾಗು ಕಟ್ಟರ ಪಂಥೀಯರ ಖಂಡನೆ ಹಾಗೂ ವ್ಯಂಗೋಕ್ತಿಗಳು ಹೊಸ ದರ್ಶನದಲ್ಲಿ ಸ್ಥಾನ ಪಡೆದವು. ಈ ಹೊಸ ಅಲೆಯಿಂದ ಹಾಫಿಜ ಮತ್ತು ಖೈಯಾಮ ಇವರ ಸುಂದರ ಮತ್ತು ಸ್ವಚ್ಛಂದ ಪ್ರವೃತ್ತಿಯನ್ನು ವಿಶ್ವಸಾಹಿತ್ಯವು ಸ್ವಾಗತಿಸಿತು.

ನಿರಾಶೆ ಮತ್ತು ದುಃಖಾತ್ಮಕ ಅನಿಸಿಕೆಗಳು ಸಹ ಹಾಲಾವಾದದ ಜನ್ಮಕ್ಕೆ ಕಾರಣೀಭೂತವಾಗಿವೆ. ಆದರೆ ಈ ವಾದ ಪಲಾಯನವಾದಕ್ಕಿಂತ (Escapism) ಭಿನ್ನವಾದುದು ಎಂಬುದರಲ್ಲಿ ಸಂಶಯವಿಲ್ಲ. ಏಕೆಂದರೆ ಪಲಾಯನವಾದದ ಒಲವು ಅನಾಸಕ್ತಿ ಹಾಗೂ ವೈರಾಗ್ಯದತ್ತವಿದ್ದರೆ ಹಾಲಾವಾದದ ಒಲವು ಮಾನವನನ್ನು ವಿಮುಗ್ಧನನ್ನಾಗಿ ಮಾಡುವುದಲ್ಲದೆ ಮಾದಕತೆಯ ವ ವಿಸ್ಮೃತಿಮಯ ಲೋಕದತ್ತ ಎಳೆದೊಯ್ಯುತ್ತದೆ.

ಫಾರಸಿ, ಉರ್ದು ಮತ್ತು ಫಿಟ್ಜಜೆರಾಲ್ಡ ನಿಂದ ಆಂಗ್ಲ ಭಾಷೆಯಲ್ಲಿ ಅನುವಾದಿತವಾದ ಉಮರನ ರೂಬಾಯಿಗಳ ಮಾಧ್ಯಮದಿಂದ ಹಾಲಾವಾದವು ಭಾರತೀಯ ಸಾಹಿತ್ಯದಲ್ಲಿ ಕಾಲು ಚಾಚಿತು. ನಾಸ್ತಿಕವಾದದ ಆಚಾರ್ಯ ಚಾರ್ವಾಕರ ಭೌತಿಕ ವಾದಿ ದರ್ಶನವು ಈ ವಾದವು ಬೆಳೆದು ಬರಲು ಸಹಾಯ ಮಾಡಿತು. ಚಾರ್ವಾಕ್ ದರ್ಶನ ಹೀಗೆ ಹೇಳುತ್ತದೆ.

‘ಯಾವದ್ ಜೀವೇತ್ ಸುಖಂ ಜೀವೇತ್
ಖುಣಂ ಕೃತ್ವಾ ಘೃತಂ ಪಿಬೇತ್
ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಂ ಕೃತ.’

ಅರ್ಥಾತ್ ಜೀವವಿರುವವರೆಗೆ ಸುಖದಿಂದ ಜೀವಿಸು, ಸಾಲ ಮಾಡಿಯಾದರೂ ತುಪ್ಪ ತಿನ್ನು, ಈ ದೇಹವು ಭಸ್ಮೀಕೃತವಾದೀತು. ಪುನಃ ಈ ದೇಹದ ಅಸ್ತಿತ್ವ ಎಲ್ಲಿ ? ಶರೀರದ ಅಸ್ತಿತ್ವವೇ ಜೀವನ. ಈ ಭೌತಿಕ ಪದಾರ್ಥಗಳು ಈ ಶರೀರ ಸುಖಕ್ಕಾಗಿಯೇ ನಿರ್ಮಿಸಲ್ಪಟ್ಟಿವೆ. ಇವುಗಳಿಂದ ವಿರಕ್ತಿ ಹೊಂದುವುದು ಜೀವನದ ನಿರರ್ಥಕತೆಯಾಗಿದೆ. ಸುಖ ಭೋಗಿಸುವುದಕ್ಕಾಗಿಯೇ ಈ ಜಗತ್ತಿನ ನಿರ್ಮಾಣವಾಗಿದೆ. ಭೋಗವಾದದಿಂದ ಪಲಾಯನ ಸತ್ಯದಿಂದ ಹಿಂದೆ ಸರಿದಂತೆ–ಎಂಬ ಈ ವಾದವು ಹಾಲಾವಾದದ ಜನ್ಮಕ್ಕೆ ಪೃಷ್ಠಭೂಮಿಯನ್ನು ತಯಾರಿಸಿತು.

ಮದಿರೆಯು ಮನುಷ್ಯನ ದುಃಖ–ದುಮ್ಮಾನ, ಅತೃಪ್ತಿ, ಆಶೆ-ಆಕಾಂಕ್ಷೆಗಳ ತಳಮಳವನ್ನು ಕೆಲಕ್ಷಣ ದೂರಮಾಡಿ ಅವನನ್ನು ವಿಮುಗ್ಧಗೊಳಿಸುತ್ತದೆ. ಅವನು ಅಷ್ಟು ಸಮಯದವರೆಗೆ ಮಾದಕ ಜೀವನವನ್ನು ಕಳೆಯುತ್ತಾನೆ. ಪಲಾಯನವಾದವು ನಿರಾಶೆ, ಅಸಫಲತೆಗಳಿಂದ ನೊಂದ ವ್ಯಕ್ತಿಯನ್ನು ಅತಿರಂಜಿತವಾದ ಸ್ವಪ್ನಲೋಕದತ್ತ ಒಯ್ಯುತ್ತದೆ. ಆದರೆ ಹಾಲಾವಾದವು ಯಥಾರ್ಥ ಭೋಗದತ್ತ ಪ್ರವೃತ್ತಗೊಳಿಸುವುದಲ್ಲದೆ ಭೂತ, ವರ್ತಮಾನ, ಭವಿಷ್ಯದ ಚಿಂತೆಗಳಿಂದ ವಿಮುಕ್ತಗೊಳಿಸಿ ಸಹಜಜೀವನ ನಡೆಸಲು ದಿಕ್-ಸೂಚಿಯನ್ನು ತೋರಿಸುತ್ತದೆ. ಆದುದರಿಂದ ಹಾಲಾವಾದವು ಮದಿರಾ-ಪಾನದ ಯಥಾರ್ಥ ಅರ್ಥವನ್ನು ನೀಡದೆ ಅದರ ತಾತ್ಪರ್ಯವನ್ನು ಸೂಕ್ಷ್ಮಾರ್ಥ ಮತ್ತು ಆಧ್ಯಾತ್ಮಿಕ ಅರ್ಥದಲ್ಲಿ ಸೂಚಿಸುತ್ತದೆ.

ಹಿಂದೀ ವಿದ್ವಾಂಸ ಶ್ರೀ ಭೂಪೇಶಚಂದ್ರ ಗುಪ್ತ ಹಾಲಾವಾದದ ಬಗ್ಗೆ ಹೀಗೆ ಹೇಳುತ್ತಾರೆ__'ಕವಿ ಮನುಷ್ಯನ ದುಃಖತಪ್ತ ಕತೆಯನ್ನು ಸಹಾನುಭೂತಿಯಿಂದ ಚಿತ್ರಿಸುತ್ತಾನೆ. ಮಾನವನ ಸಂತೋಷಕ್ಕಾಗಿ ಕವಿಯು ತನ್ನ ಅಭ್ಯಂತರ ಪ್ರಭಾವ-ಪೂರ್ಣ ವ ಸುಂದರ ಕಲ್ಪನೆಗಳ ಆಧಾರದಿಂದ ವಿಶ್ವದಲ್ಲಿ ಹಾಲಾಮಯ ಚೈತನ್ಯವನ್ನು ನೀಡುತ್ತಾನೆ "ಕ್ಷುದ್ರ ಕ್ಷಣಭಂಗುರ ದುರ್ಬಲ ಮಾನವನಿಗೆ ಜೀವನದ ಸಮಸ್ತ ವ್ಯಾಧಿಗಳಿಗೆ ಇದೊಂದು ಮಹೌಷಧಿ" ಎಂದು ಪ್ರಸಿದ್ಧ ಹಾಲಾವಾದಿ ಕವಿ ಡಾ॥ ಹರಿವಂಶರಾಯ ಬಚ್ಚನ ಅವರ ಅಭಿಪ್ರಾಯವಾಗಿದೆ.

ಪುನರ್ಜನ್ಮದಲ್ಲಿ ಅವಿಶ್ವಾಸ, ಸೌಂದರ್ಯೋಪಾಸನೆ, ಭೋಗ–ವಿಲಾಸಮಯ ಜೀವನದತ್ತ ಒಲವು, ರಾಜನೀತಿ, ಧರ್ಮ, ಸಂಸ್ಕೃತಿಯ ಬಗ್ಗೆ ಅನಾಸ್ಥೆ, ಕ್ಷಣಿಕ ಸುಖದಲ್ಲಿ ಆಸ್ಥೆ, ಜೀವನ-ಜಗತ್ತಿನ ಸಂಘರ್ಷದಲ್ಲಿ ಅವಿಶ್ವಾಸ, ಧರ್ಮಾಧರ್ಮ, ಪಾಪ ಪುಣ್ಯಗಳ ಅಸ್ತಿತ್ವ ಒಪ್ಪದಿರುವುದು, ಪ್ರತೀಕಾತ್ಮಕ ಅಭಿವ್ಯಕ್ತಿ ಇವು ಹಾಲಾವಾದದ ಪ್ರಮುಖ ವೈಶಿಷ್ಟ್ಯಗಳಾಗಿವೆ.

ಭಾರತೀಯ ಸಾಹಿತ್ಯದಲ್ಲಿ ಹಾಲಾವಾದವು ೨೦ನೆಯ ಶತಮಾನದಲ್ಲಿ ಕಾಲಿರಿಸಿತು. ಜೀವನ ರಸ(ಮದಿರಾ) ಶುಷ್ಕವಾಗುವುದಕ್ಕೆ ಮೊದಲೆ ಜಾಗೃತರಾಗಿ ಕಾಲ್ಪನಿಕ) ಸುಖಪಾನ ಮಾಡಬೇಕು. ಭವಿಷ್ಯದ ನಾಳೆ ಇನ್ನೂ ಹುಟ್ಟಿಲ್ಲ, ಗತಕಾಲ ಮೃತವಾಗಿದೆ. ಆದ್ದರಿಂದ ಇವೆಲ್ಲವುಗಳ ಚಿಂತನೆ ಮಾಡದೆ ಇಂದೇ ಜೀವನವನ್ನು ಸಂತುಷ್ಟಗೊಳಿಸು" ಎಂಬುದು ಹಾಲಾವಾದಿಗಳ ಸಂದೇಶವಾಗಿದೆ.

ಹಿಂದೀ ಸಾಹಿತ್ಯದಲ್ಲಿ ಹಾಲಾವಾದ

ಸನ್ ೧೯೨೦ರ ಸುಮಾರು ಉಮರಖೈಯಾಮ ಮತ್ತು ಅವನ ಕಾವ್ಯದ ಚರ್ಚೆ ತತ್ಕಾಲೀನ ಪ್ರಸಿದ್ಧ ಹಿಂದೀ ಪತ್ರಿಕೆ 'ಸರಸ್ವತಿಯಲ್ಲಿ ಪ್ರಕಾಶನಗೊಂಡಿತು. ಆದರೆ ಹೆಚ್ಚು ಪ್ರಚಾರ ಮತ್ತು ಪ್ರಸಿದ್ಧಿ ಪಡೆದುದು ಕ್ರಿ. ಶ. ೧೯೩೦ರ ಸುಮಾರು. ಈ ವಾದದ ಪ್ರಚಾರಕ್ಕೆ ದೇಶದ ತತ್ಕಾಲೀನ ಪರಿಸ್ಥಿತಿಗಳು ಸಹ ಕಾರಣೀಭೂತವಾಗಿದ್ದವು. ಈ ಸಮಯದಲ್ಲಿ ಶಿಕ್ಷಣ, ಸಾಹಿತ್ಯ, ರಾಜನೀತಿ ಮೊದಲಾದ ಕ್ಷೇತ್ರಗಳಲ್ಲಿ ಪರಿವರ್ತನೆ ಕಂಡು ಬಂದಿತು. ಸನ್ ೧೯೨೦ ರಿಂದ ೩೦ರ ವರೆಗಿನ ಸಮಯದಲ್ಲಿ ಸತ್ಯಾಗ್ರಹದ ಅಸಫಲತೆ, ಆರ್ಥಿಕ ವೈಷಮ್ಯ, ನಿರುದ್ಯೋಗ ಮೊದಲಾದವುಗಳಿಂದ ಆಚ್ಛಾದಿತವಾದ ಈ ಕಾಲದಲ್ಲಿ ಉಮರಖೈಯಾಮನ ವಿಚಾರಗಳು ಹೊಸ ಚೈತನ್ಯ ನೀಡಿದವು, ಇದರಿಂದ ನಿರಾಶೆ ಮತ್ತು ತಾರುಣ್ಯದ ಉಯ್ಯಾಲೆಯಲ್ಲಿ ಹೊಯ್ದಾಡುವ ಪೀಳಿಗೆಗೆ ಈ ವಾದದ ವಿಚಾರಧಾರೆಯೊಂದು ಆಶ್ರಯ ತಾಣವಾಯಿತು. ಬಾಲಾ, ಪ್ಯಾಲಾ ಪ್ರತೀಕಗಳ ಕಾಲ್ಪನಿಕಲೋಕದಲ್ಲಿ ತನ್ನನ್ನು ತಾನು ಮರೆಯಲು ಪ್ರಯತ್ನಿಸಿದ. ಇಚ್ಛೆಗಳನ್ನು ನಿಯಂತ್ರಿಸುವ ಈ ಜಗತ್ತು ಅವನಿಗೆ ಕ್ರೀಡಾಸ್ಥಳವಾಗಿ ಕಾಣದೆ ಬಂದೀಗೃಹವಾಗಿ ಕಂಡಿತು.

ಹಿಂದೀ ಸಾಹಿತ್ಯದಲ್ಲಿ ಹಾಲಾವಾದಿ ಪ್ರವೃತ್ತಿ ಪ್ರಪ್ರಥಮವಾಗಿ ಕಂಡು ಬಂದುದು ಶ್ರೀ ಬಾಲಕೃಷ್ಣ ಶರ್ಮಾ ನವೀನ ಅವರ ಕಾವ್ಯದಲ್ಲಿ. ಆದರೆ ಈ ವಾದದ ಪ್ರವರ್ತಕ ಡಾ॥ ಹರಿವಂಶರಾಯ ಬಚ್ಚನರೆಂದು ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಆಂಗ್ಲಭಾಷಾ ತಜ್ಞರಾದ ಕವಿ ಬಚ್ಚನರು ಫಿಟ್ಜಜೆರಾಲ್ಡ ರಿಂದ ಆಂಗ್ಲ ಭಾಷೆಯಲ್ಲಿ ಅನೂದಿತವಾದ ಉಮರನ ಕಾವ್ಯದಿಂದ ಅತ್ಯಂತ ಪ್ರಭಾವಿತರಾದರು. ತತ್ಪರಿಣಾಮವಾಗಿ, ಮಧುಶಾಲಾ (ಸನ್ ೧೯೩೫), ಮಧುಬಾಲಾ (೧೯೩೬). ಮಧುಕಲಶ (೧೯೩೭) ಮೊದಲಾದ ಮಧುಕಾವ್ಯಗಳನ್ನು ರಚಿಸಿದರು. ಬಚ್ಚನ ಕಾವ್ಯದಲ್ಲಿ ವಾಸ್ತವಿಕತೆಯ ಉಪೇಕ್ಷೆ ಇಲ್ಲದಿರುವುದರಿಂದ ಪಲಾಯನವಾದವು ಇವರ ಕೃತಿಗಳಲ್ಲಿ ಕಾಣಸಿಗದು. ವಾಸ್ತವಿಕತೆಯ ಶುಷ್ಕತೆಯನ್ನು ಹಸಿರು ಹಾಗೂ ರಸವತ್ತಾಗಿ ಮಾಡಬೇಕೆಂಬ ಸಂದೇಶ ಈ ಕಾವ್ಯಕೃತಿಗಳಲ್ಲಿ ಕಂಡು ಬರುತ್ತದೆ.

ಹಾಲಾವಾದವಾದದರೂ ದುಃಖ ಕಡಿಮೆ ಮಾಡಲು ಮತ್ತು ಪಲಾಯನ ಇಲ್ಲವೆ ಆತ್ಮಹತ್ಯೆಗೆ ಪ್ರೇರೆಪಿಸದೆ ಕ್ಷಣಿಕ ಸುಖಾಂಶಗಳನ್ನಾದರೂ ಸಮುಪಯೋಗ ಪಡಿಸಲು ಪ್ರೇರೇಪಿಸುತ್ತದೆ. ಕವಿ ಈ ಕ್ಷಣಭಂಗುರ ಜೀವನದಲ್ಲಿ ವಿಷಾದದ ಪ್ರಾಧಾನ್ಯ, ಸುಖದ ನಾಲ್ಕಾರು ಕ್ಷಣಗಳನ್ನು ಕಂಡ ಕವಿ ಆ ಕ್ಷಣಗಳನ್ನು ಆನಂದಪೂರ್ವಕವಾಗಿ ವಿನಿಯೋಗಿಸಲು ಕರೆನೀಡುತ್ತಾನೆ. 'ಮಧುಕಲಶ' ಕಾವ್ಯದಲ್ಲಿ ಕವಿಯ ಸಂದೇಶ ಇಂತಿದೆ—

ಜೀವನದಲ್ಲಿ ದುಃಖ–ಸುಖಗಳ ಕ್ಷಣಗಳುಂಟು,
ಜೀವನದಲ್ಲಿ ಪ್ರಾಪ್ತಿ-ನಿವೃತ್ತಿಯ ಕ್ಷಣಬರುತ್ತವೆ.

* * *

ಪ್ರಿಯತಮ ನೀ ನನ್ನ ಮದಿರೆ, ನಾ ನಿನ್ನ ತೃಷಿತ ಬಟ್ಟಲು,
ನಿನ್ನನ್ನು ನನ್ನಲ್ಲಿ ತುಂಬಿ ನೀನಾಗುತ್ತಿ ಪಾನ-ಪ್ರಿಯ.

* * *

ಕಟು ಸಂಸಾರದಲ್ಲಿ ಮಧುಪಾನ ಮಾಡು
ಜಗದ ಕ್ರಂದನದಲಿ ಗಾನವ ಮಾಡು
ಮಾದಕತೆಯ ಸಮ್ಮಾನವನು ಮಾಡು
ಈ ಪಾಠ ಓದಿಸುವವ ನಾನೇ ಮಾಲಿಕ-
ಮಧುಶಾಲೆ.

ಉಮರನ ಕಾವ್ಯದಿಂದ ಪ್ರಭಾವಿತರಾದ ಕವಿಗಳಲ್ಲಿ ಕವಿ ಸುಮಿತ್ರಾನಂದನ ಪಂತರು ಸಹ ಒಬ್ಬರು. ಆದರೆ ಬಚ್ಚನರಂತೆ ಈ ಕ್ಷೇತ್ರದಲ್ಲಿ ಪ್ರಖ್ಯಾತರಾಗಲಿಲ್ಲ. ಮದಿರೆಯಿಂದ ಉನ್ಮತ್ತರಾಗಿ ಎಲ್ಲಿ ದುಃಖಗಳಿಂದ ಮುಕ್ತಿ ಪಡೆವ ಇಚ್ಛೆ ಇವರು ತಮ್ಮ ಹಾಲಾವಾದಿ ಗೀತವೊಂದರಲ್ಲಿ ವ್ಯಕ್ತಗೊಳಿಸಿದ್ದಾರೆ –

ಉಮರನಿಗಿಲ್ಲ ಸ್ವರ್ಗದ ಆಶೆ
ಸುರೆಯಲಿ ತುಂಬಿದೆ ಸ್ವರ್ಗ ಸಾರ
ಮದಿರಾಲಯವಿದು ಸ್ವರ್ಗದ ದಾರಿ
ಸುರಾಲಯ ದ್ವಾರ ಸ್ವರ್ಗದ ದ್ವಾರ.

'ಇಂಥ ಭಾಗ್ಯಶಾಲಿ ತುಟಿಗಳಿಗಾಗಿ ಮೀಸಲು ನನ್ನ ಜೀವನ'ವೆಂದು ಹಾಡುವ ಮತ್ತು ಮಾದಕ ಅಧರ ಸೌಂದರ್ಯದಲ್ಲಿ ಲೀನವಾಗುವ ಸಂದೇಶ ನೀಡಿದ ಕವಿ

ಡಾ॥ ಧರ್ಮವೀರ ಭಾರತಿಯವರು ಕ್ರೋಧತಪ್ತ ನಾಯಿಕೆಯಲ್ಲಿ ಸಹ ಸೌಂದರ್ಯ-ವನ್ನು ಕಾಣುತ್ತಾರೆ.

ಭಗವತೀಚರಣ ಹಾಲಾವಾದದಿಂದ ಪ್ರಭಾವಿತರಾಗಿ 'ಮಧುಕಣ' ರಚಿಸಿ ಮಧುಶಾಲೆಯ ಅನುಭೂತಿಯನ್ನು ಅಭಿವ್ಯಕ್ತಗೊಳಿಸಿದ್ದಾರೆ.

ಕನ್ನಡ ಸಾಹಿತ್ಯದಲ್ಲಿಯೂ 'ಉಮರನ ಒಸಗೆ' ಎಂಬ ಗ್ರಂಥ ರಚಿಸಿ ಡಿ. ವಿ. ಜಿ. ಅವರು ಈ ದಿಶೆಯಲ್ಲಿ ಹೆಜ್ಜೆಯನ್ನೇನೊ ಇಟ್ಟರು. ಆದರೆ ಕನ್ನಡ ಸಾಹಿತ್ಯದಲ್ಲಿ ಈ ಪ್ರವೃತ್ತಿ ವಿಶೇಷ ಬೆಳೆದು ಬರಲಿಲ್ಲ.

●

ಆಧುನಿಕ ತೆಲುಗು ಕವಿತೆ
ಒಂದು ಸಮೀಕ್ಷೆ

● ಎಸ್. ಜಯಪ್ರಕಾಶ, ಹರಿಕೃಷ್ಣ ಭರಣ್ಯ

ಹಿನ್ನೆಲೆ :

೨೦ನೇ ಶತಮಾನದ ಆರಂಭದಿಂದ ತೆಲುಗು ಕವಿತೆಯಲ್ಲಿ ಒಂದು ಹೊಸ ಚೈತನ್ಯವು ಆರಂಭವಾಯಿತು. ಪ್ರಾಚೀನ ಕಾವ್ಯ ಸಂಪ್ರದಾಯವನ್ನು ಧಿಕ್ಕರಿಸುವುದರೊಂದಿಗೆ ಅಂದಿನ ತೆಲುಗು ರಾಜ್ಯದ ರಾಜಕೀಯ ಹಾಗೂ ಸಾಮಾಜಿಕ ಪರಿಸ್ಥಿತಿಯ ಹಿನ್ನೆಲೆಯಿಂದ ಹೊಸ ತೆಲುಗು ಕಾವ್ಯವು ರೂಪುಗೊಂಡಿತು ಎಂದು ಹೇಳಬಹುದು. ಕಳೆದ ಇನ್ನೂರು ವರ್ಷಗಳಿಂದ ಬ್ರಿಟಿಷ ಆಳ್ವಿಕೆಯಿದ್ದು ಅವರಿಂದಾಗಿ ಭಾರತೀಯರಲ್ಲಿ ರಾಷ್ಟ್ರೀಯ ಏಕತಾ ಮನೋಭಾವವು ಏರ್ಪಟ್ಟಿತ್ತು. ಜಪಾನು ಐರ್ಲೆಂಡು ರಷ್ಯ ಚೀನಾ ಮೊದಲಾದ ದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟ ವಿಜಯದಿಂದಾಗಿ ಭಾರತೀಯರಲ್ಲೂ ದೇಶಭಕ್ತಿ ಇಮ್ಮಡಿಸಿತು. ಕಾಂಗ್ರೆಸ್ ಸ್ಥಾಪನೆಯ ಅನಂತರ ಭಾರತದೇಶದಲ್ಲೂ ರಾಷ್ಟ್ರೀಯ ಸಂಘಟನಾ ಆಂದೋಲನವು ಆರಂಭವಾಯಿತು. ಬಾಲ್ಯವಿವಾಹ, ಸತೀ ಸಹಗಮನ ಮೊದಲಾದ ಸಾಮಾಜಿಕ ಪಿಡುಗುಗಳು ತೆಲುಗು ಕವಿಗಳನ್ನು ಸ್ಪಂದಿಸುವಂತೆ ಮಾಡಿದುವು. ವೀರೇಶಲಿಂಗಂ, ಪಂತುಲು ಮೊದಲಾದವರು ಸಾಮಾಜಿಕ ಬದಲಾವಣೆಗಳನ್ನು ತರುವಲ್ಲಿ ಕಾವ್ಯವನ್ನು ಉಪಕರಣವನ್ನಾಗಿ ಆರಿಸಿಕೊಂಡರು. ಜಾತೀಯ ಪದ್ಧತಿಗಳನ್ನು ತೊಲಗಿಸಿ ಏಕತೆಯನ್ನು ಸ್ಥಾಪಿಸುವುದು, ಸಾಮಾಜಿಕ ಬದಲಾವಣೆಗಳನ್ನು ಜನರಲ್ಲಿ ಪ್ರೇರೇಪಿಸುವುದು ಮೊದಲಾದುವು ಅವರ ಉದ್ದೇಶವಾಗಿತ್ತು. ಅಲ್ಲದೆ, ತೆಲುಗು ಕವಿಗಳ ಮೇಲೆ ಇಂಗ್ಲಿಷ ಭಾಷೆಯ ಪ್ರಭಾವವೂ ಬೀರತೊಡಗಿತ್ತು. ವರ್ಡ್ಸ್‌ವರ್ತ್, ಶೆಲ್ಲಿ, ಕೀಟ್ಸ್, ಬೈರನ್ ಮೊದಲಾದ ರೊಮ್ಯಾಂಟಿಕ್ ಕವಿಗಳ ಕವಿತೆಗಳು ಅವರನ್ನು ಆಕರ್ಷಿಸಿದ್ದು, ತೆಲುಗು ಕವಿಗಳು ಅವರಿಂದ ಪ್ರಭಾವಿತರಾಗಿ ಕವಿತೆಗಳಲ್ಲಿ ಹೊಸ ಪ್ರಯೋಗಗಳನ್ನು ನಡೆಸತೊಡಗಿದರು. 'ಪ್ರಬಂಧ ಕವಿತೆ' ಮಧ್ಯಕಾಲೀನ ಕವಿತೆ. ಸಾಂಪ್ರದಾಯಿಕ ಹಳೆ 'ಚಿತ್ರಕವಿತೆ' ಗಳೇ ತುಂಬಿಕೊಂಡಿದ್ದ ತೆಲುಗು ಕಾವ್ಯಕ್ಕೆ ಹೊಸ ಉತ್ತೇಜನ ದೊರಕಿತು. ಒಟ್ಟಿನಲ್ಲಿ ಸಮಾಜದ ಜಾತೀಯ ಪಿಡುಗುಗಳ ನಿರ್ಮೂಲನ ಹಾಗೂ ಪಾಶ್ಚಾತ್ಯ ಕವಿತೆಗಳ ಪ್ರಭಾವ ಮೊದಲಾದುವು ತೆಲುಗಿನಲ್ಲಿ ಆಧುನಿಕ ಕವಿತೆಯು ರೂಪುಗೊಳ್ಳಲು ಕಾರಣವಾಯಿತು.

ಆಧುನಿಕ ತೆಲುಗು ಕವಿತೆಯ ಮೊದಲ ವಿಭಾಗವಾಗಿ ಭಾವಗೀತೆಯು ಹುಟ್ಟಿಕೊಂಡಿತು.

1. ಭಾವಗೀತೆ (ಭಾವ ಕವಿತ್ವ : Lyrical Poetry)

೧೯೦೦ ರಿಂದ ೧೯೩೦ರ ವರೆಗೆ ಭಾವಗೀತೆ ಎಂಬ ಪ್ರಕಾರವು ತೆಲುಗು ಕವಿತೆಯಲ್ಲಿ ಪ್ರಭಾವವನ್ನು ಬೀರಿದ ಕಾವ್ಯಪ್ರಕಾರ. ಕಾವ್ಯರಚನೆಯಲ್ಲಿ ಭಾವ, ವಸ್ತು ಮತ್ತು ರಚನಾತಂತ್ರ ಎಂಬ ಮೂರು ಅಂಗಗಳು ಉಂಟಾದುವು. ಭಾವಕ್ಕೆ ಅತ್ಯಧಿಕ ಪ್ರಾಧಾನ್ಯ ಕೊಡಲಾದ ಕವಿತೆಯೇ ಭಾವಗೀತೆ ಎಂದು ಹಲವರ ಅಭಿಪ್ರಾಯ. ಈ ಕವಿತೆಯಲ್ಲಿ ವಸ್ತುವಿಗೆ ಇರುವ ಪ್ರಾಧಾನ್ಯಕ್ಕಿಂತ ಭಾವಕ್ಕೆ ಅಧಿಕ. ಕವಿಯು ತನ್ನ ಕಲ್ಪನಾಲೋಕವನ್ನು ತೋರಗೊಡದೆ ತನ್ನ ಹೃದಯದ ಸಂವೇದನೆಗಳನ್ನು ತೆರೆದಿಡುವುದೇ ಭಾವಗೀತೆಯ ತಿರುಳು. ಆ ಮೊದಲು ಕವಿತೆಯ ವಸ್ತುವಿನ ಆಯ್ಕೆಯಲ್ಲಿ ಸೀಮಿತತೆ ಇತ್ತು. ಆದರೆ ಭಾವಗೀತೆಯ ರಚನೆಗೆ ವಸ್ತುವಿನ ಆಯ್ಕೆಯಲ್ಲಿ ಯಾವುದೇ ನಿಯಮವಿಲ್ಲ. ಹುಲ್ಲುಕಡ್ಡಿಯಿಂದ ಹಿಡಿದು ವಿಶಾಲ ಗಗನದ ವರೆಗೆ ಪ್ರಕೃತಿಯ ವಿವಿಧ ಅಂಶಗಳು ಕವಿತೆಗೆ ವಸ್ತುವಾಗಬಹುದಿತ್ತು.

ರಾಯಪ್ರೋಲು ಸುಬ್ಬಾರಾವು, ಗುರಜಾಡ ಅಪ್ಪಾರಾವು ಇವರಿಬ್ಬರನ್ನು ಆಧುನಿಕ ತೆಲುಗು ಕವಿತೆಯ ಯುಗಕರ್ತರೆಂದು ಕರೆಯಬಹುದು. ೧೯೧೦ರಲ್ಲಿ ಪ್ರಕಟವಾದ ಗುರಜಾಡ ಅಪ್ಪಾರಾವು ಅವರ 'ಮುತ್ಯಾಲ ಸರಾಲು' (ಮುತ್ತಿನ ಸರ) ತೆಲುಗು ಸಾಹಿತ್ಯಲೋಕದಲ್ಲಿ ಒಂದು ಅಪರೂಪವಾದ ಪ್ರಯೋಗವೆನ್ನಬಹುದು. ವಸ್ತು, ಭಾವ ಹಾಗೂ ರಚನೆಗಳಲ್ಲಿ ಇದರಲ್ಲಿ ನವ್ಯತೆಯನ್ನು ಪ್ರಕಟಪಡಿಸಿದುದು ಉಳಿದ ಕವಿಗಳಿಗೆ ಮಾರ್ಗದರ್ಶಿಯಾಗಿದೆ. ರಾಯಪ್ರೋಲು ಸುಬ್ಬಾರಾವು ಅವರ 'ತೃಣ ಕಂಕಣಂ', 'ಕಷ್ಟಕಮಲ' ಮೊದಲಾದ ಕವಿತೆಗಳು ಶೃಂಗಾರ ಪ್ರಿಯತೆಗೆ ಆ ಹಿಂದೆ ಇದ್ದ ಅಭಿಪ್ರಾಯಗಳನ್ನು ಪೂರ್ತಿಯಾಗಿ ತೊಡೆದು ಹಾಕಿ ಹೊಸತಾದ ಅಭಿಪ್ರಾಯವನ್ನು ಕೊಟ್ಟಿವೆ. ಸ್ತ್ರೀಯನ್ನು ಕಾಮದ ವಸ್ತುವನ್ನಾಗಿ ಪರಿಗಣಿಸದೆ. ಸೌಂದರ್ಯಾರಾಧನೆ ಹಾಗೂ ಗೆಳೆತನದ ವಸ್ತುವನ್ನಾಗಿ ಇದರಲ್ಲಿ ವರ್ಣಿಸಲಾಗಿದೆ.

ವಿವಿಧ ಮನೋಭಾವ, ಶೈಲಿ, ವಿನ್ಯಾಸಗಳುಳ್ಳ ಭಾವಗೀತೆಗಳನ್ನು ವಿವಿಧ ಭಾಗಗಳಾಗಿ ವಿಂಗಡಿಸಬಹುದು.

i) ಪ್ರಣಯ ಗೀತೆಗಳು
ii) ಪ್ರಕೃತಿ ಗೀತೆಗಳು
iii) ಸಮಾಜ ಸುಧಾರಕ ಗೀತೆಗಳು
iv) ದೇಶಭಕ್ತಿ ಗೀತೆಗಳು
v) ಭಕ್ತಿಗೀತೆಗಳು
vi) ಚರಮಗೀತೆಗಳು

i) ಪ್ರಣಯ ಗೀತೆಗಳು : ಭಾವಗೀತೆ ಎಂದರೇನೇ ಪ್ರಣಯಗೀತೆ ಯೆನ್ನುವ ಮಟ್ಟದಲ್ಲಿ ಭಾವಗೀತೆಯಲ್ಲಿ ಪ್ರಣಯವು ಮನೆ ಮಾಡಿರುತ್ತದೆ. ಸ್ತ್ರೀ–ಪುರುಷರ ಮಧ್ಯೆ ಯಾವುದೇ ಕಾಮಾಸಕ್ತಿಯಿಲ್ಲದೆ, ಸ್ನೇಹಭಾವವೇ ಮುಖ್ಯವೆಂದು ಭಾವಕವಿಗಳು ಅಭಿಪ್ರಾಯ ಪಡುತ್ತಾರೆ. ಈ ಕವಿಗಳ ಪ್ರಣಯತತ್ವವು ವಿಲಕ್ಷಣ ವಾದುದು. ಒಂದುಗೂಡುವಿಕೆಗಿಂತ ಬೇರಾಗುವಿಕೆ, ಆ ಬೇರಾಗುವಿಕೆಯ ದುಃಖ (ವಿರಹ)ದಲ್ಲೇ ಆನಂದವಿರುತ್ತದೆ ಎನ್ನುವುದೇ ಅವರ ಮನೋಭಾವನೆ. ಪಾಶ್ಚಾತ್ಯ ಕವಿಗಳು ಹೇಳುವ 'ಪ್ಲೆಟಾನಿಕ್ ಲವ್' (Platonic love)ನ ಪ್ರಭಾವ ಇಲ್ಲಿ ಕಾಣಬಹುದು.

ಪ್ರಣಯ ಗೀತೆಗಳಿಗೆ ಉದಾಹರಣೆಯಾಗಿ ರಾಯಪ್ರೋಲು ಸುಬ್ಬಾರಾವು ಅವರ 'ತೃಣಕಂಕಣಂ', 'ಕಷ್ಟಕಮಲ', 'ಸ್ವಪ್ನಸುಕುಮಾರಮು', ಅಬ್ಬೂರಿ ಯವರ 'ಮಲ್ಲಿಕಾಂಬ', ಮುಪ್ಪೂರಿ ರಾಮರೆಡ್ಡಿಯವರ 'ಕಡಪಟಿ ವೀಟ್ಕೋಲು' (ಕೊನೆಯ ವಿದಾಯ), ವಿಶ್ವನಾಥ ಸತ್ಯನಾರಾಯಣ ಅವರ 'ಕಿನ್ನೆರ ಸಾನಿ ಪಾಟಲು', ದೇವುಲಪಲ್ಲಿ ಕೃಷ್ಣಶಾಸ್ತ್ರಿಯವರ 'ಕೃಷ್ಣ ಪಕ್ಷಮು', 'ಊರ್ವಶಿ', ನಂಡೂರಿ ಸುಬ್ಬಾರಾಯರ 'ಎಂಕಿ ಪಾಟಲು' ಮೊದಲಾದುವನ್ನು ಹೆಸರಿಸಬಹುದು.

ಜನ್ಮ ಸಾಫಲ್ಯವನ್ನು ಪಡೆಯಬೇಕಾದರೆ ಪ್ರೇಮದ ಸವಿಯನ್ನು ಸವಿಯ ಬೇಕು ಎನ್ನುತ್ತಾನೆ ಭಾವಗೀತೆ ಕವಿ :

> ಪ್ರೇಮವನರಿಯದೆ ಬದುಕು
> ಸುಖವಾಗಿ ಆನಂದವಾಗಿ ಇರುವುದಕ್ಕಿಂತ
> ಪ್ರೇಮಿಸಿ ವಿಫಲಗೊಂಡು
> ವಿಲಾಪಿಸುವುದೆ ಮೇಲು ಕಣೋ ![೧] (ಬಸವರಾಜ ಅಪ್ಪಾರಾವು)

ಪ್ರಾಕೃತಿಕ ಅಂಗಗಳು ಎಷ್ಟು ಸಹಜವೋ ಮಾನವನ ಪ್ರಣಯಭಾವವೂ ಅಷ್ಟೇ ಸಹಜವಾದುದು ಎಂದು ಕೃಷ್ಣಶಾಸ್ತ್ರಿಯವರು ಅಭಿಪ್ರಾಯ ಪಡುತ್ತಾರೆ :

> ಸೌರಭವು ಯಾಕೆ ಹೊರ ಹೊಮ್ಮುವುದು ಪುಷ್ಪಗುಚ್ಛದಿಂದ ?
> ಚಂದ್ರಿಕೆಯು ಯಾಕೆ ಹೊಮ್ಮುವುದು ಚಂದ್ರಮನಿಂದ ?
> ಸಲಿಲವು ಯಾಕೆ ಹರಿಯುವುದು ? ಗಾಳಿ ಯಾಕೆ ಬೀಸುವುದು ?
> ನನ್ನ ಹೃದಯವು ಯಾಕೆ ಪ್ರೇಮಿಸುವುದು ನಿನ್ನ ?[೨]
> (ಕೃಷ್ಣಪಕ್ಷಮು)

ವಿರಹವು, ದುಃಖದ ಕಾರಣದಿಂದ ಉಂಟಾದ ಸಂಪತ್ತು ಎಂದು ಕವಿಯಭಾವನೆ :

ನನಗೆ ನಿಟ್ಟುಸಿರೇ ತಾಳೆಗರಿ ಚಾಮರವು
ನನಗೆ ಕಣ್ಣೀರೇ ಹೂಮಾಲೆಗಳು
ನನಗೆ ಅಮೂಲ್ಯ ಅಪೂರ್ವ ಆನಂದವೀಯುವ
ನಿರುಪಮ ನಿತಾಂತ ದುಃಖದ ನಿಧಿಯು[೩]

(ಕೃಷ್ಣಪಕ್ಷಮು)

ii) **ಪ್ರಕೃತಿ ಗೀತೆಗಳು :** ಪಾಶ್ಚಾತ್ಯ ರೊಮ್ಯಾಂಟಿಕ್ ಕವಿಗಳ ಪ್ರಭಾವ-ದಿಂದ ಭಾವ ಕವಿಗಳು ತಮ್ಮ ದೃಷ್ಟಿಯನ್ನು ಪ್ರಕೃತಿಯ ಮೇಲೆ ಕೇಂದ್ರೀಕರಿಸಿದರು. ಪ್ರಕೃತಿಯನ್ನು ಸ್ವಾಭಾವಿಕವಾಗಿ ವರ್ಣಿಸುವುದರೊಂದಿಗೆ ಕವಿಗಳು ತಮ್ಮ ಆತ್ಮ ಸ್ಥಿತಿಗೆ ಅನುಗುಣವಾಗಿ ರೂಪಿಸಿಕೊಂಡರು. ತಮ್ಮ ಸುಖದುಃಖಗಳನ್ನು ಪ್ರಕೃತಿ-ಯಲ್ಲೇ ಕಾಣತೊಡಗಿದರು. ಪ್ರಕೃತಿಯನ್ನು ಸ್ನೇಹಿತನಾಗಿ, ಸ್ನೇಹಿತೆಯಾಗಿ, ಮಾತೃಸ್ವರೂಪಿಯಾಗಿ, ಆರಾಧ್ಯದೇವತೆಯಾಗಿ, ಭಗವಂತನ ಸ್ವರೂಪವಾಗಿ ಭಾವಿಸಿ ಚಿತ್ರಿಸಿದರು. ಪ್ರಕೃತಿಯ ಪ್ರತಿಯೊಂದು ಚಲನವಲನಗಳನ್ನು ಆನಂದವೋ ಆವೇಶವೋ ದುಃಖವೋ ಆಗಿ ಅನುಭವಿಸಿದರು—

ಎಲೆಯಲ್ಲಿ ಎಲೆಯಾಗಿ ಹೂವಲ್ಲಿ ಹೂವಾಗಿ
ಕಾಂಡದಲಿ ಕಾಂಡವಾಗಿ ಎಳೆಯ ರೆಂಬೆಯಾಗಿ
ಈ ಅಡವಿಯಲಿ ಅಡಗಲೇ ?
ಹೇಗಾದರೂ
ಇಲ್ಲೇ ಇದ್ದು ಬಿಡಲೇ ?[೪]

(ಕೃಷ್ಣಶಾಸ್ತ್ರಿ)

ಎಂದು ಹೇಳುತ್ತಾ ಜಂಜಾಟದ ಈ ಲೋಕದಿಂದ ಮರೆತು ಹೋಗುವುದ ಕ್ಕಾಗಿ ಪ್ರಕೃತಿಯೊಂದಿಗೆ ಲೀನವಾಗಬೇಕೆಂದು ಕವಿ ಆಶಿಸುತ್ತಾನೆ.

ಈ ರೀತಿಯ ರಚನೆಗಳಿಗೆ ಉದಾಹರಣೆ ದುವ್ವೂರಿ ರಾಮರೆಡ್ಡಿಯವರ 'ಕೃಷೀವಲುಡು' (ಕೃಷಿಕ), 'ಗರಿಕ' (ಗರಿಕೆ), ರಾಯಪ್ರೋಲು ಅವರ 'ಮಧು ಮಾಲಿ', 'ವಸಂತವಿಕಾಸಮು', ಬಸವರಾಜು ಅಪ್ಪಾರಾವು ಅವರ 'ಕೋಕಿಲ', ಕೃಷ್ಣಶಾಸ್ತ್ರಿಯವರ 'ಅನ್ವೇಷಣ', 'ಕೃಷ್ಣಪಕ್ಷಮು' ಮೊದಲಾದುವು. ಅಲ್ಲದೆ. ತಲ್ಲಾವಝ್ಝುಲ, ವೆಂಕಟ–ಪಾರ್ವತೀಶ್ವರ ಕವಿಗಳು, ಪಿಂಗಳಿ–ಕಾಟೂರಿ ಕವಿಗಳು. ಕವಿಕೊಂಡಲ, ನಾಯನಿ ಸುಬ್ಬಾರಾವು ಮೊದಲಾದವರು ಕೂಡಾ ತಮ್ಮ ಕವಿತೆಗಳಲ್ಲಿ ಪ್ರಕೃತಿಯನ್ನು ರಮಣೀಯವಾಗಿ ವರ್ಣಿಸಿದ್ದಾರೆ.

iii) **ಸಮಾಜ ಸುಧಾರಣಾಗೀತೆಗಳು** (ಸಂಘ ಸಂಸ್ಕರಣ ಕವಿತ್ವಮು) : ವೀರೇಶಲಿಂಗಂ, ರಘುಪತಿ ವೆಂಕಟರತ್ನಂ ನಾಯುಡು ಅವರುಗಳು ಸ್ಥಾಪಿಸಿದ ಸಮಾಜ ಸುಧಾರಣಾ ಆಂದೋಲನವು ಭಾವಗೀತೆ ಕವಿಗಳನ್ನು ಪ್ರಭಾವಿಸಿತು. ವೀರೇಶಲಿಂಗಂ ಅವರು ಕಾವ್ಯವನ್ನು ಸಮಾಜ ಸುಧಾರಣೆಯ ಉಪಕರಣವನ್ನಾಗಿ ಸ್ವೀಕರಿಸಿದರು. ಅದರಂತೆಯೇ ಭಾವಗೀತೆಯ ಕವಿಗಳು ಕೂಡಾ ತಮ್ಮ ಕವಿತೆಗಳ ಮೂಲಕ ಆ ಕಾಲದ ಕುಲ. ಮತ, ವರ್ಣ ವ್ಯತ್ಯಾಸಗಳನ್ನು ಅಸ್ಪೃಶ್ಯತೆ, ಸಾಮಾಜಿಕ ವ್ಯವಸ್ಥೆ, ಬಾಲ್ಯವಿವಾಹಪದ್ಧತಿ. ಮದ್ಯಪಾನ ದುಶ್ಚಟಗಳನ್ನು ಮನದಟ್ಟು ಮಾಡಿಕೊಂಡು ಅದಕ್ಕೆ ಬಲಿಯಾಗುವ ವ್ಯಕ್ತಿಗಳ ಜೀವನವನ್ನು ಬೆಟ್ಟುಮಾಡಿ ತೋರಿಸಿದರು. ಪುರುಷರಂತೆಯೇ ಸ್ತ್ರೀಯರು ಕೂಡಾ ಸ್ವತಂತ್ರತೆಗೆ ಹಾಗೂ ವಿದ್ಯಾಗೌರವಗಳಿಗೆ ಅರ್ಹರು ಎಂದು ಸಾರಿದರು.

ಬಾಲ್ಯವಿವಾಹ, ವಿಧವೆಗಳ ದುರ್ದೆಶೆಗಳನ್ನು ಚಿತ್ರಿಸುತ್ತ ಸ್ತ್ರೀ ಸ್ವಾತಂತ್ರ್ಯವನ್ನು ಬಯಸುತ್ತ, ಗುರಜಾಡ ಅವರ 'ಪೂರ್ಣಮ್ಮ'. ರಾಯಪ್ರೋಲು ಅವರ 'ಸ್ನೇಹಲತ', ಮಂಗಿಪೂಡಿ ವೆಂಕಟಶರ್ಮ ಅವರ 'ಬಾಲತಂತು ವಿಲಾಪಮು', 'ಅಬಲಾ ವಿಲಾಪಮು' ಮೊದಲಾದ ಕವಿತೆಗಳು ಪ್ರಕಟಗೊಂಡವು.

ಕೆಳವರ್ಗದ ಜನರಿಗೆ ಸಮಾಜವು ತೋರಿಸುವ ನಿರ್ದಾಕ್ಷಿಣ್ಯತೆಗೆ ಎದುರು ನಿಂತು ಭಾವಕವಿಗಳು ಕವಿತೆಯ ರೂಪದ ಸವಾಲು ಎಸೆದರು. ಜಾಷುವಾ ಅವರ 'ಗಬ್ಬಿಲಂ' (ಬಾವಲಿ), ಕಾಟೂರಿಯವರ 'ಗುಡಿಗಂಟಲು', ವೆಂಕಟ–ಪಾರ್ವತೀಶ್ವರ ಕವಿಗಳ 'ಪಂಚಮಾಭಿನಂದನಂ'—ಈ ರೀತಿಯ ರಚನೆಗಳಲ್ಲಿ ಪ್ರಸಿದ್ಧವಾದುವುಗಳು. ಇವಕ್ಕೆ ಮೊದಲೇ ಗುರಜಾಡ ಅವರು ತಮ್ಮ 'ಲವಣರಾಜುಕಲ' (ಲವಣ ರಾಜನ ಕನಸು)ವಲ್ಲಿ "ಒಳ್ಳೆಯದೆನ್ನುವುದು ಹರಿಜನನಾದರೆ ನಾನು ಹರಿಜನನೇ ಆಗುವೆನು' ಎನ್ನುವ ಕವಿತೆಯನ್ನು ರಚಿಸಿದ್ದರು.

ತ್ರಿಪುರನೇನಿ ರಾಮಸ್ವಾಮಿ ಚೌಧುರಿಯವರು ತಮ್ಮ 'ಸೂತ ಪುರಾಣ'ದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಹೇಳುತ್ತ, 'ಪುರಾಣಗಳಲ್ಲಿನ ಕಥೆಗಳು ಅಸತ್ಯವಾದುವು. ಸ್ವಾರ್ಥಪರರಾದವರೇ ಶೂದ್ರವರ್ಗದವರನ್ನು ಸೃಷ್ಟಿಸಿದರು' ಎಂದು ಟೀಕಿಸಿದ್ದಾರೆ. ಗಾಂಧೀವಾದದ ಪ್ರಭಾವದಿಂದ ಸಮಷ್ಟಿಯ ಹಾಗೂ ಮಾನವನ ಶ್ರೇಯಸ್ಸನ್ನು ಬಯಸುತ್ತ, ತುಮ್ಮಲ ಕವಿಯ 'ಧರ್ಮಜ್ಯೋತಿ', 'ಆತ್ಮಾರ್ಪಣಂ' ಪಿಂಗಳೀ–ಕಾಟೂರಿಯವರ 'ಸೌಂದರನಂದಂ' ಮೊದಲಾದ ರಚನೆಗಳು ಹೊರಬಂದುವು. ಮದ್ಯಪಾನ ನಿಷೇಧ ಹಾಗೂ ವ್ಯಭಿಚಾರದ ಮೇಲೆ ಅನೇಕ ಕವಿತೆಗಳ ರಚನೆಯಾದುವು.

iv) **ದೇಶಭಕ್ತಿ ಗೀತೆಗಳು :** ಬ್ರಿಟಿಷರ ಆಳ್ವಿಕೆಯ ಪಾರತಂತ್ರ್ಯದಲ್ಲಿ ನೊಂದ ಪ್ರಜೆಗಳಲ್ಲಿ ದೇಶದ ಮೇಲೆ ಪ್ರೀತಿ, ಸ್ವಾತಂತ್ರ್ಯಾಭಿಲಾಷೆಗಳನ್ನು ಹುಟ್ಟಿಸುವಂತೆ ತಮ್ಮ ರಚನೆಗಳ ಮೂಲಕ ಭಾವಗೀತೆ ಕವಿಗಳು ಅನೇಕ ದೇಶಭಕ್ತಿಗೀತೆಗಳನ್ನು ರಚಿಸಿದರು. ಭಾವಕವಿಗಳಲ್ಲಿ ದೇಶಭಕ್ತಿಗೀತೆಯು ಎರಡು ವಿಧದಲ್ಲಿ ಪ್ರವಹಿಸಿತು. ಇದರಲ್ಲಿ ಒಂದು 'ಭಾರತ ದೇಶಾಭಿಮಾನ' (ಏಕತೆ), ಎರಡನೆಯದು 'ನಾಡಿನ ಅಭಿಮಾನ' (ರಾಜ್ಯಾಭಿಮಾನ).

ಭರತ ಖಂಡವು ಸುಂದರವಾದ ಈವ ಆವು
ಹಿಂದುಗಳು ಅಳುವ ಎಳೆಯ ಕರುಗಳು
ಬಿಳಿಯರು ಗಡುಸಿನ ಗೊಲ್ಲರು
ಹಾಲು ಕರೆಯುವರು ಬಾಯಿಗಳನು ಕಟ್ಟಿ[11]

ಚಿಲಕಮರ್ತಿ ಲಕ್ಷ್ಮೀನರಸಿಂಹ ಅವರ ಈ ರಚನೆಯೊಂದಿಗೆ ಆಂಧ್ರದೇಶದಲ್ಲಿ ರಾಷ್ಟ್ರೀಯಪ್ರಜ್ಞೆ ಕವಿತೆಯ ರಚನೆಗೆ ಬೀಜವಾಪನೆಯಾಯಿತು. ಹಾಗೆಯೇ ಗರಿಮೆಳ್ಳ ಸತ್ಯನಾರಾಯಣ ಅವರ 'ಮಾಕೊದ್ದೀ ತೆಲ್ಲ ದೊರೆತನಂ' (ನಮಗೆ ಬೇಡ ಬಿಳಿಯರ ಆಡಳಿತ) ಎನ್ನುವ ಕವಿತೆಯು ಆಂಧ್ರದಲ್ಲಿ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಿತು.

ಚಿಲಕಮರ್ತಿ ಲಕ್ಷ್ಮೀನರಸಿಂಹ, ರಾಯಪ್ರೋಲು ಸುಬ್ಬಾರಾವು, ಗರಿಮೆಳ್ಳ, ಗುರಜಾಡ, ಜಾಷುವಾ, ತುಮ್ಮಲ, ವೇದುಲ, ದುವ್ವೂರಿ, ಕರುಣಶ್ರೀ, ಬಸವರಾಜು ಮೊದಲಾದ ಕವಿಗಳು ದೇಶಭಕ್ತಿ ಗೀತೆಗಳನ್ನು ರಚಿಸಿದರು. ದೇಶವನ್ನೇ ದೇವರೆಂದೂ, ಸಮನ್ವಯತೆಯೇ ಧರ್ಮವೆಂದು ಬಗೆದುಕೊಂಡಿದ್ದ ಆದರ್ಶಜೀವಿಗಳು ತಮ್ಮ ಸರ್ವಸ್ವವನ್ನೂ ಸಮನ್ವಯತೆಗಾಗಿ ಅರ್ಪಿಸಿಕೊಂಡ ರಚನೆಗಳನ್ನು ಮಾಡಿದರು.

ಯಾವ ದೇಶಕ್ಕೆ ಹೋದರೂ ಎಲ್ಲಿ ಕಾಲಿಟ್ಟರೂ
ಯಾವ ಪೀಠ ವೇರಿದರೂ ಯಾರೇನು ಹೇಳಿದರೂ
ಹೊಗಳು ನೀ ತಾಯಿ ಭೂಮಿ ಭಾರತಿಯ
ರಕ್ಷಿಸು ನೀ ಧರ್ಮವ ತುಂಬು ಗೌರವದಿ[12]

—ದೇಶ–ಸೌಭಾಗ್ಯಗಳೊಂದಿಗೆ, ಧರ್ಮ–ದೇಶಗಳ ಔನ್ನತಿಕೆಗಳನ್ನು ಅಭಿಮಾನದಿಂದ ಹೇಳುತ್ತಾ ಜಾತೀಯ ಸಮೈಕತೆಗಳನ್ನು ಬಾಯಿತುಂಬ ಹೊಗಳಿದವರು ರಾಯಪ್ರೋಲು ಸುಬ್ಬಾರಾಯರು.

ಆಂಧ್ರಾಭಿಮಾನವನ್ನು ಪ್ರಕಟಿಸುತ್ತ, ಹಿಂದಿನ ವೀರರ ಶೌರ್ಯ, ಪರಾಕ್ರಮಂ-ಗಳನ್ನು ಸ್ಮರಿಸುತ್ತ, ಚಕ್ರವರ್ತಿಗಳ ತ್ಯಾಗಗಳನ್ನು ಹೊಗಳುತ್ತ, ಶಿಲ್ಪ ಸಂಗೀತದ ಲಲಿತಕಲಾ ಪ್ರಾವೀಣ್ಯಗಳಿಗೆ ತಲೆದೂಗುತ್ತ, ಕ್ಷೇತ್ರ, ನದಿ, ಸಂಪತ್ತುಗಳಿಗೆ ಅಭಿಮಾನಪಡುತ್ತ, ಭಾವಕವಿಗಳು ಕವಿತೆಗಳನ್ನು ಕಟ್ಟಿ ಹಾಡಿದರು. ವಿಶ್ವನಾಥ ಸತ್ಯನಾರಾಯಣ ಅವರ 'ಆಂಧ್ರಪ್ರಶಸ್ತಿ', 'ಆಂಧ್ರ ಪೌರುಷಮು', ರಾಯಪ್ರೋಲು ಅವರ 'ಆಂಧ್ರಮಾತಾ', ಕೊಡಾಲಿ ಆಂಜನೇಯುಲು ಅವರ 'ಹಂಪಿ ಕ್ಷೇತ್ರಮು', ಇಂದ್ರಗಂಟಿಯವರ 'ದಾಕ್ಷಾರಾಮಮು', ಪುಟ್ಟಪರ್ತಿಯವರ 'ಪೆನುಗೊಂಡ ಲಕ್ಷ್ಮಿ' ತುಮ್ಮಲರವರ 'ರಾಷ್ಟ್ರಗಾನಮು', ಜಂಧ್ಯಾಲರ 'ಉದಯಶ್ರೀ', ಜಾಷುವಾ ಅವರ 'ಅಶ್ರುಪೂಜಾ', 'ಅಖಂಡ ಗೌತಮಿ' ಮೊದಲಾದುವು ಆಂಧ್ರಾಭಿಮಾನವನ್ನು ಸೂಸುವ ರಚನೆಗಳು.

ವರ್ತಮಾನ ಕಾಲವಲ್ಲಿ ತೆಲುಗು ಧರ್ಮ-ಭಾಷೆಗಳಿಗೆ ಬಂದೊದಗಿದ ದುರ್ಗತಿಗಳಿಗೆ ವಿಷಾದಿಸುತ್ತ ವಿಶ್ವನಾಥ ಸತ್ಯನಾರಾಯಣ ಕವಿಗಳು ವ್ಯಂಗ್ಯವಾಗಿ ನೀಡಿದ ಸಲಹೆಯಿದು :

ಆಂಧ್ರದ ನದಿಗಳೆಲ್ಲ ಪೊಮ್ಮಿಬಂದು ಪ್ರಳಯವಾಗಿ
ಕೆರಳಿ ಬಿದ್ದು ತೆಲುಗು ನೆಲ ಮುಳುಗಿ ಹೋಗಲಿ
ಇಂದಿನಿಂದಲೇ ಅಸ್ವತಂತ್ರತೆಯ ನಿಯಮವುಳ್ಳ
ಈ ಬದುಕು ತೆಲುಗು ಜನ ಸಹಿಲಾರರು.[೭]

v) **ಭಕ್ತಿಗೀತೆಗಳು :** ಪ್ರಾಚೀನಕಾಲದಿಂದಲೂ ತೆಲುಗು ಕಾವ್ಯಗಳಲ್ಲಿ ಭಕ್ತಿಯನ್ನು ಕಾಣಬಹುದು. ಪ್ರಾಚೀನ ಕವಿಗಳು ಭಗವಂತನ ಮಹಿಮೆಗಳನ್ನು ಹೊಗಳುತ್ತ ಕ್ಷೇತ್ರಮಹಾತ್ಮೆ, ಸ್ಥಳಮಹಾತ್ಮೆ, ತೀರ್ಥಕ್ಷೇತ್ರಮಹಾತ್ಮೆ ಮೊದಲಾಗಿ ರಚಿಸಿದ್ದಾರೆ. ಭಕ್ತರ ಕಥೆಗಳು, ಭಗವಂತನ ಲೀಲೆಗಳು ಮೊದಲಾದುವು ಪ್ರಾಚೀನ ತೆಲುಗು ಕಾವ್ಯಗಳಲ್ಲಿ ಕಂಡುಬರುತ್ತವೆ. ಕಷ್ಟನಿಷ್ಠುರಗಳಿಗೆ ಬಲಿಯಾದ ಕವಿಯು ತನ್ನ ಸಂಕಟಗಳನ್ನು ಭಗವಂತನಲ್ಲಿ ನಿವೇದಿಸಿಕೊಳ್ಳುತ್ತಾನೆ. ಭಗವದಾರಾಧನೆ, ಆತ್ಮ ಪ್ರಕ್ಷಾಳನವಲ್ಲದೆ ಆತ್ಮಾರ್ಪಣ ತತ್ವವೂ ಕೂಡ ಭಾವಕವಿಗಳ ಪ್ರತ್ಯೇಕತೆಯಾಗಿದೆ.

ಭಾವಕವಿಗಳಲ್ಲಿ ಹೆಚ್ಚಿನವರು ಮಧುರ ಭಕ್ತಿಮಾರ್ಗವನ್ನು ಆಶ್ರಯಿಸಿದರು. ಪರಮಾತ್ಮನನ್ನೇ ಪ್ರಿಯಕರನನ್ನಾಗಿ, ತನ್ನನ್ನು ಪ್ರೇಯಸಿಯನ್ನಾಗಿ ಭಾವಿಸಿ ಭಗವಂತನನ್ನೇ ಸ್ಮರಿಸುತ್ತ, ಆತನಲ್ಲೇ ಐಕ್ಯವಾಗುವುದಕ್ಕೆ ಪ್ರಯತ್ನಿಸುತ್ತಾನೆ ಭಾವ ಕವಿ. ವೆಂಕಟ-ಪಾರ್ವತೀಶ್ವರರ 'ಏಕಾಂತಸೇವಾ', ಬಸವರಾಜು ಅವರ 'ವಟಪತ್ರಶಾಯಿ', ದೀಕ್ಷಿತರ 'ಮನವಿ', ಕವಿಕೊಂಡಲ ಅವರ 'ಶಿವರಾತ್ರಿ ಪ್ರಭಾ'

ವೇದುಲ ಅವರ 'ಉತ್ಕಂಠ', ಕೃಷ್ಣಶಾಸ್ತ್ರಿಯವರ 'ಮಹತಿ', 'ನೇಟಿ ರೇಯಿ' (ಇಂದಿನ ರಾತ್ರಿ), ಜಂಧ್ಯಾಲ ಅವರ 'ಉದಯಶ್ರೀ ಮೊದಲಾದವುಗಳು ಭಕ್ತಿ ಗೀತೆಗಳಲ್ಲಿ ಮುಖ್ಯವಾದುವುಗಳು.

vi) **ಚರಮಗೀತೆಗಳು** (ಸ್ಮೃತಿ ಕವಿತ್ವ–Elegy :) ಭಾವಗೀತೆಯ ವಿಭಾಗದಲ್ಲಿ ಚರಮಗೀತೆ (ಸ್ಮೃತಿ ಕವಿತ್ವ)ಯೂ ಒಂದು ಮುಖ್ಯವಾದ ಪ್ರಕಾರ. ಇದನ್ನು ಇಂಗ್ಲಿಷಿನಲ್ಲಿ 'ಎಲಿಜಿ' ಎನ್ನುತ್ತಾರೆ. ಯಾರಾದರೂ ಹತ್ತಿರದ ಬಂಧುಗಳು. ಆತ್ಮೀಯರು, ಪ್ರಿಯತಮ–ನಾಯಕರೋ ಶಾಶ್ವತವಾಗಿ ಅಗಲಿದಾಗ ಕವಿಯು ಅನುಭವಿಸಿದ ವೇದನೆಯನ್ನು ಕವಿತೆಯ ರೂಪದಿಂದ ಅಭಿವ್ಯಕ್ತಿಸಿದಾಗ ಅದು ಚರಮ (ಶೋಕ) ಗೀತೆಯಾಗುತ್ತದೆ. ಪ್ರೇಯಸಿಯ ಕ್ಷಣಿಕವಾದ ವಿರಹ ಸಂಕಟ ಪಡುವ ಕವಿಯ ಮೃದುವಾದ ಹೃದಯವು ಬಂಧು ಮಿತ್ರರು ಅಗಲಿದಾಗ ಎಷ್ಟೊಂದು ವೇದನೆ ಪಡಲಾರದು!

ವಿಶ್ವನಾಥ ಸತ್ಯನಾರಾಯಣ ರ 'ವರಲಕ್ಷ್ಮಿತ್ರಿಶತಿ'. ನಾಯನಿ ಸುಬ್ಬಾರಾಯರ 'ಮಾತೃಗೀತಾಲು', ದುವ್ವೂರಿಯವರ' 'ಭಗ್ನಹೃದಯಂ', ಬಸವರಾಜು ಅವರ 'ನಿರ್ಯಾಣ', ಅಬ್ಬೂರಿಯವರ 'ಊಹಾಗಾನಂ', ತುಮ್ಮಲರ 'ಅಮರ ಜ್ಯೋತಿ', ಜಾಷುವಾ ಅವರ 'ಬಾಪೂಜಿ' ಮೊದಲಾದುವು ಸ್ಮೃತಿಗೀತೆಗಳಲ್ಲಿ ಮುಖ್ಯವಾದವುಗಳು.

II. **ಅಭ್ಯುದಯ** (ಪ್ರಗತಿಶೀಲ) **ಗೀತೆಗಳು :** ೧೯೩೦ ರಲ್ಲಿ ಏರ್ಪಟ್ಟ ಆರ್ಥಿಕ ಮುಗ್ಗಟ್ಟು, ಭಾವಕವಿಗಳ ದೃಷ್ಟಿಯಲ್ಲಿ ಹಲವು ಬದಲಾವಣೆಗಳನ್ನು ಮಾಡಿತು. ಆಗ ತಾನೇ ಕವಿಗಳಿಗೆ ಆರ್ಥಿಕ ವ್ಯವಸ್ಥೆಯ ವಸ್ತುಸ್ಥಿತಿ ಗೊತ್ತಾಯಿತಷ್ಟೆ. ತಮ್ಮ ಹೊಟ್ಟೆಗೇ ತತ್ವಾರವಾಗಿರುವಾಗ ಊಹಾಪ್ರೇಯಸಿಯು ಹೇಗೆ ನೆನಪಿಗೆ ಬಂದಾಳು ? ಹಸಿವಿನ ಬಾಧೆಯಿಂದ ಪ್ರಜೆಗಳು ಕಂಗಾಲಾಗಿರುವಾಗ ಊಹಾಪ್ರೇಯಸಿಗಾಗಿ ಪ್ರಣಯ ಗೀತೆಗಳನ್ನು ಆಲಾಪಿಸುತ್ತಿರುವ ಕವಿಗಳು ಯುವ ಜನಾಂಗಕ್ಕೆ ಪಾಪಿಗಳಾಗಿ ಕಂಡರು. ಈ ಕ್ಷೋಭೆಯ ವಾತಾವರಣದಲ್ಲಿ ತೆಲುಗು ಕವಿತೆಗಳನ್ನು ಪ್ರಭಾವಿಸಿದ ಕವಿತಾಮಾರ್ಗವು 'ಅಭ್ಯುದಯ ಕವಿತೆ' ಎಂಬ ಹೆಸರನ್ನು ಪಡೆಯಿತು. ಮಾರ್ಕ್ಸ್ ಸಿದ್ಧಾಂತವನ್ನು ಪ್ರತಿಪಾದಿಸುತ್ತ, ಕಮ್ಯುನಿಸ್ಟ್ ದೃಷ್ಟಿಕೋನಗಳತ್ತ ನೂತನ ಸಮಾಜ ಪುನರ್ನಿರ್ಮಾಣ ಮಾಡುವುದೇ ಪ್ರಧಾನವಾದ ಆಶಯವಾಗಿ ಅಭ್ಯುದಯ ಕವಿತೆಯ ರಚನೆಯುಂಟಾಯಿತು. ಅಭ್ಯುದಯ ಕವಿಗಳು ತಮ್ಮ ಕವಿತೆಗಳಲ್ಲಿ ಸುತ್ತುಮುತ್ತಲಿರುವ ಸಮಾಜದ ಪರಿಸ್ಥಿತಿಯನ್ನು ವಿವರಿಸಿದರು. ಅಲ್ಲದೆ ಕುಲಮತ ವೈಷಮ್ಯಗಳನ್ನು. ಹಸಿವೆ-ರೋಗ ಬಾಧೆಗಳಿಂದ ಪೀಡಿತರಾದ ಪ್ರಜೆಗಳ ಬದುಕನ್ನು ವಿಶ್ಲೇಷಿಸಿದರು.

ಈ ವಿಧವಲ್ಲಿ. ಪೀಡಿತ ಪ್ರಜೆಗಳ ಮೇಲೆ ಸಹಾನುಭೂತಿ ಬೀರುವಂತೆ ತಮ್ಮ ಕವಿತೆಗಳಲ್ಲಿ ಉದ್ದೇಶಿಸಿದರು. ಬಂಡವಾಳಶಾಹಿ ಜನರ ಮೇಲೆ, ಬೂರ್ಜ್ವಾ ವ್ಯವಸ್ಥೆಯ ಮೇಲೆ, ಪಾಲಕರು ಪಾಲಿತರು ಪೀಡಿಸುವ ವಿಧಾನದ ಮೇಲೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ವರ್ಗಸಂಘರ್ಷ ವಿಪ್ಲವ ಪ್ರಬೋಧ. ವೀರಗಾಥೆ ಕಥನ, ಸಮನ್ವಯ ಸಮಾಜ ನಿರ್ಮಾಣ, ಮಾನವತಾವಾದ, ಇವುಗಳನ್ನು ಕವಿತೆಯ ವಸ್ತುಗಳನ್ನಾಗಿ ಆಯ್ದುಕೊಂಡು ರಚನೆ ಮಾಡಿದರು.

ಶ್ರೀರಂಗಂ ಶ್ರೀನಿವಾಸರಾವ್ (ಶ್ರೀ ಶ್ರೀ). ಶ್ರೀರಂಗಂ ನಾರಾಯಣಬಾಬು ಶಿಷ್ಟ್ಲ ಉಮಾಮಹೇಶ್ವರ ರಾವ್, ಪುರಿಪಂಡ ಅಪ್ಪಲಸ್ವಾಮಿ, ಪಟ್ಟಾಭಿರಾಮ ರೆಡ್ಡಿ ಮೊದಲಾದವರು ಅಭ್ಯುದಯ ಕವಿತಾ ರಚನೆಯಲ್ಲಿ ಮೊದಲಿಗರಾಗಿದ್ದಾರೆ. ತಿಲಕ್, ಸೋಮಸುಂದರ್, ಆರುದ್ರ, ದಾಶರಥಿ, ನಾರಾಯಣ ರೆಡ್ಡಿ, ಕುಂದುರ್ತಿ, ಶೇಷೇಂದ್ರಶರ್ಮ, ಮೊದಲಾದವರನ್ನು ಅಭ್ಯುದಯ ಕವಿತೆಯ ಪ್ರವರ್ತಕರೆಂದು ಕರೆಯಲಾಗುತ್ತದೆ.

ಭಾವಗೀತೆಗೆ ಎದುರು ನಿಂತು ತಾನು 'ಅಹಂಭಾವಕವಿ' ಎಂದು ಹೇಳಿಕೊಳ್ಳುತ್ತ ಅನೇಕ ಪ್ರಯೋಗಗಳನ್ನು ಮಾಡಿದವರು 'ಪಠಾಭಿ' ಯವರು. ಇವರ ಕವನ ಸಂಕಲನದ ಹೆಸರು "ಫಿಡೇಲು ರಾಗಾಲ ಡಜನ್" (ಪಿಟೀಲು ರಾಗದ ಡಜನು).

> ನನ್ನ ಈ ವಚನ ಕವಿತೆಗಳೆಂಬ ಬಡಿಗೆಯಿಂದ
> ಪದ್ಯದ ನಡುಗಳು ತುಂಡಾಗುವಂತೆ ಒದೆಯುವೆನು
> ಚಿನ್ನಯ್ಯ ಸೂರಿ ಬಾಲ ವ್ಯಾಕರಣವನು
> ಚೆನ್ನಾಗಿ ದಂಡಿಸುವೆನು....[೮] (ಪಠಾಭಿ)

ಎನ್ನುತ್ತಾ ತೆಲುಗು ಛಂದಸ್ಸಿನ ಮೇಲೆ, ವ್ಯಾಕರಣಗಳ ಮೇಲೆ ದಾಳಿಮಾಡುತ್ತಾರೆ. 'ಫಿಡೇಲು ರಾಗಾಲ ಡಜನ್' ಸಂಕಲನದಲ್ಲಿ ವಸ್ತು-ರಚನೆಗಳೆರಡೂ ನವ್ಯತಾ ಧೋರಣೆಯಲ್ಲಿ ಸಾಗುತ್ತದೆ. ಭಾಷೆಯು ಕೂಡ ಏಕರೀತಿಯನ್ನು ಪಡೆಯದೆ ಗ್ರಾಂಥಿಕ ಭಾಷೆಯನ್ನು ಅವಹೇಳನ ಮಾಡುವ ರೀತಿಯಲ್ಲಿ, ವ್ಯಾವಹಾರಿಕ ರೂಪವನ್ನೂ, ಇಂಗ್ಲೀಷ್ ಪದಗಳನ್ನೂ ಯಥೇಚ್ಛವಾಗಿ ಪ್ರಯೋಗಿಸಿದ್ದಾರೆ. ನಗರ ಚಿತ್ರಣವನ್ನು, ಫ್ರಾಯ್ಡ್ ಪ್ರತಿಪಾದಿಸುವ ಸೆಕ್ಸ್ ಪ್ರಾಧಾನ್ಯವನ್ನೂ ಮೊದಲಬಾರಿಗೆ ತೆಲುಗಿನಲ್ಲಿ ಪ್ರವೇಶ ಮಾಡಿಸಿದ್ದಾರೆ.

ಶಿಷ್ಟ್ಲ ಕವಿ ತಮ್ಮ 'ನವಮಿ ಚಿಲುಕ', 'ವಿಷ್ಣುಧನು' ಕಾವ್ಯ ಸಂಕಲಗಳ ಮೂಲಕ ಭಾವಗೀತೆಗಳನ್ನು ವಿರೋಧಿಸಿದರು. 'ನವಮಿ ಚಿಲುಕ'ದ ವಸ್ತುವು ಶ್ರೀ

ಸಾಮಾನ್ಯನಿಗೆ ಸಂಬಂಧಿಸಿದ್ದು. ಭಾವಗೀತೆಗೆ ವ್ಯತಿರಿಕ್ತವಾಗಿ ವಾಸ್ತವಿಕತಾವಾದ (realism)ವನ್ನು ಪ್ರತಿಪಾದಿಸಿದ ಕವಿ ಶ್ರೀರಂಗಂ ನಾರಾಯಣ ಬಾಬು. ಈ ದೃಷ್ಟಿಕೋನವೇ ರಷ್ಯವನ್ನು ದಿಟ್ಟಿಸುವಂತೆ ಮಾಡಿತು :

ರಕ್ತ ಪತಾಕೆ
ಶಕ್ತಿ ನಾಲಿಗೆ
ಅಗ್ನಿ ಕಿರೀಟ
ಆಕಾಶದಲ್ಲಿ ಸಂಧ್ಯಾಕಾಲ
ಗಟ್ಟಿಯಾಗಿ ಕರೆಯುತ್ತಿದೆ

ರಕ್ತಪತಾಕೆ, ಶಕ್ತಿನಾಲಿಗೆ, ಅಗ್ನಿಕಿರೀಟ–ಸಂಕೇತಗಳನ್ನು ರಷ್ಯದಲ್ಲಿನ ಕಾರ್ಮಿಕ ವರ್ಗದ ಚೈತನ್ಯಕ್ಕೆ, ಪ್ರಪಂಚದಲ್ಲಿ ಹೊಗೆಯಾಡುತ್ತಿರುವ ವಿಪ್ಲವ ಶಕ್ತಿಯ ವಿಶ್ವರೂಪಕ್ಕೆ ಪ್ರತೀಕವಾಗಿ ಗ್ರಹಿಸಿದರು. ಭಾವಕವಿಗಳಂತಲ್ಲದ ನಾರಾಯಣ ಬಾಬು, ಸೌಂದರ್ಯವೊಂದೇ ಆರಾಧ್ಯವಾಗಲಾರದು, ಸುಂದರವಲ್ಲದ ವಸ್ತುಗಳು ಕೂಡಾ ಕವಿತೆಗೆ ವಸ್ತುವಾಗಬಹುದೆಂದು ನಿರೂಪಿಸಿದರು.

ಭಾವಗೀತೆಯ ಕವಿಗಳನ್ನು ವಿರೋಧಿಸಿದ ಕವಿಗಳಲ್ಲಿ ಶ್ರೀಶ್ರೀಯವರು ಅಗ್ರ–ಗಣ್ಯರು. ಉಳಿದವರು ವಿರೋಧಿಸಿದರೇ ಹೊರತು ಹೊಸ ದಾರಿಯನ್ನು ಹಾಕಿ ಕೊಡಲಿಲ್ಲ. ನಿರ್ಮೂಲನವನ್ನೂ ನಿರ್ಮಾಣವನ್ನೂ ನಿರ್ವಹಿಸಿದವರು ಶ್ರೀಶ್ರೀ-ಯವರು. ಕಾರ್ಮಿಕ ವರ್ಗ ಚೈತನ್ಯದ ಉಸಿರಿಗೆ, ಹೊಸದಾದ ಕವಿತಾರೀತಿಯನ್ನು ಬಿತ್ತಿ, ಬೆಳೆಸಿ ಅಭ್ಯುದಯ ಕವಿತೆಯ ಪ್ರಕಾರಕ್ಕೆ ಯುಗಪುರುಷರಾದರು. ಇವರ 'ಮಹಾಪ್ರಸ್ಥಾನಂ' ಕವನ ಸಂಕಲನ (೧೯೩೦–೪೦) ಅಭ್ಯುದಯ ಕವಿತೆಗಳಿಗೆಲ್ಲ ಮಕುಟಪ್ರಾಯವಾದುದು.

ಯಾವ ದೇಶದ ಚರಿತ್ರೆ ನೋಡಿದರೂ
ಏನಿದೆ ಗರ್ವಕ್ಕೆ ಕಾರಣ ?
ನರಜಾತಿ ಚರಿತ್ರೆ ಸಮಸ್ತವೂ
ಪರ ಪೀಡನ ಪರಾಯಣತ್ವ!
....
ಯಾವ ಯುದ್ಧ ಯಾಕಾಗಿ ನಡೆಯಿತು
ಯಾವ ರಾಜ್ಯ ಎಷ್ಟುದಿನ ಇತ್ತು ?
ತಾರೀಕಿನಲ್ಲಿ ದಸ್ತಾವೇಜಿನಲ್ಲಿ
ಇದುವಲ್ಲ ಕಣೋ ಚರಿತ್ರೆಗೆ ಅರ್ಥ
....

ನೈಲ್ ನದೀ ನಾಗರಿಕತೆಯಲ್ಲಿ
ಸಾಮಾನ್ಯನ ಜೀವನ ಹೇಗಿತ್ತು ?
ತಾಜ ಮಹಾಲಿನ ನಿರ್ಮಾಣದಲ್ಲಿ
ಯಾರು ನವೆದರು ಕಲ್ಲುಗಳ ಹೊತ್ತು ?[೧೦]
....

ಎನ್ನುತ್ತಾ ಚರಿತ್ರೆಯನ್ನು ಮಾರ್ಕ್ಸ್ ಸಿದ್ಧಾಂತದ ಹಿನ್ನೆಲೆಯಲ್ಲಿ ನೋಡಬೇಕೆಂದು ಎಚ್ಚರಿಸಿದರು. ಮಾರ್ಕ್ಸಿಸ್ಟ್ ದೃಷ್ಟಿಕೋನದಲ್ಲಿ ಕಾರ್ಮಿಕ ವರ್ಗ ಚೈತನ್ಯವನ್ನು ಚಿತ್ರಿಸುವುದು ಸಾಹಿತ್ಯದ ಪರಮೋದ್ದೇಶವಾಗಬೇಕು :

ನನ್ನ ಹೃದಯವು ಸ್ಪಂದಿಸುವ ನವ್ಯ ಕವಿತೆ
ಕಾರ್ಮಿಕ ಲೋಕದ ಕಲ್ಯಾಣಕ್ಕೆ
[ಕಾರ್ಮಿಕ] ಲೋಕದ ಸೌಭಾಗ್ಯಕ್ಕೆ.[೧೧]

ತನ್ನ ಕವಿತಾಶಕ್ತಿಯನ್ನು ಸಮರ್ಪಿಸಿಕೊಳ್ಳುವೆನೆಂದು ಶಪಥವನ್ನು ಮಾಡುತ್ತಾರೆ ಶ್ರೀ ಶ್ರೀಯವರು :

ಹೊಟ್ಟೆ ದಹಿಸುವಂತೆ
ಸೂಳೆಯ ರಾಕ್ಷಸ ರತಿ
ಗಲ್ಲುಗಂಬದ ತಲೆಬುರುಡೆ ಹೇಳಿದ ರಹಸ್ಯ
ಮುಷ್ಕರ ನಡೆಸಿದ ಕೂಲಿಗಳ
ಮುಷ್ಕರ ನಡೆಸಿದ ಕೂಲಿಗಳ ಹೆಂಡಂದಿರ-ಮಕ್ಕಳ
ಹಾ ಹಾ ಕಾ ರ... ...[೧೨]

ಶ್ರೀ ಶ್ರೀಯವರ 'ಅವತಾರಂ', ಆಳುವವರಿಗೆ ಪಾಲಿತರು ಹೇಳಿದ ವ್ಯಂಗ್ಯ ತಿರುಗು ಮಾತುಗಳ ರಚನೆಗಳನ್ನು ಹೊಂದಿದೆ. 'ಮಹಾಪ್ರಸ್ಥಾನ'ದ ಕವಿತೆಗಳಲ್ಲಿ ಮಾರ್ಕ್ಸಿಸಂ ಜೀರ್ಣವಾದ ರಚನೆಗಳು. ಇವರಲ್ಲಿ 'ಮರೋ ಪ್ರಪಂಚಂ' ಎನ್ನುವ ಕವಿತೆ ಪ್ರಪಂಚದ ಸಾಹಿತ್ಯಗಳಲ್ಲೇ ವಿಶಿಷ್ಟವಾದುದು. ಅಭ್ಯುದಯ ಕವಿಗಳಾಗಿ ಪ್ರಸಿದ್ಧಿಯನ್ನು ಪಡೆದ ಎಲ್ಲ ಕವಿಗಳೂ ಶ್ರೀ ಶ್ರೀಯವರ ಪ್ರಭಾವಕ್ಕೆ ಒಳಗಾದವರೇ. ಅಭ್ಯುದಯ ಕವಿತೆಗೆ ಇನ್ನೊಂದು ಹೆಸರೇ ಶ್ರೀ ಶ್ರೀ. ೧೯೪೩ರಲ್ಲಿ ಪ್ರಥಮ ಅಭ್ಯುದಯ ಕವಿಗಳ ಸಂಘವು ಸ್ಥಾಪನೆಯಾಗಿ ಈ ಕವಿತೆಗಳು ವಿಶ್ವರೂಪವನ್ನು ತಾಳಿದುವು.

ಶ್ರೀ ಶ್ರೀಯವರ 'ಮಹಾಪ್ರಸ್ಥಾನಂ'ನ ಅನಂತರ ೧೯೪೪ರಲ್ಲಿ ಪ್ರಕಟವಾದ 'ನಯಾಗರಾ' ಕವನ ಸಂಕಲನವು ಗಮನಾರ್ಹವಾದುದು. ಏಲ್ಚೂರಿ ಸುಬ್ರಹ್ಮಣ್ಯಂ, ಕುಂದರ್ತಿ ಆಂಜನೇಯಲು, ಬೆಲ್ಲಂಕೊಂಡ ರಾಮದಾಸು ಈ ಮೂವರು ಕವಿಗಳ ಜಂಟೀ ಸಂಕಲನವೇ 'ನಯಾಗರಾ'. ವಿಪ್ಲವವೀರ–ಸೀತಾರಾಮ ರಾಜು, ಠಾಕೂರ್ ಚಂದ್ರಸಿಂಗ್, ಮೊದಲಾದವರೇ ಇವುಗಳಲ್ಲಿನ ಕಾವ್ಯಗಳ ನಾಯಕರು. 'ಚೈನಾ ಕಣಿವೆಗಳು. ಮೊಸ್ಕೋ ಗೇಟುಗಳು, ಸೋಲ್ಜರ್‌ಗಳು, ಗೆರಿಲ್ಲಾ ಗುಂಪುಗಳು, ಮೂರ್ತೆಕತ್ತಿಯ ಅಲಗಿನ ಹರಿತ, ಕೆಂಪು ಪತಾಕೆ, ಸುತ್ತಿಗೆಯ ಪೆಟ್ಟು'—ಮೊದಲಾದುವುಗಳು ಇದರಲ್ಲಿನ ಕವಿತಾ ವಸ್ತುಗಳು.

ದಾಶರಥಿಯವರ 'ಅಗ್ನಿಧಾರಾ', 'ರುದ್ರವೀಣ', ಸೋಮಸುಂದರರ 'ವಜ್ರಾಯುಧಂ', ಆರುದ್ರರ 'ತ್ವಮೇವಾಹಂ', ಅನಿಸೆಟ್ಟಿಯವರ 'ಅಗ್ನಿವೀಣ', ಗಂಗಿನೇನಿಯವರ 'ಉದಯಿನಿ', ರೆಂಟಾಲರ 'ಸಂಘರ್ಷಣ', 'ಸರ್ಪಯಾಗಂ', ಕುಂದುರ್ತಿಯವರ 'ತೆಲಂಗಾಣ', ತಿಲಕ್ ಅವರ 'ಅಮೃತಂ ಕುರಿಸಿನ ರಾತ್ರಿ' (ಅಮೃತ ಸುರಿದ ರಾತ್ರಿ), ಭೈರಾಗಿಯವರ 'ನೂತಿಲೋ ಗೊಂತುಕಲು' (ಬಾವಿಯೊಳಗಿನ ಮಾತುಗಳು), ಕಾಳೋಜಿಯವರ 'ನಾಗೊಡವ' [ನನ್ನ ಸಮಸ್ಯೆಗಳು], ಪುರಿಪಂಡಾ ಅಪ್ಪಲ ಸ್ವಾಮಿಯವರ 'ಪುಲಿಪಂಜ' [ಚಾಚಿದ ಹುಲಿಹಸ್ತ], ಅಜಂತಾ ಅವರ 'ಕೊತ್ತಸಂವತ್ಸರಂ' [ಹೊಸ ಸಂವತ್ಸರ], 'ಕ್ಷುದ್ರಸಂಧ್ಯಾ', 'ಅಗ್ನಿ ಸ್ಪರ್ಶ' ನಾರಾಯಣ ರೆಡ್ಡಿಯವರ 'ಮಧ್ಯತರಗತಿ ಮಂದಹಾಸಂ', 'ದಿವ್ವೆಲ ಮುವ್ವಲು', 'ಅಕ್ಷರಾಲ ಗವಾಕ್ಷಲು', ಬೋಯಿ ಭೀಮನ್ನರ 'ಜನ್ಮಾಂತರ ವೈರಮು' ಗಜ್ಜಲ ಮಲ್ಲಾರೆಡ್ಡಿಯವರ 'ಶಂಖಾರಾವಂ' ಚಲ್ಲಾ ರಾಧಾಕೃಷ್ಣ ಶರ್ಮರ 'ಶ್ರಮಲೋ ಸ್ವರ್ಗಂ', ಸಿ. ವಿಜಯಲಕ್ಷ್ಮಿಯವರ 'ವಿಷಾದ ಭಾರತಂ', ಕರುಣಶ್ರೀಯವರ 'ಪಾಕಿಪಿಲ್ಲ'–ಇತ್ಯಾದಿಗಳು ಅಭ್ಯುದಯ ಕವಿತೆಗಳಲ್ಲಿ ಮುಖ್ಯವಾದುವುಗಳು.

ತೆಲಂಗಾನದ ಬಿಡುಗಡೆಗಾಗಿ ಅಭ್ಯುದಯ ಕವಿಗಳು ಕವಿತೆಗಳನ್ನು ರಚಿಸಿದರು. 'ನಾ ತೆಲಂಗಾಣಾ ಕೋಟಿ ರತ್ನಾಲ ವೀಣಾ' [ನನ್ನ ತೆಲಂಗಾನವು ಕೋಟಿರತ್ನಗಳ ವೀಣೆ] ಎಂದು ದಾಶರಥಿಯವರು ತೆಲಂಗಾನದ ವಿಮುಕ್ತಿಗಾಗಿ ಕವಿತೆಯನ್ನು ರಚಿಸಿದರು. ಕಾಳೋಜಿ, ಸೋಮಸುಂದರ, ರೆಂಟಾಲ, ಗಂಗಿನೇನಿ, ಕುಂದುರ್ತಿ, ರಮಣಾರೆಡ್ಡಿ ಮೊದಲಾದವರು ತೆಲಂಗಾನ ವಿಮುಕ್ತಿಗಾಗಿ ಹಲವು ಪ್ರಚೋದಕ ಕವಿತೆಗಳನ್ನು ರಚಿಸಿದರು. ಕಾರ್ಮಿಕರು, ರೈತರುಗಳು ನವಾಬರ ವಿರುದ್ಧವಾಗಿ ನಡೆಸಿದ ಹೋರಾಟಗಳ ಕುರಿತು ಒಂದು ಸಮಗ್ರಕಾವ್ಯವನ್ನು ರಚಿಸಿದವರು ಕುಂದುರ್ತಿಯವರು.

ಇದೇ ಸಮಯದಲ್ಲಿ ಪ್ರತ್ಯೇಕವಾದ ಆಂಧ್ರರಾಜ್ಯವಾಗಬೇಕೆಂದು ಅಭ್ಯುದಯ ಕವಿಗಳು ಪ್ರಚೋದನೆಗೊಂಡರು. ಸೋಮಸುಂದರ, ರೆಂಟಾಲ, ದಾಶರಥಿ, ಶ್ರೀ ಶ್ರೀ ಮೊದಲಾದವರು ವಿಶಾಲಾಂಧ್ರದ ಅವತರಣೆಗಾಗಿ ಲೇಖನಿಯನ್ನೇ ಗಂಟಲನ್ನಾಗಿಸಿ ಕವಿತಾಗಾನವನ್ನು ಹಾಡಿದರು.

ಅಭ್ಯುದಯ ಕವಿಗಳು ಅಧಿವಾಸ್ತವಿಕತೆ [Sur–realism] ಲೈಂಗಿಕ ಪ್ರಾಧಾನ್ಯ [Sex], ಪ್ರತೀಕವಾದ ಧೋರಣೆ [Symbolism] ನಗರಜೀವನ ಚಿತ್ರಣ, ಶಬ್ದವೈಚಿತ್ರ್ಯ [ವೈಚಿತ್ರೀಪ್ರಿಯತ್ವ], ಛಂದೋವೈಚಿತ್ರ್ಯ ಇತ್ಯಾದಿಗಳಲ್ಲದೆ ಅರಾಜಕತೆ [Anarchism], ನಿರಾಶಾವಾದ [Pessimism] ಮೊದಲಾದ ವಾಚ್ಯಾರ್ಥ ಕವಿತಾ ಧೋರಣೆಗಳನ್ನು ತೆಲುಗಿನಲ್ಲಿ ಪ್ರವೇಶ ಮಾಡಿಸಿದರು.

III. ದಿಗಂಬರ ಕವಿತೆಗಳು :

ಅಭ್ಯುದಯ ಕವಿಗಳು ಮಾಡಿದ ಕವಿತಾ ಕಸರತ್ತುಗಳು ಓದುಗರ ಹೃದಯಗಳನ್ನು ಆಕರ್ಷಿಸದೇ ಹೋದುವು. ಈ ಸ್ಥಿತಿಯಲ್ಲಿ ಕೆಲಮಂದಿ ಅಭ್ಯುದಯ ಕವಿಗಳು ಕವಿತಾರಂಗಕ್ಕೆ ಬದಲು ಸಿನಿಮಾ ರಂಗವನ್ನು ಆಶ್ರಯಿಸಿದರು. ಕವಿಗಳು ಅಧಿಕಾರ ಹಾಗೂ ಹಣಕ್ಕೆ ಶರಣಾದರು. ಅಭ್ಯುದಯ ಕವಿಗಳ ಸಂಘ ನಿರ್ವೀರ್ಯ–ವಾಗಿ ಹೋಯಿತು. ಈ ಪೇಲವವಾದ ಕವಿತೆಗಳ ವಾತಾವರಣವನ್ನು ಗಮನಿಸಿ ಈ ನಿರ್ಜೀವ ಸ್ಥಿತಿಯನ್ನು ವ್ಯಕ್ತಮಾಡಿದವರು ದಿಗಂಬರ ಕವಿಗಳು.

ಆರು ಮಂದಿ ಕವಿಗಳು ಹೊಸ ಹೆಸರುಗಳನ್ನು ಇಟ್ಟುಕೊಂಡು ಕವಿತಾ ಸೀಮೆಯಲ್ಲಿ ದಿಗಂಬರ ಕವಿಗಳಾಗಿ ಅವತರಿಸಿದರು. ನಗ್ನಮುನಿ [ಎಂ. ಎಚ್. ಕೇಶವರಾವ್], ನಿಖಿಲೇಶ್ವರ [ಯಾದವ ರೆಡ್ಡಿ], ಚೆರಬಂಡರಾಜು [ಬದ್ದಂ–ಭಾಸ್ಕರ ರೆಡ್ಡಿ], ಮಹಾಸ್ವಪ್ನ [ಕೆ. ವೆಂಕಟೇಶ್ವರರಾವ್], ಜ್ವಾಲಾಮುಖಿ [ವೀರರಾಘವಾಚಾರ್ಯಲು], ಭೈರವಯ್ಯ [ಮನ್ಮೋಹನ್ ಸಹಾಯ್].–ಈ ಆರು ಮಂದಿ ತೆಲುಗು ಕವಿಗಳು ಸಮಕಾಲೀನ ಕವಿತೆಗಳಲ್ಲಿ ಏರ್ಪಟ್ಟ ಸ್ತಬ್ಧತೆಯನ್ನು ತೊಲಗಿಸಲು ದೌರ್ಜನ್ಯಕರವಾದ ರೀತಿಯ ದಾರಿಯನ್ನು ತುಳಿದರು. ಅಶ್ಲೀಲಪದ ಜಾಲಗಳು, ಲೈಂಗಿಕ ಪ್ರತೀಕಗಳು, ಹೇಯ ದೃಶ್ಯಗಳು, ಮೊದಲಾದವುಗಳನ್ನು ಪ್ರಯೋಗಿಸಿಕೊಂಡು, ಹಿಂದಿನ ಕವಿಗಳನ್ನೂ, ಸಮಾಜದ ಎಲ್ಲಾ ಮೌಲ್ಯಗಳನ್ನೂ ಕೆಟ್ಟದಾಗಿ ಬೈಯುತ್ತಾ ಸಮಾಜದ ಜಡತ್ವವನ್ನು ಬಲವಾಗಿ ಖಂಡಿಸಿದರು.

"ಈ ದೇಶದಲ್ಲಿ ಈ ಭೂಗೋಳದಲ್ಲಿ ಉಸಿರಾಡುತ್ತಿರುವ ಪ್ರತಿಯೊಬ್ಬ ಮಾನವ ಜೀವಿಗಾಗಿ ನೊಂದು ಬೆಂದು ಅವನ ಭವಿಷ್ಯವನ್ನು ನೋಡಿ ಬಿಕ್ಕಿ ಬಿಕ್ಕಿ ಅತ್ತು ಹುಚ್ಚೇ ಹಿಡಿದು ಉದ್ಗರಿಸಿದ ಕವಿತೆ"[೧೩]–ಎಂದು ತಮ್ಮ ಕವಿತೆಯ ಸ್ವರೂಪ

ವನ್ನು ಅವರು ಸ್ಪಷ್ಟಪಡಿಸಿದರು. ಕೀರ್ತಿಹಾಗೂ–ಧನಗಳೆನ್ನುವ ಕಬ್ಬಿಣದ ಬೂಟ್ಸುಗಳ ಕೆಳಗೆ ಈ ನಾಡಿನ ಜನರೆಲ್ಲರೂ ಜೀವಿಸುತ್ತಿದ್ದಾರೆ–ಎಂದು ಹೇಳುತ್ತಾ ಅವರನ್ನು ಆ ಸ್ಥಿತಿಯಿಂದ ತಪ್ಪಿಸಿ, ಅವರ ವಾಸ್ತವ ಸ್ಥಿತಿಯನ್ನು ಅವರಿಗೆ ತಿಳಿಯಪಡಿಸಿ ಈ ತೆರೆಯನ್ನು ತೊಲಗಿಸಿಕೊಳ್ಳುವಂತೆ ಹೇಳಬೇಕೆಂಬುದು ದಿಗಂಬರ ಕವಿಗಳ ಉದ್ದೇಶ. ಜೀವಚ್ಛವಗಳಾಗಿ ಬದುಕುತ್ತಿರುವ ಪ್ರಜೆಗಳನ್ನು ಬೈದು, ಕೋಪಿಸಿಕೊಂಡು, ಅವರನ್ನು ಹೆದರಿಸಿ ಜುಗುಪ್ಸೆ ಹುಟ್ಟುವಂತೆ ಮಾಡಿ ಪ್ರಜೆಗಳನ್ನು ಬಡಿದೆಬ್ಬಿಸಿದರು. ಪ್ರಸ್ತುತ ಸಮಾಜವು ಈ ಪಿಡುಗಿನ ವ್ಯವಸ್ಥೆಯಾಗಿ ಬದಲಾಯಿಸಿದೆ-ಇದಕ್ಕೆ ಕಾರಣರಾದವರನ್ನೂ, ಈ ಪಿಡುಗಿನ ವ್ಯವಸ್ಥೆಯನ್ನು ಬೆಳೆಸುತ್ತಿರುವವರನ್ನೂ ಸರ್ವನಾಶ ಮಾಡಬೇಕೆಂದು ಇವರು ಯೋಚಿಸಿದರು.

೧೯ನೇ ಶತಮಾನದಲ್ಲಿ ರಷ್ಯದಲ್ಲಿ ಏರ್ಪಟ್ಟ Nihilist movement ನ ಪ್ರಭಾವವು ಇವರ ಮೇಲೆ ಬಿದ್ದಿದೆ ಎಂದು ಕೆಲವರು ಅಭಿಪ್ರಾಯಪಟ್ಟರು. ಭಾರತ ಮಾತೆಯನ್ನು ಸಂಬೋಧಿಸುತ್ತ–

ಓ ನನ್ನ ಪ್ರಿಯವಾದ ಮಾತೃದೇಶವೇ
ತಾಯಿಯೂ ತಂದೆಯೂ ದೇವರೂ-ನೀನೇ ಅಮ್ಮಾ
ದ್ರೋಹಿಗಳು ಕೂಡಾ ಹಾಸಿಗೆಯಲ್ಲಿ ರಮಿಸುತ್ತಿರುವ ಶೀಲ ನಿನ್ನದು
ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಅಂಗಾಂಗಗಳನ್ನು ಅಡವು ಇಟ್ಟಿರುವ ಸೌಂದರ್ಯ ನಿನ್ನದು
ಶ್ರೀಮಂತರ ತೆಕ್ಕೆಯಲ್ಲಿ ಮೈಮರೆತು ನಿದ್ರಿಸುತ್ತಿರುವ ಯೌವ್ವನ ನಿನ್ನದು
ವಂದೇ ಮಾತರಂ–ವಂದೇ ಮಾತರಂ–ವಂದೇ ಮಾತರಂ![೧೪]

[ಚೆರಬಂಡರಾಜು]

'ಕೊಳೆತ ಎದೆ, ಕಾಂಕ್ರೀಟು, ತೊಡೆಗಳು ಹಾಳಾದ ಭ್ರೂಣ, ನಪುಂಸಕರ ಕಾಮಕೇಳಿ' ಮೊದಲಾದ ಅಶ್ಲೀಲ ಪದಗಳನ್ನು ಪ್ರಯೋಗಿಸುತ್ತ ಪ್ರಸ್ತುತ ಹೇಯವಾದ ಸಮಾಜದ ಪರಿಸ್ಥಿತಿಯ ಕುರಿತು ಕೋಪವನ್ನು ಉದ್ರೇಕಿಸುವಂತೆ ಮಾಡುವುದರಲ್ಲಿ ಜಯಶೀಲರಾದರು. ತಾವು ರಚಿಸುತ್ತಿರುವುದು 'ವಚನ ಕವಿತೆ' ಯಲ್ಲ ಎಂದು ಅವರು ಅಂದುಕೊಂಡರೂ ಇದೂ 'ವಚನಕವಿತ್ವ'ವೇ. ೧೯೭೪ ರಲ್ಲಿ ಪ್ರಕಟವಾದ ಮೂರನೇ ಸಂಪುಟದೊಂದಿಗೆ ದಿಗಂಬರ ಕವಿತಾ ಪ್ರಸ್ಥಾನವು ಮುಕ್ತಾಯವಾಯಿತು. ತಮ್ಮ ಕೃತಿಗಳನ್ನು ರಿಕ್ಷಾ ಎಳೆಯುವ ಕೂಲಿಯೊಬ್ಬನಿಂದ, ಹೋಟೆಲ್ ಕ್ಲೀನರನೊಬ್ಬನಿಂದ ಹಾಗೂ ಭಿಕ್ಷುಕ ಹೆಂಗಸೊಬ್ಬಳಿಂದ ಬಿಡುಗಡೆಗೊಳಿಸಿ ಸಾಹಿತ್ಯ ಲೋಕದಲ್ಲಿ ವಿಸ್ಮಯವನ್ನುಂಟು ಮಾಡಿದರು.

IV) ವಿಪ್ಲವ ಕವಿತೆ (ಬಂಡಾಯ ಕವಿತೆಗಳು Revolutionary Poetry)

ಅಭ್ಯುದಯ ಕವಿತೆಯಲ್ಲಿ ಏರ್ಪಟ್ಟ ಸ್ತಬ್ಧತೆಯು ದಿಗಂಬರ ಕವಿಗಳು ಬಾರ-ದಿರುತ್ತಿದ್ದರೆ ಹಾಗೆಯೇ ಇರುತ್ತಿತ್ತು. ಜುಗುಪ್ಸೆ ಹುಟ್ಟಿಸುವ ರೀತಿಯಲ್ಲಿ ಬೈದು ದಿಗಂಬರ ಕವಿಗಳು ಬರೆಯದಿರುತ್ತಿದ್ದರೆ ಯುವಕವಿಗಳು ಕರ್ತವ್ಯವೇನೆಂಬುದನ್ನೇ ಮರೆತಿರುತ್ತಿದ್ದರು. ದಿಗಂಬರ ಕವಿಗಳ ಕವಿತಾ ಪ್ರೇರಣೆಯು ಮೂಲಕ ಕೆಲಮಂದಿ ಕವಿಗಳು 'ತಿರುಗ ಬಡು' (ತಿರುಗಿನಿಲ್ಲು), 'ಮಾರ್ಚ್' ಮೊದಲಾದ ಸಂಕಲನಗಳನ್ನು ಪ್ರಕಟಿಸಿವರು. 'ಸಮಾಜ ಸುಧಾರಣೆ ಮಾಡಬೇಕೆಂದು ಬೈಯುತ್ತಲೇ ಕುಳಿತಿರಬಾರದು, ಪ್ರಜೆಗಳನ್ನು ನಿದ್ರೆಯಿಂದ ಎಬ್ಬಿಸುವಂಥಾ ಕವಿತೆಗಳನ್ನು ರಚಿಸ-ಬೇಕು' ಎಂದು ಇವರು ಅಭಿಪ್ರಾಯಪಟ್ಟರು. ನಿಜವಾಗಿ ನೋಡಿವರೆ ದಿಗಂಬರ ಕವಿಗಳು ಬಂಡಾಯ ಕವಿತೆಗಳಿಗೆ ಹಿನ್ನೆಲೆಯನ್ನೊದಗಿಸಿದರು ಎನ್ನಬಹುದು. ಭಾರತೀಯ ಸಾಹಿತ್ಯಕಾರರನ್ನು ಆಕರ್ಷಿಸಿದ ದಿಗಂಬರ ಕವಿತಾ ಪ್ರಕಾರವು ಸ್ವಲ್ಪ ಕಾಲದಲ್ಲೇ ನಶಿಸಿ ಹೋಯಿತು. ಪರಸ್ಪರ ಅಭಿಪ್ರಾಯ-ವ್ಯತ್ಯಾಸಗಳಿಂದಾಗಿ ಹರಿ-ಹಂಚಾಗಿ ಹೋಯಿತು.

'ತಿರುಗಬಡು' ಕವಿಗಳು ಒಟ್ಟು ಹತ್ತು ಮಂದಿ,-ವರವರರಾವು, ಅಶೋಕ್, ಲೋಚನ, ರೆಷನ್, ಎಕ್ಸ್-ರೇ, ಐ, ಸಂಜೀವರಾವ್, ಸುಧಾಕರ್, ಸುದರ್ಶನ, ಯಾದಗಿರಿ ರಾವು-ಇವರೇ ಆ ಹತ್ತು ಮಂದಿ.

"ವಿಷ ಮಿಶ್ರಿತವಾದ ಪಾಯಸವೇ ನಮ್ಮ ಸ್ವರಾಜ್ಯ. ಧನವಂತ ದುರ್ಮಾರ್ಗಿಗಳು ಬೆಳೆಸಿಕೊಂಡಿರುವವರ ಹಾದರಗಿತ್ತಿಗಳು ನಮ್ಮ ಸ್ವರಾಜ್ಯ-ಹೋರಾಟವಿಲ್ಲದೆ ಶಾಂತಿ ಬರದು-ಸಮಾನವಾದ ಸಮಾಜವನ್ನು ನಿರ್ಮಿಸಬೇಕು. ಪ್ರಕೃತ ವ್ಯವಸ್ಥೆ-ಯನ್ನು ಶಸ್ತ್ರಚಿಕಿತ್ಸೆ ಮಾಡಿ ಹೊಸ ವ್ಯವಸ್ಥೆಯನ್ನು ನಿರ್ಮಾಣ ಮಾಡುವುದು ತ್ಯಾಗ ಬಲಿದಾನಗಳಿಂದಲಷ್ಟೇ ಸಾಧ್ಯ..."[೧೫] ಎಂದು ಸಾಯುಧ ಹೋರಾಟವನ್ನು ಬಯಸಿದರು.

೧೯೭೦ರಲ್ಲಿ ಬಂಡಾಯ ಬರಹಗಾರರ ಬಳಗವು ನಿರ್ಮಾಣವಾಯಿತು (ವಿಪ್ಲವ ರಚಯಿತಲ ಸಂಘಂ—"ವಿರಸಂ") ಈ 'ವಿರಸಂ' ಕೂಡಾ ಮಾರ್ಕ್ಸಿಸ್ಟ್ ತತ್ವವನ್ನು ಅನುಸರಿಸಿತು. ಬಂಡಾಯ ಕವಿಗಳು, ಮಾರ್ಕ್ಸಿಸ್ಟ್-ಲೆನಿನಿಸ್ಟ್ ಪಂಥದ ದಾರಿಯಲ್ಲಿ ನಡೆಯಬೇಕೆಂದೂ ಮಾವೋ ತತ್ವಪ್ರಣಾಳಿಕೆಯನ್ನು ಆಚರಿಸಬೇಕೆಂದೂ ಭಾವಿಸಿ-ದರು. ಭಾರತದೇಶದಲ್ಲಿ ಬಂಡಾಯವು. ದೀರ್ಘಕಾಲದ ಸಾಯುಧ ಹೋರಾಟದ ಮೂಲಕವಷ್ಟೇ ಸಿದ್ಧಿಸಬಹುದು ಹೊರತು ಚುನಾವಣೆಗಳಿಂದಲಾಗಲೀ ಸುಧಾರಣೆ-ಗಳಿಂದಾಗಲೀ ಸಾಧ್ಯವಿಲ್ಲ—ಎಂದು ಇವರು ಗಟ್ಟಿಯಾಗಿ ನಂಬಿದ್ದರು. ಸುಧಾರಣಾ

ವಾದವನ್ನು ಇವರು ಸರ್ವಥಾ ಅಂಗೀಕರಿಸಲಿಲ್ಲ. ಮಾವೋ ಹೇಳಿದ್ದ ರೀತಿಯಲ್ಲಿ ಇವರನ್ನು ಜಾನಪದ ರೀತಿಯಲ್ಲೇ ಪುನರುದ್ಧರಿಸಬೇಕೆಂದೂ ಅದರ ಮೂಲಕ ಬಂಡಾಯ ಪ್ರಜ್ಞೆಯನ್ನು ಬೋಧಿಸುತ್ತಾ ಶ್ರೀಸಾಮಾನ್ಯನ ಹೃದಯವನ್ನು ತಟ್ಟಿ-ದರು. ಈ ವಿಧಾನದಲ್ಲಿ ಅನ್ಯಾಯವನ್ನು ನಿರ್ಭಯವಾಗಿ ಎದುರಿಸುತ್ತ ಬಂದುದರಿಂದ ಪ್ರಜೆಗಳು 'ವಿರಸಂ' ದ ತತ್ವಗಳನ್ನು ಆದರದಿಂದ ಬರಮಾಡಿ ಕೊಂಡರು.

ಅಭ್ಯುದಯ ಕವಿತೆಗಳಿಗೆ ಹೇಗೋ ಹಾಗೆಯೇ ಬಂಡಾಯ ಬರಹಗಾರರ ಸಂಘದ ಸ್ಥಾಪಕ ಅಧ್ಯಕ್ಷರೂ ಶ್ರೀಶ್ರೀಯವರೇ. ಬಂಡಾಯ ಕವಿಗಳು ಉತ್ತಮ ಕವಿತೆಗಳನ್ನೂ ರಚಿಸಿದರು. ಅವರ ಕವಿತೆಗಳಲ್ಲಿ ಎಲ್ಲವೂ 'ಝಂಝೂ' ಎನ್ನುವ ಹೆಸರಿನ ಪುಸ್ತಕ ರೂಪದಿಂದ ಹೊರಬಂದುವು. ಈ ಸಂಕಲನದಲ್ಲಿರುವ ಕವಿತೆಗಳಲ್ಲಿ ಪ್ರಜೆಗಳ ಹೃದಯದ ಆಳಕ್ಕೆ ಇಳಿದು ಕಾರ್ಯೋನ್ಮುಖವಾಗಿಸುವ ಶಕ್ತಿಯನ್ನು ಹೊಂದಿವೆ. ಬಂಡಾಯ ಹೋರಾಟದಲ್ಲಿ ಸತ್ತ ವೀರರನ್ನುದ್ದೇಶಿಸಿ "ಅಣ್ಣಾ, ನಿನ್ನ ಗಾಯದ ಮೇಲೆ ಬೀಸಿದ ಗಾಳಿಯೇ ಕೆಂಪಾಯಿತು" [ಅಶೋಕ್]-ಮೊದಲಾದ ರಸವತ್ತಾದ, ಉತ್ತೇಜಕರವಾದ ಕವಿತೆಗಳು ಇದರಲ್ಲಿವೆ. ಜ್ವಾಲಾಮುಖಿ. ಕೆ. ವಿ. ರಮಣಾರಡ್ಡಿ, ಶಿವುಡು, ನಗ್ನಮುನಿ-ಮೊದಲಾದ ಪ್ರಸಿದ್ಧ ಕವಿಗಳ ರಚನೆಗಳೂ ಇದರಲ್ಲಿ ಇವೆ.

ಶ್ರೀಕಾಕುಳಂ ಜಿಲ್ಲೆಯ ಗಿರಿಜನರ ಹೋರಾಟದಲ್ಲಿ ಸ್ವತಹಾ ಪಾಲ್ಗೊಂಡು ವೀರಮರಣವನ್ನು ಹೊಂದಿದವರು ಸುಬ್ಬಾರಾವು ಪಾಲ್ಗೊಂಡು ವೀರಮರಣವನ್ನು ಹೊಂದಿದವರು ಸುಬ್ಬಾರಾವು ಪಾಣಿಗ್ರಾಹಿಯವರು. ಸಾಹಿತ್ಯಕ್ಕೂ ಹೋರಾಟಕ್ಕೂ ಭೇದವಿಲ್ಲವೆಂದೆಣಿಸಿ ತಮ್ಮ ಜಾನಪದ ಕಥನ ಕಾವ್ಯ [ಜಮುಕು ಕಥಲು] ಗಳಲ್ಲಿ, ಗಿರಿಜನರಲ್ಲಿ ರಾಜಕೀಯ ಪ್ರೇರಣೆಗಳನ್ನು ಉಂಟುಮಾಡುತ್ತ-ಸ್ವತಹ ಹೋರಾಟವನ್ನು ನಡೆಸಿದರು. 'ನರುಡೋ ಭಾಸ್ಕರುಡೋ' ಎನ್ನುವ ಹಾಡಿನಿಂದ ಪ್ರಸಿದ್ಧವಾದ ಕವಿ ಶಿವುಡು ಇವರು 'ಮಾಚೆಲ್ಲಿ ಚಂದ್ರಮ್ಮ'ಮೊದಲಾದ ಕಥನ ಕವನಗಳನ್ನು ಜಾನಪದ ಶೈಲಿಯಲ್ಲಿರಚಿಸಿದರು. ದಿಗಂಬರ ಕವಿಗಳಲ್ಲೊಬ್ಬರಾದ ಚೆರಬಂಡರಾಜು ಅವರು ಪ್ರಭುತ್ವದ ಬಾಧೆಗಳಿಗೆಲ್ಲ ಈಡಾಗಿದ್ದು ಜೈಲು ಶಿಕ್ಷೆಯನ್ನು ಅನುಭವಿಸುತ್ತ ಆರೋಗ್ಯ ಚೆನ್ನಾಗಿಲ್ಲದಿದ್ದರೂ, ಶಕ್ತಿಯುತವಾದ ಕವಿತೆಗಳನ್ನು ರಚಿಸಿದರು. 'ದಿಕ್ಸೂಚಿ', 'ಮುಟ್ಟಡಿ' [ಮುತ್ತಿಗೆ], 'ಗಮ್ಯಂ', 'ಗೌರಮ್ಮ ಕಲಲು'[ಗೌರಮ್ಮನ ಕನಸುಗಳು] ಮೊದಲಾದ ಕವಿತಾ ಸಂಕಲನಗಳನ್ನು ರಚಿಸಿದರು. ಇವರ ಕವಿತಾ ಶಿಲ್ಪವು ಅಮೂಲ್ಯವಾದುದು. ನಗ್ನಮುನಿಯವರ 'ತೂರ್ಪುಗಾಲಿ' [ಪೂರ್ವದ ಗಾಳಿ]. 'ಪೊಯ್ಯಗುರ್ರಂ' [ಮರದಕುದುರೆ] ಶಿವರೆಡ್ಡಿಯವರ 'ನೇತ್ರ ಧನುಸ್ಸು'. ರಮಣಾ ರೆಡ್ಡಿಯವರ 'ಎರ್ರಪಿಡಿಕಿಲಿ' [ಕೆಂಪು ಹಿಡಿ], ವರವರ ರಾವು ಅವರ

'ಜೀವನಾಡಿ', ಜ್ವಾಲಾಮುಖಿಯವರ 'ಓಟಮೆ ತಿರುಗ ಬಾಟು', ನಿಖಿಲೇಶ್ವರರ 'ಮಂಡು ತುನ್ನತರಂ' (ಉರಿಯುತ್ತಿರುವ ಪೀಳಿಗೆ) ಮೊದಲಾದುವು ಬಂಡಾಯ ಕವಿತೆಗಳಲ್ಲಿ ಮುಖ್ಯವಾದವುಗಳು. ಜನರ ಮಧ್ಯೆ ಹೋಗಿ ವರ್ಗಸಂಘರ್ಷವನ್ನು ತಿಳಿಯಪಡಿಸಿ ಹಾಡಿನರೂಪದಲ್ಲಿ ಬಂಡಾಯ ಪ್ರಜ್ಞೆಯನ್ನು ಸ್ವತಹಾ ಪ್ರಚಾರ ಮಾಡಿಕೊಂಡಿರುವ ಕವಿಗಳು "ಗದ್ದರ್".

ಈರ್ಷ್ಯಾ–ದ್ವೇಷಗಳಿಂದ, ಯಾರು ದೊಡ್ಡವರು ಎನ್ನುವ ಸಂಕುಚಿತ ಮನೋಭಾವದಿಂದ 'ವಿರಸಂ' ಕವಿಗಳಲ್ಲಿ ಭಿನ್ನಾಭಿಪ್ರಾಯವೇರ್ಪಟ್ಟು ಬೇರೆ ಬೇರಾದರು. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಭಯದಿಂದ ಇನ್ನು ಕೆಲವರು ದೂರ ಹೋದರು. ಈ ವಿಧದಲ್ಲಿ ವಿರಸಂ ನಿರ್ವೀರ್ಯವಾಯಿತು. ಪ್ರಜೆಗಳಲ್ಲಿ ಉತ್ತೇಜನವನ್ನುಂಟು ಮಾಡಿ-ಹೋರಾಟಕ್ಕೆ ಧುಮುಕುವಂತೆ ಮಾಡುವುದಲ್ಲದೆ ತಾವೂ ಸ್ವತಹ ಆತ್ಮತ್ಯಾಗಕ್ಕೆ ಕವಿಗಳು ಸಿದ್ಧವಾಗಿರಬೇಕು–ತಾವು ವಿಶ್ವಸಿಸದ ಹಾಗೂ ಮಾಡಲು ಅಸಾಧ್ಯವಾದ ತ್ಯಾಗವನ್ನು ಜನಗಳಿಗೆ ಬೋಧಿಸಿದರೆ ಹೇಗೆ? ಬರಬರುತ್ತಾ ಬರೇ ಘೋಷಣೆಯ ಹಂತಕ್ಕೆ ಇಳಿದ ಕವಿಗಳು ಜನರ ವಿಶ್ವಾಸವನ್ನು ಕಳೆದುಕೊಂಡರು.

ಇಸ್ಮಾಯಿಲ್, ವೇಗುಂಟ ಮೋಹನ್ ಪ್ರಸಾದ್, ಕೊತ್ತಪಲ್ಲಿ ಶ್ರೀಮನ್ನಾ–ರಾಯಣ, ರಂಧಿ ಸೋಮರಾಜು–ಮೊದಲಾದವರು ಒಳ್ಳೆಯ ಕವಿತೆಗಳನ್ನು ರಚಿಸು ತ್ತಿದ್ದಾರೆ. ಇಂದ್ರಗಂಟಿ ಶ್ರೀಕಾಂತ ಶರ್ಮ ತಮ್ಮ ಕವಿತೆಗಳ ಮೂಲಕ ಅನು ಭೂತಿವಾದವನ್ನು ತೆಲುಗಿನ ಓದುಗರಿಗೆ ಪರಿಚಯ ಮಾಡಿಕೊಡುತ್ತಿದ್ದಾರೆ. ರಾಜಕೀಯ ಪ್ರಧಾರಿಗಳ ಘೋಷಣೆಯಲ್ಲಿ ಕವಿತೆಯು ಬಂಧಿಯಾಗಿ ಹೋಗಿದೆ ಎನ್ನುತ್ತಾ ಹೊಸಕವಿತೆಯ ಒಂದು ಆಂದೋಳವನ್ನು ಮಾಡಿದವರು ಗುಂಟೂರು ಶೇಷೇಂದ್ರ ಶರ್ಮ ಅವರು. ಈ ಅಂದೋಳನಕ್ಕೆ 'ಕವಿಸೇನಾ' ಎಂದು ಹೆಸರು. 'ಶೇಷಜ್ಯೋತ್ಸ್ನ', 'ನಾದೇಶಮು', 'ಮಂಡೇ ಸೂರ್ಯುಡು' (ಉರಿಯುತ್ತಿರುವ ಸೂರ್ಯ) 'ಗೊರಿಲ್ಲಾ' ಮೊದಲಾದುವು ಇವರ ರಚನೆಗಳು.

V. ವಚನ ಕವಿತೆಗಳು (Free Verse) :

೧೯೩೦ರ ಅನಂತರ ತೆಲುಗು ಕವಿತೆಯ ಬಾಹ್ಯರಚನೆಯಲ್ಲಿ ಉಂಟಾದ ಬದಲಾವಣೆಯ ಪರಿಣಾಮವೇ 'ವಚನ ಕವಿತೆ'. ವಚನ ಕವಿತೆಗೆ ಶಿಷ್ಟ್ಲ ಅವರು ಮೊದಲಿಗರು. ಇದಕ್ಕೆ ಶಕ್ತಿಯನ್ನು ತುಂಬಿದವರು ನಯಾಗರಾ ಕವಿಗಳು ಎನ್ನ ಬಹುದು. ಕುಂದುರ್ತಿಯವರ ನಾಯಕತ್ವದಲ್ಲಿ 'Free Verse Front' ಆರಂಭವಾಯಿತು. ಇದರಿಂದಾಗಿ ವಚನ ಕವಿತೆಯಲ್ಲಿ ವೈವಿಧ್ಯವೇರ್ಪಟ್ಟಿತು. ಅಲ್ಲದೆ ಪ್ರಗತಿಶೀಲ ಭಾವನೆ ಪ್ರಚಾರಕ್ಕೆ ಬಂತು. ವಚನ ಕವಿತೆಗೆ ಪರ್ಯಾಯ

ವಾಗಿ ವಚನಗೇಯ, ವಚನ ಪದ್ಯ, ವಚನ ಕವಿತ, Free verse, verse Libarae ಮೊದಲಾದ ಪದಗಳು ಬಳಕೆಗೆ ಬಂದುವು.

ಪ್ರಗತಿ ಶೀಲ ಕವಿಗಳು ವಚನಕವಿತೆಯನ್ನು ಆದರದಿಂದ ಬರಮಾಡಿ ಕೊಂಡರು, ಕುಂದುರ್ತಿಯವರ 'ತೆಲಂಗಾಣ' ವು ವಚನ ಕವಿತೆಗಳಲ್ಲಿ ಮೊತ್ತ ಮೊದಲ ಸಮಗ್ರ ಕಾವ್ಯ. ಕುಂದುರ್ತಿಯವರು "ನಾನು ಭಾವನೆಯಲ್ಲಿ ಶ್ರೀ ಸಾಮಾನ್ಯನ ಜೀವನ ವಲಯವನ್ನು ದಾಟಲಾರೆ "ಎನ್ನುತ್ತಾ" ನನ್ನ ಕವಿತೆಯೆಂಬ ಹೂದೋಟದಲ್ಲಿ ಛಂದಸ್ಸೆಂಬ ಗಿಡಗಳನ್ನು ನೆಡಲಾರೆ" ಎಂದು ಪ್ರತಿಜ್ಞೆಯನ್ನು ಮಾಡಿದರು. ಬಹಿರಾಕೃತಿಗೆ ಸಂಬಂಧಿಸಿದ ಈ ಬದಲಾವಣೆಯನ್ನು ಆಂದೋಳನ ವೆಂದು ಹಲಮಂದಿ ಅಂಗೀಕರಿಸದೇ ಹೋದರು.

vi. ಮಿನಿ ಕವಿತೆಗಳು :

ಪತ್ರಿಕೆಗಳಲ್ಲಿ ಖಾಲೀ ಜಾಗವನ್ನು ಭರ್ತಿಮಾಡಲು ಸಂಪಾದಕರು ಮಿನಿಕವಿತೆ-ಗಳನ್ನು ಸ್ವೀಕರಿಸಿದುದರಿಂದಾಗಿ ಈರೀತಿಯ ಕವಿತೆಗಳು ಅಧಿಕಸಂಖ್ಯೆಯಲ್ಲಿ ಹೊರ ಬಂದುವು. ಇದು ಪ್ರಸ್ತುತ ಅತ್ಯಧಿಕ ಪ್ರಚಾರದಲ್ಲಿದೆ. ವೇಗವಾಗಿ ಸಾಗುತ್ತಿರುವ ಆಧುನಿಕ ಮಾನವನಿಗೆ ಸುದೀರ್ಘವಾದ ರಚನೆಗಳನ್ನು ಓದಿ ಆಸ್ವಾದಿಸಲು ಸಮಯಾ ವಕಾಶ ಕಡಿಮೆಯಿರುವುದರಿಂದಾಗಿ ಸಾಹಿತ್ಯ ಪ್ರಕ್ರಿಯೆಯಲ್ಲಿ ಬದಲಾವಣೆ ಬಂದಿದೆ. 'ಮಿನಿ ಕವಿತಾ ವಿಪ್ಲವಂ' [೧೯೮೦] ಎನ್ನುವ ಹೆಸರಿನಲ್ಲಿ ಇನ್ನೂರು ಮಂದಿ ಕವಿಗಳ ಮಿನಿಕವಿತೆಗಳು ಒಂದು ಸಂಪುಟವಲ್ಲಿ ಬಂದಿವೆ. ಓದುಗರಲ್ಲಿ ಚಿಂತನೆಗಳನ್ನುಂಟು ಮಾಡುತ್ತ–ಶಿಲ್ಪ ವೈಚಿತ್ರ್ಯಗಳು ಕೂಡಿಕೊಂಡ ಶಕ್ತಿಯುತವಾದ ರಚನೆಗಳು ಈಗ ಬರುತ್ತಿವೆ:

ಎವೆಯೊಡೆದರೆ ಜನನ
ಎವೆ ಮುಚ್ಚಿದರೆ ಮರಣ
ಎವೆ ಮುಚ್ಚೊಡೆಯುವುದಲ್ಲವೆ ಪಯಣ ?

[ಚಂದ್ರಸೇನ್]

ಈ ವಿಧದಲ್ಲಿ ಆಧುನಿಕ ತೆಲುಗು ಕವಿತೆಯು ಸಮಕಾಲೀನ ಸಮಾಜದ ಸಮಸ್ಯೆ ಗಳನ್ನು ಪ್ರತಿಬಿಂಬಿಸುತ್ತ ಅಂತಾರಾಷ್ಟ್ರೀಯ ಪ್ರತಿಷ್ಠೆಗೆ ಏರಬಹುದಾದ ಕವಿತೆ ಗಳನ್ನು ಜಗತ್ತಿಗೆ ಕೊಡುತ್ತಿದೆ.

ಅಡಿಟಿಪ್ಪಣಿಗಳು :

೧. ಬಸವರಾಜು : ಪ್ರೇಮತತ್ವಮು, ವೈತಾಳಿಕುಲು, ಪು. ೩೬-೩೭
೨. ಕೃಷ್ಣಶಾಸ್ತ್ರಿ : ಕೃಷ್ಣಪಕ್ಷಮು, ಪು. ೩೨

೩. ಅದೇ ಪು. ೬೪
೪. ಅದೇ ಪು. ೬೪
೫. ಚಿಲಕಮರ್ತಿ ಲಕ್ಷ್ಮೀನರಸಿಂಹಂ, ೧೯೦೬
೬. ರಾಯಪ್ರೋಲು ಸುಬ್ಬಾರಾವು : ಆಂಧ್ರಾವಳಿ ಪು. ೧೩
೭. ವಿಶ್ವನಾಥ ಸತ್ಯನಾರಾಯಣ : ಆಂಧ್ರಪ್ರಶಸ್ತಿ.
೮. 'ಪಠಾಭಿ' : ಫಿಡೇಲು ರಾಗಾಲ ಡಜನ್, ಪು. ೧
೯. ಶ್ರೀ ಶ್ರೀ : ಪ್ರತಿಭಾ (ಪತ್ರಿಕೆ), ೧೯೩೮
೧೦. ಶ್ರೀ ಶ್ರೀ : ಮಹಾಪ್ರಸ್ಥಾನಂ
೧೧. ಅದೇ
೧೨. ಶ್ರೀ ಶ್ರೀ : ಶ್ರೀ ಶ್ರೀ ಸಾಹಿತ್ಯಂ - ಭಾಗ ೨, ಪು. ೭೨
೧೩. ದಿಗಂಬರ ಕವುಲು : ದಿಗಂಬರ ಕವಿತಾ ಸಂಕಲನ : ಮುನ್ನುಡಿ
೧೪. ದಿಗಂಬರ ಕವಿತಾ ಸಂಕಲನ : ಭಾಗ ೩. ಮೊದಲ ಕವಿತೆ.
೧೫. ತಿರುಗಬಡು ಕವುಲು : ತಿರುಗಬಡು ಕವಿತಾ ಸಂಕಲನಂ–ಸ್ವೇಚ್ಛಾ ಸಾಹಿತಿ : ೧೯೭೯.

ಗ್ರಂಥಸೂಚಿ [Bibliography]

೧. ಆಧುನಿಕ ಆಂಧ್ರ ಕವಿತ್ವಮು–ಸಂಪ್ರದಾಯಮುಲು ಪ್ರಯೋಗಮುಲು : ೧೯೬೭ : ಡಾ. ಸಿ. ನಾರಾಯಣ ರೆಡ್ಡಿ, ಆಂಧ್ರಪ್ರದೇಶ್ ಬುಕ್ ಡಿಸ್ಟ್ರಿಬ್ಯೂಟರ್ಸ್, ಹೈದರಾಬಾದ್.

೨. ಆಧುನಿಕ ತೆಲುಗು ಸಾಹಿತ್ಯಮುಲೊ ವಿಭಿನ್ನ ಧೋರಣಲು : ಕೆ. ಕೆ. ರಂಗನಾಥಾಚಾರ್ಯಲು, ಆಂಧ್ರ ಸಾರಸ್ವತ ಪರಿಷತ್ ಹೈದರಾಬಾದ್.

೩. ತೆಲುಗು ಕವಿತಾ ವಿಕಾಸಂ (೧೯೪೭–೧೯೮೦) : ೧೯೮೨ : ಕೆ. ರಾಮಮೋಹನರಾಯ್, ಎ. ಪಿ. ಸಾಹಿತ್ಯ ಅಕಾಡೆಮಿ, ಹೈದರಾಬಾದ್

೪. ತೆಲುಗು ಕವಿತಾ ವಿಪ್ಲವಾಲ ಸ್ವರೂಪಮು : ೧೯೭೮ : ವಿ. ನಾರಾಯಣರಾವ್, ವಿಶಾಲಾಂಧ್ರ ಪಬ್ಲಿಷಿಂಗ್ ಹೌಸ್, ವಿಜಯವಾಡ.

೫. ತೆಲುಗು ಸಾಹಿತ್ಯ ವಿಕಾಸಂ (೧೯೦೦–೧೯೪೭) : ೧೯೭೯ : ಕೆ. ಕೆ. ರಂಗನಾಥಾಚಾರ್ಯುಲು, ಆಂಧ್ರ ಸಾರಸ್ವತ ಪರಿಷತ್ ಹೈದರಾಬಾದ್

ಶಿಕ್ಷಕ ಸಮಾಜದಿಂದ ಕಲಿಯಬೇಕಾದುದೇನು

● ಜಿ. ಎ. ತಿಗಡಿ

ನಾಳಿನ ನಾಗರಿಕರನ್ನು ರೂಪಿಸಬಲ್ಲಂತಹ ಶಿಕ್ಷಕನು ಸಮಾಜದಿಂದ ಏನನ್ನಾದರೂ ಕಲಿಯುತ್ತಾನೆಯೇ ? ಎಂಬುದು ಅತ್ಯಂತ ಕುತೂಹಲಕರವಾದ ವಿಷಯ. ಇತರರಿಗೆ ಕಲಿಸುವುದನ್ನೆ ಒಂದು ವೃತ್ತಿಯನ್ನಾಗಿಸಿಕೊಂಡ ಶಿಕ್ಷಕನು ಸಮಾಜದಿಂದ ಸ್ವತಃ ಕಲಿಕೆಗೆ ಒಳಪಡುತ್ತಾನೆಂಬುದು ಮೇಲುನೋಟಕ್ಕೆ ಅಸಂಗತವೆನಿಸಿದರೂ ಸೂಕ್ಷ್ಮವಾಗಿ ಅವಲೋಕಿಸಿದಾಗ ನಿಜಾಂಶದ ಅರಿವಾಗದಿರದು.

ಪರಿವರ್ತನಶೀಲತೆ ಸ್ವಾಸ್ಥ್ಯ ಸಮಾಜದ ಪ್ರಮುಖ ಲಕ್ಷಣವಾಗಿದೆ. ಸಮಾಜದ ಪ್ರಮುಖ ಅಂಗವೆನಿಸಿದ ಶಾಲೆಯು, ಬೆನ್ನೆಲುವಾದ ಶಿಕ್ಷಕನು ಈ ಪ್ರಗತಿಶೀಲ ಸಮಾಜದ ಪರಿವರ್ತನೆಗಳಿಗೆ ಯಾವಾಗಲೂ ಪ್ರತಿಸ್ಪಂದಿಸಲೇಬೇಕಾಗುತ್ತದೆ. ಸಮಾಜ ನಿರ್ಮಾಣ ಕಾರ್ಯಕ್ಕೆ ಹೆಗಲೆಣೆಗೊಟ್ಟು ಮುನ್ನಡೆಸಬಲ್ಲವರನ್ನು ರೂಪಿಸುವ ಗುರುತರವಾದ ಜವಾಬ್ದಾರಿ ಶಿಕ್ಷಕರ ಮೇಲಿರುತ್ತದೆ. ಹೀಗಾಗಿ ಅವರುಗಳೆಲ್ಲ ಸಮಾಜದ ಎಲ್ಲಾ ಕ್ಷೇತ್ರಗಳನ್ನು ತೆರೆದಕಣ್ಣಿನಿಂದ ಪರಿಶೀಲಿಸಲೇಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಿಸಿದರೆ ಮುರುಕು ಗುಡಿಸಲಿನಲ್ಲಿ ಪಾಠ ಹೇಳಿಕೊಡುವ ಬಡ ಶಾಲಾ ಶಿಕ್ಷಕನಿಂದ, ಸ್ನಾತಕೋತ್ತರ ಮಟ್ಟದವರೆಗಿನ ಶಿಕ್ಷಕನು [ಅಧ್ಯಾಪಕನು] ಸಮಾಜದಿಂದ ಕಲಿಯುವುದು ಸಾಕಷ್ಟಿದೆ ಎಂಬುದು ವೇದ್ಯವಾಗುತ್ತದೆ.

ಉತ್ತಮ ಶಿಕ್ಷಣದ ಮುಖಾಂತರ [ಉತ್ತಮ] ಒಳ್ಳೆಯ ನಾಗರಿಕರನ್ನು ರೂಪಿಸುತ್ತ, ಆ ಮೂಲಕ ಉನ್ನತ ಮಟ್ಟದ ಸಮಾಜವನ್ನು ನಿರ್ಮಿಸುವ ಗುರಿ ಹೊಂದಿದ ಶಿಕ್ಷಕರು ಸಮಾಜದೊಂದಿಗೆ ಅತ್ಯಂತ ನಿಕಟವಾದ ಸಂಬಂಧವನ್ನು ಹೊಂದಿರಬೇಕಾದುದು ಅತ್ಯವಶ್ಯಕವೆನಿಸಿದೆ. ಒಳ್ಳೆಯ ನಾಗರಿಕರನ್ನು ರೂಪಿಸುವ ಹಂಬಲವಾಗಲಿ, ಕಳಕಳಿಯಾಗಲಿ, ಉನ್ನತ ಸಮಾಜದ ನಿರ್ಮಿತಿಯ ಬಗೆಗೆ ಕನಸು ಕಾಣುವ ದೃಷ್ಟಿಯಾಗಲಿ ಕಂಡ ಕನಸನ್ನು ನನಸಾಗಿಸುವ ಧೃಡಸಂಕಲ್ಪವಾಗಲಿ, ಸಾಧಿಸುವ ಛಲವಾಗಲಿ ನಮ್ಮಲ್ಲಿ ಎಷ್ಟು ಜನ ಶಿಕ್ಷಕರಲ್ಲಿದೆ ? ಇದ್ದರೆ ಅದರ ಪ್ರಮಾಣವೆಷ್ಟು ? ಹಾಗೂ ಅವರಿಗಿರುವ ಅಡ್ಡಿ-ಅಡಚಣೆಗಳೇನು ? ಇತ್ಯಾದಿಗಳೆಲ್ಲವರ ಬಗೆಗೆ ನಾವಿಂದು ಗಂಭೀರವಾಗಿ ಯೋಚಿಸಬೇಕಾಗಿದೆ. ದಿನದಿಂದ ದಿನಕ್ಕೆ ಬದಲಾಗುತ್ತಿರುವ ನಮ್ಮ ಸಮಾಜವನ್ನು ಸೂಕ್ಷ್ಮವಾಗಿ ಅವಲೋಕಿಸಿ, ಆ ಮೂಲಕ ಕುಂದುಕೊರತೆಗಳನ್ನು, ಸಮಸ್ಯೆಗಳನ್ನು ಕಂಡುಕೊಳ್ಳುವ ಮಹತ್ತರ ಕಾರ್ಯವಾಗಬೇಕಾಗಿದೆ.

ಪಾಶ್ಚಿಮಾತ್ಯರ ಸ್ವಚ್ಛಂದ ಪ್ರವೃತ್ತಿಯ ಮೋಹಕ್ಕೊಳಗಾಗಿ ನಮ್ಮ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಇಂದು ಅಸ್ತವ್ಯಸ್ತತೆ ತುಂಬಿ ತುಳುಕಾಡುತ್ತಿದೆ. ತಮ್ಮ ತಮ್ಮ ವೃತ್ತಿಗಳ ಬಗೆಗೆ ಶ್ರದ್ಧೆ-ಗೌರವಗಳಿಲ್ಲದಿರುವುದನ್ನು ನಾವಿಂದು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಣುತ್ತಿದ್ದೇವೆ. ಸ್ವಾರ್ಥತೆ, ಭ್ರಷ್ಟತೆ, ವಂಚನೆ, ಅನ್ಯಾಯ ಅತ್ಯಾಚಾರಗಳಿಂದು ರಾಜಾರೋಷವಾಗಿ ನಡೆಯುತ್ತಿವೆ. ಸತ್ಯ-ಪ್ರೇಮ-ಪ್ರಾಮಾಣಿಕತೆ, ಭ್ರಾತೃತ್ವಗಳಿಂದು ಕೇವಲ ಪುಸ್ತಕದ ನಿರ್ಜೀವ ಪದಗಳಾಗಿವೆ. ಯಾರೂ ಯಾರನ್ನೂ ನಂಬದಂತಹ, ಅಷ್ಟೇ ಏಕೆ ತನ್ನನ್ನೇ ತಾನು ನಂಬದಂತಹ ಪರಿಸ್ಥಿತಿಯುಂಟಾಗಿರುವುದನ್ನು ನೋಡಿದಾಗ ನಮ್ಮ ಸಾಮಾಜಿಕ ಜೀವನವು ಎಷ್ಟೊಂದು ಬರ್ಬರತೆಗೆ ತಲುಪಿದೆ ಎಂಬುವರ ಅರಿವಾಗುತ್ತದೆ. ಹಾಗಾದರೆ ಇದಕ್ಕೆ ಕೊನೆ ಇಲ್ಲವೇ ? ಇದಕ್ಕೆ ಹೊಣೆಗಾರರು ತಮ್ಮ ಕರ್ತವ್ಯವನ್ನರಿತು ಸಮಸ್ಯೆಗಳ ಮೂಲ-ಚೂಲಗಳನ್ನು ತಲಸ್ಪರ್ಶಿಯಾಗಿ ಶೋಧಿಸಿ ಪರಿಹಾರೋಪಾಯಗಳನ್ನು ಕಂಡುಕೊಂಡು ಅನುಷ್ಠಾನದಲ್ಲಿ ತಂದಾಗಲೇ ಇದಕ್ಕೆ ಮುಕ್ತಿ ದೊರೆಯುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಸಂಬಂಧ ಪಟ್ಟವರು ಈಗಿನಂತೆ 'ಓತಿಕಾಟಕ್ಕೆ ಬೇಲಿಸಾಕ್ಷಿಯೆಂಬಂತೆ' ಪಲಾಯನವಾದಿಗಳಾದರೆ, ಸಾಮಾಜಿಕ ಅಧಃಪತನದ ಅಧ್ಯಾಯ ಕೊನೆಮೊದಲಿಲ್ಲದೆ ಸಾಗುತ್ತದೆ. ಈ ಸಾಮಾಜಿಕ ಹೊಣೆಗಾರರ ಪಟ್ಟಿಯಲ್ಲಿ 'ಶಿಕ್ಷಕ' ಮುಂಚೂಣಿಯಲ್ಲಿರುತ್ತಾನೆಂಬುದನ್ನು ಒತ್ತಿ ಹೇಳಬೇಕಾಗಿಲ್ಲ. ಒಂದೊಂದು ಹೊಸ ಮನ್ವಂತರವನ್ನೆ ಸೃಷ್ಟಿಸಬಲ್ಲ ಪೀಳಿಗೆಯನ್ನೇ ರೂಪಿಸುವ ಶಿಕ್ಷಕನ ಮೇಲೆಯೇ ಭಾವೀ ಸಮಾಜದ ಉತ್ತಮಿಕೆಯಾಗಲಿ, ಅನುತ್ತಮಿಕೆಯಾಗಲಿ ಅವಲಂಬಿಸಿದೆಯೆಂದರೆ ತಪ್ಪಾಗಲಾರದು.

ಇತ್ತೀಚಿತ್ತಲಾಗಿ ಸಾಮಾಜಿಕ ವಿಧ್ವಂಸಕ ಕೃತ್ಯಗಳಲ್ಲಿ ವಿದ್ಯಾರ್ಥಿಗಳು ಭಾಗಿಗಳಾಗುತ್ತಲಿರುವುದು ಅತ್ಯಂತ ದುರ್ದೈವದ ಸಂಗತಿಯಾಗಿದೆ. ಸ್ವಾರ್ಥ ರಾಜಕಾರಣಿಗಳ ಕುಮ್ಮಕ್ಕಿನಿಂದ ಹಲವಾರು ರಾಜಕೀಯ ಚಳುವಳಿ-ಮುಷ್ಕರಗಳಲ್ಲಿ ವಿದ್ಯಾರ್ಥಿಗಳು ತೊಡಗುತ್ತಿದ್ದಾರೆ. ಶಾಲೆ-ಕಾಲೇಜುಗಳಲ್ಲಿಯೂ ಗುಂಪುಗಾರಿಕೆ-ರಾಜಕೀಯ ಮನೆ ಮಾಡುತ್ತಿವೆ. ವಿದ್ಯಾರ್ಥಿಗಳೊಂದಿಗೆ ನಿಕಟವಾದ ಅಷ್ಟೇ ನೇರವಾದ ಸಂಬಂಧವನ್ನು ಹೊಂದಿದ ನಮ್ಮ ಶಿಕ್ಷಕರು ಈ ದಿಶೆಯತ್ತ ಗಮನ ಹರಿಸುವುದು ಒತ್ತಟ್ಟಿಗಿರಲಿ ಕೆಲವರು ಸ್ವತಃ ಇದರಲ್ಲಿ ಪರೋಕ್ಷವಾಗಿ ಭಾಗಿಗಳಾಗುತ್ತಿರುವುದು ಅತ್ಯಂತ ದುರದೃಷ್ಟಕರವಾದ ಸಂಗತಿಯಾಗಿದೆ. ಕಾರಣ, ಈ ಬಗ್ಗೆ ನಮ್ಮ ಶಿಕ್ಷಕ ಸಮುದಾಯ ಗಂಭೀರವಾಗಿ ಚಿಂತನೆ ಮಾಡಬೇಕಾಗಿದೆ. ಅಕಸ್ಮಾತ್ ಶಿಕ್ಷಕರು ನಿರ್ಲಕ್ಷ್ಯ ತಾಳಿ-ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಗೂಂಡಾ ಸಂಸ್ಕೃತಿಯೊಂದನ್ನು ಹುಟ್ಟು ಹಾಕಿ ಪೋಷಿಸಿದ ಅಪಕೀರ್ತಿ ಶಿಕ್ಷಕರ ಪಾಲಿಗೆ ಬರುವುದರಲ್ಲಿ ಯಾವುದೇ ಸಂದೇಹವಿಲ್ಲ. ಇತಿಹಾಸ ಇಂಥ ತಪ್ಪನ್ನೆಂದಿಗೂ ಕ್ಷಮಿಸಲಾರದು.

ಗುರು-ಶಿಷ್ಯರ ಸಂಬಂಧವಂತೂ ದಿನದಿಂದ ದಿನಕ್ಕೆ ಹದಗೆಡುತ್ತ ಹೊರಟಿದೆ. ಪ್ರಾಚೀನ ಕಾಲದಲ್ಲಿ ಪೂಜನೀಯವೂ, ಮಹೋನ್ನತವೂ ಆಗಿದ್ದ 'ಗುರು'ವಿನ ಸ್ಥಾನವಿಂದು ಅಧಃಪತನದ ಅಂಚಿಗಿಳಿದಿರುವುದು ನಮ್ಮ ಸಮಾಜದ ಬಹುದೊಡ್ಡ ದುರಂತವಾಗಿದೆ.

ಗುರು ಬ್ರಹ್ಮ ಗುರು ವಿಷ್ಣು
ಗುರುದೇವೋ ಮಹೇಶ್ವರ
ಗುರು ಸಾಕ್ಷಾತ್ ಪರಬ್ರಹ್ಮ
ತಸ್ಮೈ ಶ್ರೀಗುರುವೇ ನಮಃ

ಹೀಗೆಂದು ಘಂಟಾಘೋಷವಾಗಿ ಸಾರಿ ಗುರುವಿನಲ್ಲಿಯೇ ದೈವತ್ವವನ್ನು ಕಂಡುಕೊಂಡ ಉದಾತ್ತ ಸಂಸ್ಕೃತಿ ನಮ್ಮದು. ಆದರೆ, ನಾವಿಂದು ಶಿಕ್ಷಕನಿಗೆ ಎಂಥ ಸ್ಥಾನ ನೀಡಿದ್ದೇವೆ. ಇದಕ್ಕನುಗುಣವಾಗಿ ಅಂದಿನ 'ಗುರು'ವಿನ ವ್ಯಕ್ತಿತ್ವವನ್ನು ಇಂದಿನ ನಮ್ಮ ಶಿಕ್ಷಕನು ಪಡೆದಿದ್ದಾನೆಯೇ ? ಎಂಬುದನ್ನೂ ನಾವು ನಮ್ಮಲ್ಲಿಯೇ ಯೋಚಿಸಬೇಕಾಗಿದೆ. ಎಲ್ಲಿಯೋ ನಾಲ್ಕು ಗೋಡೆಗಳ ಮಧ್ಯೆ ಒಂದೆರಡು ತಾಸು ವಿದ್ಯಾರ್ಥಿಗಳನ್ನು ಕೈದಿಯಂತೆ ಸೆರೆಹಾಕಿ ಅವರಿಗೆ ನಾಲ್ಕಕ್ಷರ ಗೀಚಲು ಕಲಿಸುವುದೇ ತನ್ನ ಕರ್ತವ್ಯವೆಂದು ತಿಳಿದಿರುವ ಶಿಕ್ಷಕ, ತನಗೆ ಹಿಡಿಸಲಿ–ಹಿಡಿಸದಿರಲಿ ಮೌನವಾಗಿ ಅದನ್ನು ಯಂತ್ರದಂತೆ ಅನುಸರಿಸುವ ವಿದ್ಯಾರ್ಥಿ ಸಮುದಾಯ, ಇಂಥವರ ನಡುವೆ ಅನ್ಯೋನ್ಯತೆ ಬೆಳೆಯುವುದಾದರೂ ಹೇಗೆ ? ಸಾಮಾಜಿಕ ಜೀವನದಲ್ಲಿ ಸಾಮರಸ್ಯ ಅನ್ಯೋನ್ಯ ಸಂಬಂಧಗಳನ್ನೇರ್ಪಡಿಸಬಯಸುವ ಶಿಕ್ಷಕ, ಸ್ವತಃ ವಿದ್ಯಾರ್ಥಿಗಳೊಂದಿಗೆ ಅನ್ಯೋನ್ಯತೆಯಿಂದಿರದಿದ್ದರೆ ಹೇಗೆ ? ತಾಳ್ಮೆಯಿಂದ ಪ್ರಯತ್ನಪೂರ್ವಕವಾಗಿ ವಿದ್ಯಾರ್ಥಿಗಳ ಅಂತರಾಳಕ್ಕಿಳಿದು ಅವರ ಬೇಕು ಬೇಡಗಳನ್ನು ಅರಿಯುವ ಆಸಕ್ತಿ ಶಿಕ್ಷಕರಲ್ಲಿಲ್ಲ. ಇದಕ್ಕನುಗುಣವಾಗಿ ತನ್ನ ಬೇಕು ಬೇಡಗಳನ್ನು ಶಿಕ್ಷಕರೆದುರು ಧೈರ್ಯ–ವಾಗಿ ಹೇಳಿ ಪರಿಹರಿಸಿಕೊಳ್ಳುವ ಸೌಲಭ್ಯ ವಿದ್ಯಾರ್ಥಿಗಳಿಗಿಲ್ಲ. ಅಂದ ಮೇಲೆ ಕೇವಲ ಯಾಂತ್ರಿಕತೆಯ ಬದುಕಿನಿಂದ ಕೂಡಿದ ಇವರೀರ್ವರ ಮಧ್ಯೆ ಆತ್ಮೀಯತೆಯನ್ನು ಆಶಿಸುವುದಾದರೂ ಹೇಗೆ ? ಕಾರಣ, ನಮ್ಮ ಶಿಕ್ಷಕರು ಈ ದಿಶೆಯತ್ತಲೂ ಗಭೀರ-ವಾಗಿ ಚಿಂತನೆ ಮಾಡಬೇಕಾದುದು ಅತ್ಯವಶ್ಯಕವಾಗಿದೆ.

ಇನ್ನು ಶಿಕ್ಷಕವೃತ್ತಿಗೆ ಸಂಬಂಧಪಟ್ಟಂತೆ ನಮ್ಮ ಶಿಕ್ಷಕರಲ್ಲಿ ದಿನೇದಿನೇ ಅಪ್ರಾಮಾಣಿಕತೆ ಹೆಚ್ಚುಗುತ್ತಲಿದೆ. ಶಿಕ್ಷಕ ವೃತ್ತಿಯನ್ನು ಕೈಗೊಳ್ಳಲು ಬರುವವರಲ್ಲಿ ಶೇಕಡಾ ೯೦ರಷ್ಟು ಜನರು ಅದನ್ನೊಂದು ಪವಿತ್ರ ಹುದ್ದೆಯೆಂದು ತಿಳಿಯದೇ ಕೇವಲ ಜೀವನೋಪಾಯದ ಸುಲಭ ಮಾರ್ಗವೆಂದು ತಿಳಿದುಕೊಂಡಿರುವುದು ತೀರಾ ಶೋಚನೀಯದ ಸಂಗತಿ. ಉಳಿದೆಲ್ಲ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳಿಂದ ವಂಚಿತ

ರಾದವರು ಶಿಕ್ಷಕ ವೃತ್ತಿಗಿಳಿಯುತ್ತಿರುವುದು ದಿನೇ ದಿನೇ ಹೆಚ್ಚುತ್ತಿದೆ. ಹೀಗಾಗಿ ವೃತ್ತಿಗೌರವ, ಅಧ್ಯಾಪನದಲ್ಲಿನ ನಿಷ್ಠೆ–ಶ್ರದ್ಧೆಗಳು ಮಾಯವಾಗುತ್ತಿವೆ. ಹಲವಾರು ಶಿಕ್ಷಕರಂತೂ ತಮ್ಮನ್ನು ಸರಸ್ವತೀ ಪುತ್ರರೆಂದು ತಿಳಿದುಕೊಳ್ಳುವ ಹೀನಪ್ರವೃತ್ತಿಯೊಂದು ಇತ್ತಿತ್ತಲಾಗಿ ಬೆಳೆಯುತ್ತಲಿರುವುದು ಅತ್ಯಂತ ವ್ಯಸನಕರ ಸಂಗತಿಯಾಗಿದೆ. ಶಿಕ್ಷಕ ಎಂದೆಂದಿಗೂ ವಿದ್ಯಾರ್ಥಿಯೇ, ಆತ ಅಧ್ಯಯನವನ್ನು ನಿಲ್ಲಿಸಿದ ಮರುದಿನವೇ ಅವನ ಸಮಾಧಿ ಎಂಬುವರ ಅರಿವು ಇಂದಿನ ಎಷ್ಟು ಜನ ಶಿಕ್ಷಕರಲ್ಲಿದೆ ? ಇಂಥ ಪರಿಸ್ಥಿತಿಯಲ್ಲಿ, ವಿದ್ಯಾರ್ಥಿಗಳನ್ನು ತನ್ನ ಆತ್ಮೀಯವಲಯಕ್ಕೆ ಸೆಳೆದು ಕಳಕಳಿಯಿಂದ ಕಲಿಸುವ ಶಿಕ್ಷಕರ ಬಗೆಗೆ ವಿಚಾರಿಸುವುದು ಮೂರ್ಖತನವೆನಿಸೀತು ? ಕಾರಣ, ನಮ್ಮ ಶಿಕ್ಷಕ ಸಮುದಾಯವಿಂದು ತಮ್ಮನ್ನು ತಾವೇ ಪರೀಕ್ಷೆಗೊಳಪಡಿಸಿಕೊಳ್ಳುವ ಕಾಲ ಪ್ರಾಪ್ತವಾಗಿದೆ. ಎಷ್ಟರಮಟ್ಟಿಗೆ ನಾವು ಶಿಕ್ಷಕ ವೃತ್ತಿಯನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ ? ಎಂದು ತಮ್ಮಾತ್ಮವನ್ನು ಕೇಳಿಕೊಳ್ಳಬೇಕಾಗಿದೆ. ತನ್ಮೂಲಕ ಅವಕ್ಕೆ ತಮ್ಮ–ತಮ್ಮಲ್ಲೇ ಉತ್ತರವನ್ನೂ ಅರಸಬೇಕಾಗಿದೆ. ಮೌಲ್ಯಮಾಪನದಲ್ಲಿ ಭ್ರಷ್ಟತೆ–ಜಾತೀಯತೆಗಳು ಶಿಕ್ಷಕರನ್ನು ಅಂಟಿಕೊಂಡ ಬಗ್ಗೆ ಅಲ್ಲಲ್ಲಿ ಕೇಳಿಬರುತ್ತಿರುವ ಟೀಕೆಗಳಿಗೆ ನಮ್ಮ ಶಿಕ್ಷಕರು ಜವಾಬ್ದಾರಿಯುತವಾದ ನಿಖರವಾದ ಉತ್ತರವನ್ನು ಕೊಡಬೇಕಾಗಿದೆ. ಅಂಥ ಮನೋಸ್ಥೈರ್ಯ ನಮ್ಮ ಶಿಕ್ಷಕರಲ್ಲಿ ಇದೆಯೇ ಎಂಬುದೇ ಮೂಲಪ್ರಶ್ನೆ.

ಯಾವುದೇ ಒಂದು ಅಥವಾ ಎರಡು ವಿಷಯದಲ್ಲಿ ಪರಿಣತಿ ಪಡೆದ ಶಿಕ್ಷಕ ಮಿಕ್ಕುಳಿದ ವಿಷಯಗಳತ್ತ ವಿಮುಖನಾಗಿದ್ದುಬಿಡುವುದು ಮೂರ್ಖತನವೆನಿಸುತ್ತದೆ. ಸ್ಪುಟ್ನಿಕ್ ಯುಗದಲ್ಲಿ ಬದುಕುತ್ತಿರುವ ನಾವಿಂದು ಹಲವಾರು ಕ್ಷೇತ್ರಗಳಲ್ಲಿ ದಿನಕ್ಕೊಂದು ನವ–ನವೀನ ಸಂಶೋಧನೆಗಳನ್ನು ಪಡೆಯುತ್ತಿದ್ದೇವೆ. ಈ ಎಲ್ಲಾ ಹೊಸ ವಿಷಯಗಳನ್ನು ತಿಳಿದುಕೊಳ್ಳುವುದು ಅಸಾಧ್ಯವಾದರೂ ಪ್ರಮುಖವಾದವುಗಳನ್ನಾದರೂ ಅರಿತುಕೊಳ್ಳಬೇಕಾದುದು ಅಗತ್ಯವೆನಿಸಿದೆ. ಕುತೂಹಲದಿಂದ ವಿವಿಧ ವಿಷಯಗಳ ಮೇಲೆ ಪ್ರಶ್ನೆ ಕೇಳುವ ಮಕ್ಕಳಿಗೆ ಉತ್ತರಿಸಬಲ್ಲಷ್ಟು ತಕ್ಕಮಟ್ಟಿನ ಮೂಲಭೂತ ಜ್ಞಾನವನ್ನಾದರೂ ಇನ್ನುಳಿದ ವಿಷಯಗಳಲ್ಲಿ ಹೊಂದಿರಬೇಕಾದುದು ಅತ್ಯವಶ್ಯಕವೆನಿಸಿದೆ. ಈ ದಿಶೆಯತ್ತ ವಿದ್ಯಾರ್ಥಿಗಳನ್ನು ಅಣಿಗೊಳಿಸಿ ಮುನ್ನಡೆಸಬಲ್ಲ ಶಿಕ್ಷಕ ಸ್ವತಃ ಜವಾಬ್ದಾರಿಯಾಗಬೇಕಾಗುತ್ತದೆ. ಈ ವಿಷಯದಲ್ಲಿ ನಮ್ಮ ಶಿಕ್ಷಕರಿಂದು ಚಲಿಸುವ ವಿಶ್ವಕೋಶವೇ ಆಗಬೇಕಾಗಿದೆ. ಇದಕ್ಕೆ ಪೂರಕವಾಗಿ ಸಮಾಜ ಅವರಿಗೆ ಹಲವಾರು ಅಂಶಗಳನ್ನು ಒದಗಿಸುತ್ತದೆ.

ಒಟ್ಟಿನಲ್ಲಿ ಶಿಕ್ಷಕನಿಂದು ಸಮಾಜದಿಂದ ಏನೆಲ್ಲವನ್ನೂ ಕಲಿಯಬಹುದಾಗಿದೆ. ಆತನ ಆದರ್ಶ–ಧ್ಯೇಯೋದ್ದೇಶಗಳಿಗೆ ಹಲವಾರು ಅಂಶಗಳನ್ನು ಪೂರೈಸುವ ಸಮಾಜವೊಂದು ಅಕ್ಷಯನಿಧಿ ಜ್ಞಾನಾಕಾಂಕ್ಷಿಯಾದ ಶಿಕ್ಷಕ ಈ ನಿಧಿಯಿಂದ—

ಕೆಲವಂ ಬಲ್ಲವರಿಂದೆ ಕಲ್ತು, ಕೆಲವಂ ಶಾಸ್ತ್ರಂಗಳಿಂ ಕೇಳ್ದು ತಾಂ
ಕೆಲವಂ ಮಾಳ್ಪವರಿಂದೆ ಕಂಡು, ಕೆಲವಂ ಸುಜ್ಞಾನದಿಂ ನೋಡುತಂ
ಕೆಲವಂ ಸಜ್ಜನಸಂಗದಿಂದಲರಿಯಲ್, ಸರ್ವಜ್ಞನಪ್ಪ ನರಂ.

ಎಂಬೋಪಾದಿಯಲ್ಲಿ 'ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆ-ವಿಚಾರಗಳ ಪರ್ವತವೇ' ಆಗಬೇಕಾಗಿದೆ, ಹಾಗೂ ಆ ಮೂಲಕ ಉತ್ತಮ ಸಮಾಜದ ನವನಿರ್ಮಾಣ ಮಾಡಬೇಕಾಗಿದೆ.

ಕೆಂಭಾವಿ-ರೇವಣಸಿದ್ಧೇಶ್ವರ ದೇವಸ್ಥಾನದ ಶಾಸನ

● ಲಿಂಗನಗೌಡ ಗು. ಪಾಟೀಲ

ಮುಂಭಾಗ:

೧. ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ ಪೃ
೨. ಥ್ವೀ ವಲ್ಲಭಂ ಮಹಾರಾಜಾಧಿ
೩. ರಾಜ ಪರಮೇಶ್ವರ ಪರಮ ಭಟ್ಟಾ
೪. ರಕಂ ಸತ್ಯಾಶ್ರಯ ಕುಳತಿಳಕಂ
೫. ಚಾಳುಕ್ಯಾಭರಣಂ ಶ್ರೀಮತ್ರೈಳೋಕ್ಯಮಲ್ಲ
೬. ದೇವರ್ಕಲ್ಯಾಣದ ನೆಲೆವೀಡನೊ (ಳು) ಸುಖಸಂ
೭. ಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ
೮. ಶ್ರೀ ರಾಜಾಗ್ರಣಿ ಚಂದನಾತನಮುಗಂ ನಿಂಬಂ ದ್ವಿ
೯. ಷತ್ ಸೈನ್ಯ ಸಂಹಾರಂ ತತ್ಪ್ರಿಯ ಪುತ್ರ
೧೦. ನಲ್ಲಪುಲಿ ವಿಖ್ಯಾತಂ ಗುಣಾನ್ವಿತನಂತಾರಾಜಾ
೧೧. ಗ್ರಜನಯ್ಯಣೌನ್ವಯ ವಿಯತ್ತಿಗ್ಮಾಂಶು ತಾಂ
೧೨. ಪುಟ್ಟಿದಂ ಪಾರಾವಾರಾಪರೀತ ಭೂತಳಯಶಂ ಶ್ರೀ
೧೩. ಚಂದಭೂಪಾಳಕಂ, ಆತನ ತನಯುಂ ಭುವನ
೧೪. ಖ್ಯಾತಗುಣಂ ಶೌರ್ಯ್ಯ ಶಾಳಿರಿಪನೃಪಕುಳ ಸಿದ್ಧೂರ್
೧೫. ತಂ ಷಾಡ್ಗುಣ್ಯಗುಣೋಪೇತಂ ಶಶಿವಿಶದ ಕೀರ್ತಿ ಮೂವ
೧೬. ಡಿಗಣ್ಡಂ, ಸಮಧಿಗತಪಂಚಮಹಾಶಬ್ದ ಮಹಾ
೧೭. ಮಣ್ಡಳೇಶ್ವರಂ ಮಾಹಿಷ್ಮತಿ ಪುರಪೆರೇಶ್ವರಂ ಮೂ
೧೮. ವಡಿಗಂಡಂ ರಿಪುಮಂಡಳಿಕಭೇರುಂಡಂ ಕಟ್ಟಿಕಮಂಡ
೧೯. ಳಿಕರಕ್ಷಾಪಾಳಕಂ, ಕಾರ್ತವೀರ್ಯ್ಯಕುಳತಿಳಕ, ನಸಹಾ
೨೦. ಯ ಶೌರ್ಯ್ಯಂ ಮಂದರಧೈರ್ಯ್ಯನೇಕಾಂಗವೀರಂ ಗೋ
೨೧. ತ್ರ ನಿಸ್ಸಾರಂ ಗುಣಮಣಿಭೂಷಣಂ ರಿಪುನೃಪಭೀ
೨೨. ಷಣಂ ಮುಮ್ಮುರಿಕೋಂಕಣಿಗ ಜಳಧಿಬಡವಾನಳಂ ರಾ
೨೩. ಣಿಯಕುತೂಹಳಂ ನಾಮಾದಿಸಮಸ್ತ ಪ್ರಶಸ್ತಿ
೨೪. ಸಹಿತಂ ಶ್ರೀಮನ್ಮಹಾಮಣ್ಡಳೇಶ್ವರಂ ರೇವರಸರ
೨೫. ಮನೋನಯನವಲ್ಲಭೆಯನವರತ ಪರಮಕ
೨೬. ಲ್ಯಾಣಾಭ್ಯುದಯ ಸಹಸ್ರ ಫಳ ಭೋಗಭಾಗಿನಿ

೨೭. ಮಣ್ಡಳಿಕಭೇರುಣ್ಡಮನಾಸ್ವಾಧನಾಯೋಗಿನಿ
೨೮. ದ್ವಿತೀಯ ಲಕ್ಷ್ಮೀಸಮಾನೆ ಪರಿವಾರನಿಧಾನೆ, ಶೃಂಗಾ
೨೯. ರತಾರಾತರಳತರತರತರಂಗ ಶೋಭಾಪರಿಪೂರ್ಣ್ನ
೩೦. ವಾರ್ಧಿ, ಪಣ್ಡಿತಪಾರಿಜಾತ ನೃಪರಾಜ್ಯಾಭಿವೃದ್ಧಿ ಮೂಪ
೩೧. ಡಿಗಣ್ಡ ವಿಶಾಳೋರಸ್ಥಳ ಸ್ಥತಮೃದುಪದವಿನ್ಯಾ
೩೨. ಸಮರಾಳಗಾಮಿನಿ ಪ್ರತ್ಯಕ್ಷಗೋಮಿನಿ ನಾನಾ
೩೩. ದೇಶಾಗತಾರ್ಥಿಜನ ಪರಿಪೂರ್ಣ ಮನೋರಥಾತ್ಥ ಪ್ರ
೩೪. ದೆ, ಸಕಳಕಳಾವಿದೆ. ಮದಮುದಿತಮದನ
೩೫. ಮದಹರ ತ್ರ್ಯಂಬಕಾದ್ಧಾಂಗಿ ಪದನಳಿನರಂಜಿ
೩೬. ತಾ (ಳ)ಕಿ, ಯಿದಾನಿಂತನ ಪುಣ್ಯಪಣ್ಯಾಂಗನಾ
೩೭. ಲಲಾಟತಿಳಕ, ರೂಪಲಾವಣ್ಯ ಹಾವಭಾವ
೩೮. ವಿಳಾಸವತಿ, ಯಭಿನವಸರಸ್ವತಿ, ಗೋತ್ರ
೩೯. ಚಿಂತಾಮಣಿ, ಯುವತಿಶಿರೋಮಣಿತ್ಯಖಿಳ
೪೦. ನಾಮಾವಳಿ ಸಮಾಳಂಕೃತೆಯರಪ್ಪ ಶ್ರೀಮ
೪೧. ನ್ಮಾಳಿಯಬ್ಬರಸಿಯರ, ಸಕವರ್ಷ ೯೭೬ನೆ
೪೨. ಯ ಜಯಸಂವತ್ಸರದ ಪುಷ್ಯಮಾಸ
೪೩. ದೊಳುತ್ತರಾಯಣ ಸಂಕ್ರಾಂತಿಯಂದು ಮಾಳಿ
೪೪. ಬೇಶ್ವರದೇವರ ಪ್ರತಿಷ್ಠೆಗೆಯ್ದು ದೇವರಂಗಭೋ
೪೫. ಗಕ್ಕೆಯೊಂದು ಭೋಗಂ, ಪೂರ್ವ್ವವರ್ಗ್ಗಂ ಪಳಿಸಲಾ

ಎಡಪಕ್ಕ :

೪೬. ಅಗ್ಗ್ರವೊಂದು ಭೋಗಂ, ಪಾದನ
೪೭. ಕ್ಕಂ ಮಠದಲೋದುವ ವಿದ್ಯಾರ್ಥಿಗಂ ತ್ರಿ್ಥ
೪೮. ಗಳ್ಗಮಾಹಾರಕ್ಕಂ ಪ್ರತಿದಿ
೪೯. ನಕ್ಕವೊಂದು ಭೋಗಮಿಂತು
೫೦. ತ್ರಿಭೋಗಂ ಮಾಡಿ ಪುಬ್ಬ್ರಾಳಶಿ
೫೧. ವಭಳಾಗ್ಗ್ರ ರಾಜಧಾನಿ ಕೆಂ
೫೨. ಬಾವಿಯ ಮೂಡವೊಲದೋ
೫೩. ಟ ಸರ್ವ್ವಬಾಧಾಪರಿಹಾರಂ ಮಾ
೫೪. ಡಿ ಬೆಟ್ಟಕೆಯ್ಮತ್ತರ್ ೧೦೦೦
೫೫. ಎಲೆಯದೋಂಟೆಯ ಕೆಲ

೫೬. ದ ನೀರಪರಿಯಿಂ ಬಡಗಣಾ
೫೭. ಳಿಗೆ ವಡ್ಡದೊತರೋಳಿಯುಂಗ
೫೮. ಡಿಗಳ್ಮಾ (ಡಿ) ಪ್ರತಿಬದ್ಧದಿಂ ಬಳಸಿ
೫೯. ದ ಕೇರಿಯುಂ ಬಡಗಣ ಕೆಱೆ
೬೦. ಯು ಕೆಳಗಣಬರಿಯುಳ ಕೆ
೬೧. ಯು ಬನದೇವರ ನಿವೇದ್ಯಕ್ಕೆ
೬೨. ತೆಂಕವೊಲದ ನಡುಕುರುವದವೊ
೬೩. ಳಲ್ಗಗ್ದಿ ಮತ್ತ ೪ ಕೆಂಭಾವಿ ೨೪
೬೪. ರ ಬಳಿಯು ಕರಡಿಕಲ್ಕೂಡಲಿ
೬೫. ಗೆಯುಂ ತೆರೆವುಂ ಬಾಡದ ಮುಂನ್ನ
೬೬. ಯು ಸಾಮ್ಯಂ ಸಗರ ೨೦೦ರ
೬೭. ರ ಬಳಿಯು ನಗರವುರದ ಮುಂ
೬೮. ನ್ನಯು ಸಾಮ್ಯಮಿಂತಿನಿತುಮು
೬೯. ನಾಚಂದ್ರಾರ್ಕ್ಕಾಂಬರಂ ದಮ್ಮಾಂ
೭೦. ಪ್ರವರ್ದ್ಧಿಸಲ್ ಬಿಟ್ಟ ಇ ಧರ್ಮಕ್ಕಾ
೭೧. ವನೊರ್ವ್ವಂ ಮನವಚನ ಕಾ
೭೨. ಯುಕರ್ಮ್ಮದಲು ಪನ್ರವಮುಂ
೭೩. ಪಾಳ್ದವನಪಾಯುವುಂ ಬಗೆವ
೭೪. ನವಂ ಸ್ವಾನಂ ಗದ್ದೆ ಭಜಾ (ವ್ಯಾ?)ರ್ಗ್ಗ
೭೫. ಳಂ ಗಂಗಾತೀರದೊಳ್ ( ) ಬ್ರಾಹ್ಮ
೭೬. ಣರುಂ ಕವಿಲೆಯುಮನ ಳಿ
೭೭. ದ ಪಾತಕಂ
೭೮. ಸಾಮಾನ್ಯೋಯುಂ ಧರ್ಮ್ಮಸೇತು
೭೯. ನೃಪಾಣಾಂ ಕಾಲೇಕಾಲೇಪಾಲ
೮೦. ನೀಯೋ ಭವದ್ಭಿಃ ಸರ್ವ್ವಾನೇ
೮೧. ತಾನ್ ಭಾಗಿನಃ ಪಾರ್ತ್ಥಿವೇಂದ್ರಾ
೮೨. ನೆ ಭೂಯೋ ಭೂಯೋ
೮೩. ಯಾಚತೇ ರಾಮಚಂದ್ರಃ,
೮೪. ಮದ್ವಂಶಜಾಳ್ವರ ಮಹಿಪತಿ
೮೫. ವಂಶಜಾವಾ ಪಾಪಾದಮೇತ
೮೬. ಮನಸಾರಿತಿಚಾವಸೇನ್ನ

೮೭. ಯೋಪಾಳಯಂತಿ ಮಮ ಧರ್ಮ್ಮ
೮೮. ಮಿದಂ ಸಮಸ್ತಂ ತೇಷಾಂ ಮಯಾ ವಿರಿ
೮೯. ಚಿತೋಂಜಳಿ ರೇವಮ್ಮೂರ್ಧ್ನಿ

ಬಲಪಕ್ಕ :

೯೦. (ಬಹುಭಿ)ರ್ವ್ವಸುಧಾ ದತ್ತಾ ರಾ
೯೧. (ಜಭಿಸ್ಸ) ಗರಾಧಿಭಿಃ ಯಸ್ಯ
೯೨. ಯಸ್ಯ ಯದಾಭೂಮಿಃ,
೯೩. ತಸ್ಯತಸ್ಯ ತದಾ ಫಲಮ್,
೯೪. ಸ್ವದತ್ತಾಂ ಪರದತ್ತಾಂ ವಾಯೋ
೯೫. ಹರೇತಿವಸುನ್ಧರಾಂ ಷಷಂವ್ವ
೯೬. ರ್ಷ ಸಹಸ್ರಾಣಿ ವಿಷಾಯಾಂ
೯೭. ಜಾಯತೇ ಕ್ರಿಮಿಃ, ೧
೯೮. ನೆಲನುಂ ನೇಸರುಮೋಳುಂ ಕುಲ
೯೯. ಗಿರಿಗಳುಂಬುನಿಧಿಗಳುಂ
೧೦೦. ನೆಲಸುವಿನಂ ನೆಲಸುಗೆ ರೇ
೧೦೧. ವರಸನ ಮಾವಿಲದೇವಿಯ,
೧೦೨. ಕೀರ್ತ್ತಿಗಾಮ್ಮ್ರಮೆನಿಸುವ ಧರ್ಮ್ಮ (   ),
೧೦೩. ಶ್ರೀಮತ್ ಬರೆವರರುವ್ರಂ
೧೦೪. ಚಂಗದೇವಯ್ಯಂ ಬರೆದಂ
೧೦೫. ಕೆಂಬಾವಿಯ ಮೂಡಣ
೧೦೬. ವೊಲದ ಅಜನೋಜಂಗಂ ಕಾಳೋ
೧೦೭. ಜಂಗಂ ಬೇರೆ ಬೆಟ್ಟ ಕೆಯಿ
೧೦೮. ಮತ್ತ ೧೦೦ ಮನೀ ಧರ್ಮ್ಮಂ
೧೦೯. ಸಲ್ವನ್ನಂ ಪ್ರತಿಪಾಳಿ
೧೧೦. ಸುವರ್ ಮಂಗಳ ಮಹಾ
೧೧೧. ಶ್ರೀ ಶ್ರೀ ಶ್ರೀ

ಕೆಂಭಾವಿ–ಪುರೋಹಿತರ ಮನೆಯ ಬಳಿಯ ಬಾವಿಗೆ ನೀರು ಸೇದುವಲ್ಲಿ ಹಾಕಿದ ಶಾಸನ

೧. ಶೀಮದ್ವಿಸಯದಿನಮಣಿ ಶ್ರೀನಾಯಕ ನಿ

೨. ಕ,, ಮಕುಟತಟಘಟಿತ ಮಣಿಗ
೩. ಣರೂಢಿತ ಚರಣಸರಸಿರುಹ ಭಗವ
೪. ದರ್ಹತ್ಪರಮೇಶ್ವರ ಪದಾಂಬುಜ ಭ್ರಮರಾ
೫. ಯಮಾಣ ನಿಜಸ್ಫೂರ್ತ್ತಿ ಶ್ರೀ ಮೂಲಸಂ
೬. ಘ ಸರಸ್ವತಿಗಛ ಬಲಾತ್ಕಾರಗಣ ಕೊಂ
೭. ಡಕುಂದಾನ್ವಯ ರಯರಜರಾ (ಜ) ರು ಮಂಡ
೮. ಲಾಚಾರ್ಯ್ಯ ಶ್ರೀವಾದಿಂದ್ರ ವಿಶಾಲಕೀರ್ತ್ತಿಯ
೯. ತಿಲಲಾಮಕುಲತಿಲಕ ಶ್ರೀ ಮದಮರ ಕೀರ್ತಿ
೧೦. ಭಟ್ಟಾರಕದೇವ ಪ್ರಿಯಶಿಷ್ಯಮಹಾವಾ
೧೧. ದಿವಾದಿ (ಕು) ಠಾರ ರಾಯಕ್ಷಿಭ್ರತಾ ಮಹೇಸರಪ
೧೨. ವಿದ್ಧ ಜೈನಚಕ್ರವರ್ತ್ತಿ ಪ್ರವಿಷ್ಟಾನಂತತಪೌಘ
೧೩. ಮಾಘಣಂದಿ ಸೈದ್ಧಾಂತಿಕ ಚಕ್ರವರ್ತ್ತಿಶಿ
೧೪. ಷ್ಯ ಚಂದ್ರದೇವನಂದಿ ಕಪ್ಮಕಾಸಂಘಪ್ರತಿ
೧೫. ಷ್ಠಾಪನಾಧೀಶವರ್ಷ ೧೨೬೩ ವಿಕ್ರಮ ಸಂವ
೧೬. ತ್ಸರ ಕಾರ್ತ್ತಿಕ ಬ ೩ ಮಂವಾರ ಪೊನಗುಂಟಿ
೧೭. ನಾಮಗ್ರಾಮ ಮಹಾಪ್ರಭು ಪೆಸಣೆಹನು
೧೮. ಮಂತಚೌಧರೆಯ ಸೋಬನಾಥಮ್ಮಕಳು
೧೯. ದೇವಿಲಬ್ಧವರ ಪ್ರಸಿದ್ಧಿಯುಹ ದೇವಶ್ರೇಷ್ಠಿ
೨೦. ಸೂನುನಿಸಮ್ಯಕಾವ್ಯನೇಕಗುಣಗಣಾ
೨೧. ಲಂಕೃತನ ಆಹಾರಾಭಯ ಭೈಷಜ್ಯಸಾಧಿ
೨೨. ತಯ್ಯಾದ್ಯಾನೇಕ (ಪ್ರಸಿ)ದ್ಧ ರಣದಕ್ಷಣಾ ಶಿಷ್ಟ
೨೩. ಜನಸಾಸಿತಂ ಮಲ್ಲಿ (ನಾ)ಥ [ಂ],, ಮಂಗಳಮ
೨೪. ಹಾ ಶ್ರೀ ಶ್ರೀ ಶ್ರೀ

ಕೆಂಭಾವಿ-ಗಿರಣಿಯ ಮುಂದಿರುವ ಕಂಬದ ತುಂಡು

[ಮೇಲ್ಭಾಗ ಇಲ್ಲ]

೧. ಳ ಮಾಡಿಸಿವ ಶಿ [ವಾ]ಲ್ಯ
೨. ಚಾವುಣ್ಡೇಶ್ವರೆಕ್ಕೆ ಸಕನೃಪಕಾಳಾಥ್ಯು
೩. ಧಿತಕ್ಕಂ ಸಕವತ್ಸರಂಗಳ ೯೭೮ನೆಯ
೪. ದುರ್ಮ್ಮುಖಿ ಸಂವತ್ಸರದಾಶ್ವೀಜದ ಪೂ
೫. ರ್ಣ್ಣಮೆ ಸೋಮವಾರದಂದು ಸೋಮ

೬. ಗ್ರಹಣವಾಗೆ ತತರ್ಪ್ರಣ್ಯದೆವಸ
೭. ದೊಳ್ ಸರ್ವ್ವನಮ್ಯವಾಡಿ ಪುರೋಹಿತ
೮. ಚಂದ್ರಾದಿತ್ಯಭಟ್ಟೋಪಾಧ್ಯಾಯ
೯. ಪ್ರಮುಖ ಬ್ರಾಹ್ಮಣಾಗ್ನಿ ಸಾಕ್ಷಿ
೧೦. ಗಳ್, ಶ್ರೀಮನ್ಮಹಾ ಮಣ್ಡಳೇಶ್ವರಂರೇ
೧೧. ವರಸರ್ಕಿಟ್ಟಗಾವೆಯ ಚಟ್ಟಸಮ
೧೨. ಗ್ರರಪ್ಪ ಶಿವಲಿಂಗಿಭಟ್ಟಾರಕರಗ್ರ ಶಿಷ್ಯರೆಯುಮ
೧೩. ನಿಯಮ ಸ್ವಾಧ್ಯಾಯಧ್ಯಾನ ಧಾರಣಾ ಮೋ
೧೪. ನಾನುಷ್ಠಾಣ ಜಪಸಮಾಧಿ ಷಡಂಗೋಪಹಾ
೧೫, ರಾದಿಸಂಪನ್ನರನೇಕತರ್ಕ [ನಾ]ಡಿಶಾಸ್ತ್ರ ಪಾರಾವಾ
೧೬. ರ ಪಾರಗರವದಾತ ಕೀರ್ತ್ತಿಧ್ವಜರಮ
೧೭. ಳಿನಚರಿತ್ರರಪ್ಪ ಶ್ರೀಮತ್ಕಳೇಶ್ವರ ಪಣ್ಡಿ
೧೮. ತಗ್ಗ್ಗೆಕಾಸಕ್ಕಬ್ಬೆಧಾರಾಪೂರ್ವ್ವಕಂ ಮಾಡಿ ಯೋಗಿ
೧೯. ಣೆಗಂ ದೇವಕಾರ್ಯಕ್ಕೆ ಭೋಗಂ ತಪೋಧನರ ವಿಹಾ

[ಇದೊಂದು ತುಂಡಾದುದರಿಂದ ಶಾಸನದ ಪೂರ್ವಭಾಗ ಹಾಗೂ
ಉತ್ತರ ಭಾಗ ಇವು ಕಳೆದುಹೋಗಿವೆ.

ಕೆಂಭಾವಿ–ಮಾಲಿಪಾಟೀಲ ಲಿಂಗನಗೌಡರ ಮನೆಯ ಮುಂದೆ ಇರುವ ಕಂಬಗಳು [ನಾಗರೀ ಅಕ್ಷರಗಳು]

೧. ಶ್ರೀ
೨. ಅನಂತ ಮುದ
೩. ಗಲ ಶಕ: ೧೪೯೨

ಪ್ರತಿ ಮಾಡಿದವರು :

ಶ್ರೀ ಸೀತಾರಾಮ ಜಹಗೀಹದಾರ, ಎಂ. ಎ.
ಕನ್ನಡ ಅಧ್ಯಯನಪೀಠ ಮಾನಸ ಗಂಗೋತ್ರಿ
ಮೈಸೂರ ವಿಶ್ವವಿದ್ಯಾಲಯ, ಮೈಸೂರ

ಕಳುಹಿಸಿದವರು :

ಲಿಂಗನಗೌಡ ಗು. ಮಾಲೀಪಾಟೀಲ, ಬಿ. ಎ.
ಮುಕ್ಕಾಂ–ಅಂಚೆ : ಕೆಂಭಾವಿ
ತಾ : ಸುರಪೂರ ಜಿಲ್ಲಾ : ಕಲಬುರ್ಗಿ

ಪಾರಾಗಂಟಿ : ಒಂದು ಆಚರಣೆ

● ಶೈಲಜಾ ಹಿರೇಮಠ

ಜನಪದರಲ್ಲಿ ಅನೇಕಾನೇಕ ವೈಶಿಷ್ಟ್ಯಪೂರ್ಣ ಆಚರಣೆಗಳು ಮನೆಮಾಡಿಕೊಂಡಿರುವದನ್ನು ನಾವು ಸಾಂದರ್ಭಿಕವಾಗಿ ಕಾಣಬಹುದಾಗಿದೆ. ಪ್ರಸ್ತುತ ಲೇಖನ ಹೊಂಬಳ ಗ್ರಾಮದಲ್ಲಿ ಆಚರಿಸಲಾಗುವ ವೈಶಿಷ್ಟ್ಯಪೂರ್ಣವಾದ "ಪಾರಾಗಂಟಿ" ಎಂಬ ಆಚರಣೆಯನ್ನು ಕುರಿತುದಾಗಿದೆ. ಜನಪದರು ನಂಬುವ ಅನೇಕ ದೇವರುಗಳಲ್ಲಿ ಮನೆದೇವರೂ ಒಂದು. ಈ "ಪಾರಾಗಂಟಿ" ಎಂಬ ಆಚರಣೆಯೂ ಸಹ 'ಸಂಗಮೇಶ್ವರನನ್ನು ಮನೆದೇವರನ್ನಾಗಿ ಉಳ್ಳವರು ಆಚರಿಸುವ ಸಂಪ್ರದಾಯವಾಗಿದೆ.

"ಸಂಪ್ರದಾಯ ಮತ್ತು ಆಚರಣೆ (custom & ritual)ಗಳು ಪರಸ್ಪರ ಸಂಬಂಧವುಳ್ಳ ಎರಡು ಜಾನಪದ ಬಗೆಗಳು. ಸಂಪ್ರದಾಯದಲ್ಲಿ ಈ ಆಚರಣೆಗಳು ಬೇರ್ಪಡಿಸಲು ಸಾಧ್ಯವಾಗದ ರೀತಿಯಲ್ಲಿ ಬೆಸೆದುಕೊಂಡಿರುತ್ತವೆ. ಸಂಪ್ರದಾಯ ಪರಂಪರೆಯಿಂದ ಬಂದ ಒಂದು ಗುಂಪಿನ ಆಚರಣೆಗಳ ಮೊತ್ತವಾಗಿದೆ. ಎಲ್ಲ ಸಂಪ್ರದಾಯ, ಆಚರಣೆಯಲ್ಲೂ ನಂಬಿಕೆಗಳನ್ನು ಗುರುತಿಸಬಹುದಾಗಿದೆ. ಪ್ರಮುಖವಾಗಿ ಸಂಪ್ರದಾಯವು ನಂಬಿಕೆಗಳನ್ನು ಪ್ರತಿಸಿಧಿಸುತ್ತದೆ."

ಆಚರಣೆ :

ಮಠಪತ್ತಿಯು ಈ ಪಾರಾಗಂಟಿಯ ಮುಖಂಡ. ಇವನ ಮನೆದೇವರು 'ಸಂಗಮೇಶ್ವರ'ನಾಗಿರುವನಲ್ಲದೇ ಮನೆಯಲ್ಲಿ ಸಂಗಮೇಶ್ವರನ ಎರಡು ಗದ್ದಿಗೆಗಳಿವೆ. ಪಾರಾಗಂಟಿಯು ಮಠಪತ್ತಿಯ ನೇತೃತ್ವದಲ್ಲಿ ಅವನ ಮನೆಯಿಂದ ಹೊರಡುವದು. ದೀಪಾವಳಿಯ ಪಾಡ್ಯಕ್ಕೆ ನಾಲ್ಕು ದಿನಗಳ ಮೊದಲಿನಿಂದ 'ಪಾರಾಗಂಟಿ' ಪ್ರಾರಂಭವಾಗುತ್ತದೆ. ಮೊದಲ ಮೂರುದಿನ ಈ 'ಪಾರಾಗಂಟಿ'ಯು ಜರುಗಿ ನಾಲ್ಕನೇ ದಿನ ಮಂಗಳಹಾಡಿ ಆಚರಣೆಯನ್ನು ಸಮಾಪ್ತಿಮಾಡುತ್ತಾರೆ. "ಸಂಗಮೇಶ್ವರನ ಮೇಲಿನ ಭಕ್ತಿಗಾಗಿ ಈ ಆಚರಣೆಯನ್ನು ಆಚರಿಸಲಾಗುವದು" ಎಂದು ಇವರ ಮುಖಂಡನಾದ ಮಠಪತ್ತಿಯಿಂದ ತಿಳಿದುಬರುತ್ತದೆ. ಈ ಪಾರಾಗಂಟಿಯಲ್ಲಿ ಸಂಗಮೇಶ್ವರನನ್ನು ಮನೆದೇವರನ್ನಾಗುಳ್ಳವರು ಮತ್ತು ಆಸ್ಥೆಯುಳ್ಳ ಲಿಂಗವಂತ ಭಕ್ತರು ಮಾತ್ರ ಭಾಗವಹಿಸಬಹುದು.

ಮೊದಲದಿನರಾತ್ರಿ ಹತ್ತರಿಂದ–ಹನ್ನೆರಡುಗಂಟೆಯ ವೇಳೆಯೊಳಗೇ ಪಾರಾಗಂಟಿಯಲ್ಲಿ ಭಾಗವಹಿಸುವವರು ಸ್ನಾನಮಾಡಿ ಮಡಿಬಟ್ಟೆಯನ್ನುಟ್ಟುಕೊಂಡು, ಮಡಿಯಾದ ಕರೀಕಂಬಳಿಯನ್ನು, ಸಾಧ್ಯವಿದ್ದರೆ ವಾದ್ಯಗಳನ್ನು ತೆಗೆದುಕೊಂಡು

ಮಠಪತ್ತಿಯ ಮನೆಯಲ್ಲಿ ಬಂದುಸೇರುತ್ತಾರೆ.[೧] ಹನ್ನೆರಡು ಗಂಟೆಗೆ ಮೊದಲೇ ಮಠಪತ್ತಿಯು ಸಂಗಮೇಶ್ವರ ಗದ್ದಿಗೆಗಳನ್ನು, ಅದರ ಮೇಲಿರುವ ಶಿವಲಿಂಗಗಳು ಮತ್ತು ಉಳಿದ ದೇವರುಗಳ ಪೂಜೆಯನ್ನು ಮುಗಿಸಿರುತ್ತಾನೆ. ಹನ್ನೆರಡು ಗಂಟೆಯಾಗುತ್ತಲೇ[೨] ಪ್ರತಿಯೊಬ್ಬರು ಕಾಲಮೇಲೆ ನೀರನ್ನು ಹಾಕಿಕೊಂಡು ದೇವರಮನೆಯನ್ನು ಪ್ರವೇಶಿಸಿ, ಗದ್ದಿಗೆಗೆ ನಮಸ್ಕರಿಸಿ, ಕಂಬಳಿಯ ಕೊಪ್ಪೆ[೩] ಕಟ್ಟಿಕೊಂಡು ಅಲ್ಲಿದ್ದ ಯಾವುದಾದರೊಂದು ವಾದ್ಯವನ್ನು ಕೈಯಲ್ಲಿ ಹಿಡಿದುಕೊಂಡು ದೇವರಮನೆಯ ಹೊಸ್ತಿಲನ್ನು ದಾಟಿದರೆಂದರೆ ಮುಗಿಯಿತು, ಮುಂದೆ ಅವರು ಒಬ್ಬರಿಗೊಬ್ಬರು ಮಾತನಾಡುವಂತಿಲ್ಲ, ಹಿಂದೆ ತಿರುಗಿ ನೋಡುವಂತಿಲ್ಲ. ಪಾರಾಗಂಟಿಯು ಸರಿಯಾಗಿ ಹನ್ನೆರಡು ಗಂಟೆಯ ನಂತರ ಮನೆಯಿಂದ ಹೊರಡುತ್ತದೆ. ಇದರಲ್ಲಿ ಭಾಗವಹಿಸುವವರು ಕ್ರಮವಾಗಿ ಒಬ್ಬರಹಿಂದೆ ಒಬ್ಬರು ಹೊರಡುತ್ತಾರೆ ಮುಂಚೂಣಿಯಲ್ಲಿರುವ ಮಠಪತ್ತಿಯು ಏಳುರೆಕ್ಕೆಯ–ಶಂಖ[೪]ವನ್ನು ಊದುತ್ತಾ ಹೊರಡುತ್ತಾನೆ. ಸಾಲಿನ ಕೊನೆಯಲ್ಲಿ ಯಾವಾಗಲೂ ಗಟ್ಟಿಗನಾದ ಮನುಷ್ಯನನ್ನು–ನಿಲ್ಲಿಸಿರುತ್ತಾರೆ. ಅವನು ಜೋಡುಗಂಟೆಯನ್ನು ತನ್ನ ಕೊರಳಿಗೆ ನೇತುಹಾಕಿಕೊಂಡು ಬಾರಿಸುತ್ತಾ ಬರುತ್ತಿರುತ್ತಾನೆ.

ಪಾರಾಗಂಟಿಯಲ್ಲಿ ಶಂಖ, ಜಾಗಟೆ ಮತ್ತು ಘಂಟೆ ಈ ವಾದ್ಯಗಳನ್ನು ಬಳಸುತ್ತಾರೆ. 'ಪಾರಾಗಂಟಿ'ಯಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಭಕ್ತನ ಕೈಯಲ್ಲಿ ಒಂದಿಲ್ಲೊಂದು ಮೇಲೆಹೇಳಿದ ವಾದ್ಯ ಇರಲೇಬೇಕು. ಕೆಲವೊಮ್ಮೆ ಜನರುಹೆಚ್ಚಾಗಿ ವಾದ್ಯಗಳು ಕಡಿಮೆಬಿದ್ದಾಗ, ಮಠಪತ್ತಿಯ ದೇವರಮನೆಯಲ್ಲಿರುವ ಬೆತ್ತಗಳನ್ನು[೫] ಹಿಡಿದುಕೊಂಡು ಹೊರಡುತ್ತಾರೆ. ವಾದ್ಯಗಳನ್ನು ಕೆಲವರು ತಮ್ಮ ಮನೆಯಿಂದಲೇ ತಂದರೆ ಇನ್ನು ಕೆಲವರಿಗೆ ಮಠಪತ್ತಿಯೇ ಒದಗಿಸಿಕೊಡುತ್ತಾನೆ.

---

೧. ಕರಿಕಂಬಳಿ ಮತ್ತು ವಾದ್ಯಗಳನ್ನು ಮೊದಲದಿನವೇ ತಂದು 'ಪಾರಾಗಂಟಿ' ಮುಗಿಯುವವರೆಗೂ ಅವನ್ನು ಮಠಪತ್ತಿಯ ದೇವರ ಮನೆಯಲ್ಲಿಯೇ ಇಟ್ಟಿರುತ್ತಾರೆ.

೨. ಈಗ ಎಲ್ಲರೂ ಗಡಿಯಾರದ ಉಪಯೋಗ ಮಾಡುವವರಿಂದ ಸಮಯವನ್ನು ನಿರ್ದಿಷ್ಟವಾಗಿ '೧೨ ಗಂಟೆ' ಎಂದ್ಹೇಳುವರು. ಮೊದಲು ಹೀಗಿರಲಿಲ್ಲ. ಮಧ್ಯರಾತ್ರಿಯ ನಂತರ ಪಾರಾಗಂಟಿ ಹೊರಡುತ್ತಿತ್ತು.

೩. ಕೊಪ್ಪೆ-ಕುಂಚಿಗೆ ಅಂದರೆ ಕಂಬಳಿಯನ್ನು ಮೂಲಿ ಮಾಡಿಕೊಂಡು ತಲೆಯಮೇಲೆ ಹೊದ್ದುಕೊಳ್ಳುವರು. ಈ ರೀತಿ 'ಕೊಪ್ಪೆ' ಕಟ್ಟಿಕೊಳ್ಳುವದರಿಂದ ಮಳೆಯ ಹನಿಗಳು ತಲೆಯನ್ನು, ಮೈಯನ್ನು ತೋಯಿಸುವದಿಲ್ಲ.

೪. ಏಳುರೆಕ್ಕೆಯ ಶಂಖ – ಎಂದರೆ ಆ ಶಂಖದಮೇಲೆ ಏಳುಮುರಿಗೆಗಳಿವೆ.

೫. ಕೈಯಲ್ಲಿ ಹಿಡಿದುಕೊಂಡು ಹೋಗಲು ಯಾವ ವಾದ್ಯಗಳೂ ಸಿಗದಿದ್ದಾಗ ಬರಿಗೈಯಲ್ಲಿ ಹೋಗದೆ ದೇವರ ಕೋಣೆಯಲ್ಲಿ ಪೂಜೆಗೆಂದು ಇಟ್ಟಿರುವ ಬೆತ್ತಗಳನ್ನು ಒಯ್ಯುವರು.

ಮಠಪತ್ತಿಯ ಮನೆಯಿಂದ ಹೊರಟ ಪಾರಾಗಂಟಿಯು ಮೊದಲನೆದಿನ ಊರೊಳಗಿನ ಯಾವ ದೇವಸ್ಥಾನಗಳಿಗೂ ಹೋಗದೆ ನೇರವಾಗಿ ಹಿರೇಮಠಕ್ಕೆ ಬಂದು ಮಠದಲ್ಲಿ ತಿರುಗಾಡಿ ನಂತರ ಊರೊಳಗೆ ಲಿಂಗವಂತ ಸಮಾಜದ ಜನಗಳು ಹೆಚ್ಚಾಗಿರುವ ಬೀದಿಗಳಲ್ಲಿ ಶಂಖ, ಜಾಗಟೆ ಮತ್ತು ಘಂಟೆ ಈ ವಾದ್ಯಗಳನ್ನು ಬಾರಿಸುತ್ತಾ ಸಾಗುವದು. ಕೊನೆಗೆ ಪುನಃ ಮಠಪತ್ತಿಯ ಮನೆಗೆ ಬಂದು ಸಂಗ-ಮೇಶ್ವರಗದ್ದಿಗೆಗಳಿಗೆ ನಮಸ್ಕರಿಸಿ ಕೊಪ್ಪೆಯನ್ನು ಕಳಚಿ, ವಾದ್ಯವನ್ನು ಅಲ್ಲಿಯೇ ಇಟ್ಟು ತಮ್ಮತಮ್ಮ ಮನೆಗಳಿಗೆ ಹಿಂದಿರುಗುವರು. ಎರಡನೆಯ ದಿನವೂ ಇದೇ ಪ್ರಕಾರವಾಗಿ 'ಪಾರಾಗಂಟಿಯು' ಹೊರಡುವದು. ಈ ಪ್ರಕಾರವಾಗಿ ಪಾರಾಗಂಟಿ ಮೊದಲೆರಡುದಿನ ಊರೊಳಗೆ ತಿರುಗಾಡಿ ಕೊನೆಯ ದಿನ ಅಂದರೆ ಮೂರನೇದಿನ ಊರೊಳಗೆ ಹೋಗದೆ ಹಿರೇಮಠದಲ್ಲಿ ಸುತ್ತಾಡಿ ಊರನ್ನು ಬಲಗಡೆಮಾಡಿಕೊಂಡು ಅಗಸಿಯ ಮುಖಾಂತರ ಹೊರಟು ಊರನ್ನು ಹೊರಗಿನಿಂದ ಸುತ್ತುಹಾಕಿ ಪುನಃ ಅಗಸಿಯ ಮುಖಾಂತರ ಊರೊಳಗೆ ಬರುತ್ತದೆ. ಹೀಗೆ ದಿನವೂ ಹನ್ನೆರಡು ಘಂಟೆಗೆ ಶುರುವಾದ ಪಾರಾಗಂಟಿಯು ಎರಡು–ಮೂರು ತಾಸುಗಳವರೆಗೆ ಸುತ್ತಾಡಿ ಕೊನೆಗೊಳ್ಳುವದು.

ಕಡೇದಿನ ಅಂದರೆ ನಾಲ್ಕನೇದಿವಸ ಮಾತ್ರ 'ಪಾರಾಗಂಟಿ' ಎಲ್ಲಿಯೂ ಹೋಗದೆ ಮಠಪತ್ತಿಯ ಮನೆಯಲ್ಲಿಯೇ ಮಧ್ಯರಾತ್ರಿಯ ವೇಳೆಗೆ ಪೂಜೆಯನ್ನು ಮುಗಿಸಿ ಒಬ್ಬೊಬ್ಬರಾಗಿ ಕೊಪ್ಪೆಕಟ್ಟಿಕೊಂಡು, ಕೈಯಲ್ಲಿ ವಾದ್ಯಗಳನ್ನು ಹಿಡಿದು ಬಾರಿಸುತ್ತಾ ಹೊಸ್ತಿಲನ್ನು ದಾಟಿದ ಶಾಸ್ತ್ರಮಾಡಿ ಮಂಗಳಾರತಿಯೊಂದಿಗೆ ಮುಕ್ತಾಯವಾಡುತ್ತಾರೆ. ಅಂದು ಹಿರೇಮಠದ ಸ್ವಾಮಿಗಳನ್ನು ಕರೆದು ಗದ್ದಿಗೆ ಹಾಕಿ ಊಟಮಾಡಿಸುತ್ತಾರೆ.

ಪಾರಾಗಂಟಿಯ ಮುಕ್ತಾಯದ ಅಂಗವಾಗಿ ನಡೆಯುವ ಪೂಜೆಯಲ್ಲಿ ಸಂಗ-ಮೇಶ್ವರನಿಗೆ ಗುಮಗೀಶ್ಯಾವಿಗೆಯನ್ನೇ[೬] ಎಡೆಗೆಂದು ಮಾಡುವರು. ಮಠಪತ್ತಿಯು ಪಾರಾಗಂಟಿಯು ಶುರುವಾದ ಮೊದಲೆರಡುದಿನ ಭಕ್ತರ ಮನೆಯಿಂದ ಗೋದಿ, ಬೆಲ್ಲ ಮತ್ತು ಹಣವನ್ನು ಸಂಗ್ರಹಿಸುತ್ತಾನೆ. ಕೊನೆಯ ದಿನ ಈ ಗೋದಿಯನ್ನು ಹಸನುಮಾಡಿ ಅಂದೇ ಬೀಸಿಸಿ ಆ ರಾತ್ರಿಯೇ ಹಿಟ್ಟನ್ನು ನಾದಿ. ಮಡಿಯಾಗಿ ಕೈಯಿಂದ ಶ್ಯಾಂವಿಗೆಯನ್ನು ಹೊಸೆದು ಪಾಯಸಮಾಡಿ ದೇವರಿಗೆ ಎಡೆಯನ್ನು ಮಾಡುತ್ತಾರೆ. ಅಂದು ಒಟ್ಟು ಐದು ಎಡೆಗಳನ್ನು ಮಾಡುವರು. ಸಂಗಮೇಶ್ವರ

---

೬. ಗುಮಗಿ ಶ್ಯಾಂವಿಗೆಯೆಂದರೆ ಕೈಯಿಂದ ಹೊಸೆದು ಮಾಡಿದ ದಪ್ಪಶ್ಯಾಂವಿಗೆ.

ಗದ್ದಿಗೆಗಳಿಗೆ ಎರಡು, ದೇಗೇರಿಸಿದ್ದವ್ವನಿಗೆ[೭] ಒಂದು, ಗಾಣವಲವ್ವನಿಗೆ ಒಂದು, ಒಂದು ಹಿರೇಮಠಕ್ಕೆ. ದೇವರ ಎಡೆಗೆ ಗುದಗೀ ಶ್ಯಾಂವಿಗೆಯನ್ನಲ್ಲದೆ ಇಪ್ಪತ್ತೊಂದು ಹೂರಣ ಕಡಬನ್ನು ಮಾಡುವರು. ಒಂಬತ್ತು ಕಣಕದ ಆರತಿ ಮಾಡಿ ಬೆಳಗುತ್ತಾರೆ. ಗದ್ದಿಗೆಯ ಎಡಬಲಕ್ಕೆ ಕಟ್ಟಿಗೆಯ ದೀಪಕಂಬಗಳ ಮೇಲೆ ಎರಡು ಪಣತಿಯನ್ನು ಹಚ್ಚಿಟ್ಟಿರುತ್ತಾರೆ.

ವಾದ್ಯಗಳನ್ನು ಮೊಳಗಿಸುತ್ತ ಸಾಗುವ ಈ ಪಾರಾಗಂಟಿಯು ಊರಲ್ಲಿ ಪೋಗುವಾಗ ಎಲ್ಲಿಯೂ ದೀಪಹಚ್ಚಿರಬಾರದು. ಮಠಪತ್ತಿಯ ದೇವರಮನೆಯಲ್ಲಿನ ದೀಪವನ್ನು ಕಂಡ ಪಾರಾಗಂಟಿಯಲ್ಲಿನ ಜನರಿಗೆ ಒಂದುವೇಳೆ ಊರಲ್ಲಿ ಎಲ್ಲಿಯಾದರೂ ಆಕಸ್ಮಿಕವಾಗಿ ದೀಪ ಕಂಡುಬಂದುದೇ ಆದಲ್ಲಿ ಕಲ್ಲುಗಳನ್ನು ಒಗೆಯುತ್ತಾರೆ. ಪಾರಾಗಂಟಿಯು ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ[೯] ನಿಲ್ಲುತ್ತ ಸಾಗುತ್ತದೆ. ಈ ಸ್ಥಳಗಳು ನಿರ್ಜನಬೀದಿಗಳಾಗಿದ್ದು, ಇಲ್ಲಿ ಯಾರೂ ಹೆಚ್ಚಾಗಿ ಹಾಯ್ದಾಡುವದಿಲ್ಲ, ಏಕೆಂದರೆ ಆ ಸ್ಥಳಗಳಲ್ಲಿ 'ರಾವು' ಇದೆ ಎಂದು ಹೇಳುತ್ತಾರೆ. ಇಂತಹ ರಾವುಸ್ಥಳಗಳಲ್ಲಿ ಬರುತ್ತಲೇ ಶಂಖಗಳು ಸರಾಗವಾಗಿ ಊದುವದಿಲ್ಲ ಎಂದು ಪಾರಾಗಂಟಿಯಲ್ಲಿ ಭಾಗವಹಿಸಿದವರು ಹೇಳುತ್ತಾರೆ. ಹೀಗಾಗಿ ಈ ಸ್ಥಳಗಳಲ್ಲಿ ಎಲ್ಲರೂ ನಿಂತು ಸರಿಯಾಗಿ ಧ್ವನಿಹೊಮ್ಮುವವರೆಗೂ ನಿಂತು ಜೋರಾಗಿ ಊದಿ ಮುಂದೆ ಸಾಗುತ್ತಾರೆ.

ದೆವ್ವ ಬಡಿದ ವ್ಯಕ್ತಿಗಳು, ಮೈಯಲ್ಲಿ ಆರಾಮ ಇಲ್ಲದವರು ಈ ಪಾರಾಗಂಟಿಯು ಹಾದುಹೋಗುವ ದಾರಿಯಲ್ಲಿ ಅಡ್ಡಾಗಿ ಮಲಗಿರುತ್ತಾರೆ. ಮಠಪತ್ತಿಯು

---

೭. ಹಿಂದೆ ಊರ ಹೊರಗೆ 'ದೇವಿಕೆರೆ' ಎಂದು ಒಂದು ಕೆರೆ ಇತ್ತಂತೆ. ಒಮ್ಮೆ ಅಣ್ಣನೊಬ್ಬ ತನ್ನ ತಂಗಿ ಸಿದ್ದವ್ವನನ್ನು ತೌರುಮನೆಗೆ ಕರೆದುಕೊಂಡು ಹೋಗುವಾಗ ದಾರಿಯಲ್ಲಿ ಮೋಸದಿಂದ ಅವಳ ಒಡವೆಗಳನ್ನೆಲ್ಲಾ ಬಿಚ್ಚಿಸಿ ತೆಗೆದುಕೊಂಡು ಅವಳನ್ನು ಈ ಕೆರೆಯಲ್ಲಿ ನೂಕಿಹೋದನಂತೆ. ಅಂದಿನಿಂದ ಅವಳು 'ದೇವಿ' ಎಂದು ಪೂಜಿತಳಾಗಿದ್ದಾಳೆ. ಈಗ ಆ ಸ್ಥಳದಲ್ಲಿ ಕೆರೆ ಇಲ್ಲ. ಆದರೆ ಅಲ್ಲಿ ಒಂದು ಬೇವಿನಮರಕ್ಕೆ ಕಟ್ಟೆ ಕಟ್ಟಿ, ಅದರ ಮೇಲಿರುವ ಕಲ್ಲುಗಳನ್ನು 'ದೇಗೇರಿ ಸಿದ್ದವ್ವ' ಎಂದು ಅಮಾವಾಸ್ಯೆ, ಹಬ್ಬಗಳಲ್ಲಿ ಹೋಗಿ ಪೂಜಿಸಿ ಬರುತ್ತಾರೆ.

೮. ಹೊಂಬಳದಲ್ಲಿ ಒಂದು ದೊಡ್ಡ ಕಲ್ಲಿನಗಾಣವಿತ್ತಂತೆ. ಅದನ್ನು ಗದುಗಿನವರಿಗೆ ಮಾರಿದ್ದರಂತೆ. ಗಾಣವನ್ನು ಅವರು ಎಂಟೆತ್ತುಗಳ ಸಹಾಯದಿಂದ ಬಲವಾದ ಕಬ್ಬಿಣದ ಅಚ್ಚು ಹಾಕಿದ್ದ ಚಕ್ಕಡಿಯಲ್ಲಿ ಹೊತ್ತು ಒಯ್ಯುತ್ತಿದ್ದಾಗ ಆ ಗಾಣ 'ನಾನು ಹೊಂಬಳ ಬಿಟ್ಟು ಬರುವದಿಲ್ಲ ಎಂದು ದಾರಿಯ ಬಳಿ ಉರುಳಿಹೋಗಿ ಕುಳಿತಳಂತೆ' ಅಂದಿನಿಂದ 'ಗಾಣದವ್ವ' ಎಂದು ಅವಳನ್ನು ಗ್ರಾಮಸ್ಥರು ಪೂಜಿಸುವರು.

೯. ದೊಡ್ಡಗಾಣಗೇರ ಹಿತ್ತಲ, ಗೋಪಾಳಪ್ಪನ ಸಂದಿ ಇನ್ನು ಮುಂತಾದವು.

ಅವರನ್ನು ಸ್ವಲ್ಪ ಸ್ಪರ್ಶಿಸಿಯೋ ಅಥವಾ ದಾಟಿಕೊಂಡೋ ಹೋಗುತ್ತಾನೆ. ಈ ರೀತಿ ಮಾಡುವದರಿಂದ ಅವರಿಗೆ ಬಡಿದುಕೊಂಡ ಅನಿಷ್ಟಗಳೆಲ್ಲ ಬಿಟ್ಟು ಹೋಗುವವೆಂದು ನಂಬಿಕೆಯಿದೆ.

ಎಂತಹ ಪ್ರಸಂಗವೇ ಬರಲಿ ಪಾರಾಗಂಟಿಯ ಜನ ಒಬ್ಬರಿಗೊಬ್ಬರು ಮಾತನಾಡುವಂತಿಲ್ಲ, ಹಿಂದೆತಿರುಗಿ ನೋಡುವಂತಿಲ್ಲ. ಮಳೆ–ಗಾಳಿ–ಚಳಿಯಿರಲಿ ಉಳಿದ ಭಕ್ತರು ಬರಲಿ–ಬಿಡಲಿ ಮಠಪತ್ತಿಯೊಬ್ಬನೇ ಆದರೂ ಈ 'ಪಾರಾಗಂಟಿ'ಯನ್ನು ಆಚರಿಸಲೇಬೇಕು. ತಪ್ಪಿಸುವಂತಿಲ್ಲ.

ಪಾರಾಗಂಟಿಯನ್ನು ಕೂಡಲಸಂಗಮ ಮತ್ತು ರೋಣತಾಲೂಕಿನಲ್ಲಿರುವ ಚವಡಿಯಲ್ಲಿಯೂ ಆಚರಿಸುತ್ತಿದ್ದರು ಎಂದು ಹೇಳುತ್ತಾರೆ. ಚವಡಿಯಲ್ಲಿ ಈಗ ಪಾರಾಗಂಟಿಯನ್ನು ಆಚರಿಸುವದು ನಿಂತುಹೋಗಿದೆಯಂತೆ, ಕೂಡಲಸಂಗಮದಲ್ಲಿ ಇದು ಈಗಲೂ ಇದೆಯೋ ಏನೋ ಗೊತ್ತಿಲ್ಲ. ಹೀಗಾಗಿ ಈಗ ಹೊಂಬಳದಲ್ಲಿ ಪಾರಾಗಂಟಿಯನ್ನು ಆಚರಿಸಿಕೊಂಡು ಬರುವರೀತಿಗೂ, ಮೇಲಿನ ಊರುಗಳಲ್ಲಿ ಆಚರಿಸುತ್ತಿದ್ದ ರೀತಿಗೂ ಯಾವುದೇ ಪ್ರಕಾರದ ಸಾಮ್ಯ ಅಥವಾ ವೈಷಮ್ಯಗಳಿದ್ದವೋ ಏನೋ ಎಂದು ತಿಳಿಯಲು ಸಾಧ್ಯವಾಗುವದಿಲ್ಲ. ಆದರೆ ಒಂದು ವಿಶೇಷಸಂಗತಿ ಎಂದರೆ ಈ ಮೂರು ಊರುಗಳಲ್ಲಿ ಪಾರಾಗಂಟಿಯನ್ನು ನಡೆಸಿಕೊಂಡು ಬರುವವರು ಮಠಪತ್ತಿಗಳೇ ಆಗಿದ್ದಾರೆ. ಕೂಡಲಸಂಗಮ ಮತ್ತು ಚವಡಿಗಳಲ್ಲಿ ಈ ಪಾರಾಗಂಟಿಯು ಕೇವಲ ಸಂಗಮೇಶ್ವರನಗುಡಿಯ ಪೌಳಿಯಲ್ಲಿ ಸುತ್ತಿದರೆ. ಹೊಂಬಳದಲ್ಲಿ ಮಾತ್ರ ಊರೊಳಗೆಲ್ಲಾ ತಿರುಗಾಡಿ ಸಾಮಾಜಿಕ ಮಹತ್ವವನ್ನು ಪಡೆದಿದೆ.

ಈ ಪಾರಾಗಂಟಿಯಲ್ಲಿ ಸ್ತ್ರೀಯರು ಭಾಗವಹಿಸುವದಿಲ್ಲ. ಮಠಪತ್ತಿಯ ಮನೆಯ ಸ್ತ್ರೀಯರು ಪೂಜೆಯಲ್ಲಿ ಸಹಕರಿಸುವರಾದರೂ ಪಾರಾಗಂಟಿಯೊಂದಿಗೆ ತಾವೂ ಹೊರಡುವದಿಲ್ಲ.

ಪಾರಾಗಂಟಿಯಲ್ಲಿ ಇಂತಿಷ್ಟೇ ಜನರು ಇರಬೇಕೆಂಬ ನಿಯಮವಿಲ್ಲ. ಹಿಂದೆ 'ಪಾರಾಗಂಟಿ'ಯಲ್ಲಿ ಭಾಗವಹಿಸುವವರು ಬೆತ್ತಲೆಯಾಗಿದ್ದು ಮೇಲೊಂದು ಕರಿಕಂಬಳಿಯ ಕೊಪ್ಪಿ ಕಟ್ಟಿಕೊಂಡು ಹೊರಡುತ್ತಿದ್ದರಂತೆ. ಆದರೆ ಈಗ ಮಾತ್ರ ಮಡಿಬಟ್ಟೆಗಳನ್ನು ಧರಿಸಿರುತ್ತಾರೆ.

ಪಾರಾಗಂಟಿಯಲ್ಲಿ ಭಾಗವಹಿಸಿದವರ ಅನುಭವಗಳು :

ಪಾರಾಗಂಟಿಯಲ್ಲಿ ಭಾಗವಹಿಸುವವರು ಕೆಲವು ನಿಯಮಗಳನ್ನು ಪಾಲಿಸ

ಬೇಕಾಗುತ್ತದೆ. ಮೌನವಾಗಿರಬೇಕು ಮತ್ತು ಹಿಂದೆ ತಿರುಗಿನೋಡಬಾರದು ಎನ್ನುವವು ಅತೀ ಮುಖ್ಯವಾದ ವಿಚಾರಗಳಾಗಿವೆ. ಇವನ್ನು ಎಂತಹ ಪ್ರಸಂಗ ಬಂದರೂ ಮೀರುವಂತಿಲ್ಲ.

೧] ಪಾರಾಗಂಟಿಯು ಊರೊಳಗೆಲ್ಲಾ ಸುತ್ತಾಡಿ ತಿರುಗಿ ಮಠಪತ್ತಿಯ ಮನೆಗೆಬಂದು ಮುಕ್ತಾಯಹೊಂದಿದರೂ ಕೊನೆಯಲ್ಲಿದ್ದ ವ್ಯಕ್ತಿ ಬರಲೇ ಇಲ್ಲ! ಅವನನ್ನು ಯಾವುದೋ ಶಕ್ತಿ ತಡೆಯು ನಿಲ್ಲಿಸಿತ್ತಂತೆ. ಕಾರಣ ಅವನು ವಾದ್ಯವನ್ನು ಜೋರಾಗಿ ಬಾರಿಸುತ್ತ ಅದು ಸರಿದು ಹೋಗುವವರೆಗೂ ಅಲ್ಲಿಯೇ ನಿಂತಿದ್ದನಂತೆ. ಆ ಶಕ್ತಿ ಬಿಟ್ಟುಹೋದನಂತರ ತಾನೊಬ್ಬನೇ ಊರೊಳಗೆಲ್ಲಾ ತಿರುಗಾಡಿ ಮಠಪತ್ತಿಯ ಮನೆಗೆ ಬಂದು ದೇವರಿಗೆ ನಮಸ್ಕರಿಸಿ, ಕೊಪ್ಪೆಕಳಚಿಟ್ಟ ನಂತರವೇ ಎಲ್ಲ ವಿಷಯವನ್ನು ಉಳಿದವರಿಗೆ ಹೇಳಿದನಂತೆ.

೨) ಊರಿನಲ್ಲಿ ಎಂತಹ ಮಹತ್ವದ ಅಥವಾ ಅನಿವಾರ್ಯ ಪ್ರಸಂಗಗಳಿದ್ದರೂ ಸಹ ಪಾರಾಗಂಟಿಯು ಹೊರಟಾಗ ಬೆಳಕನ್ನು ಇರಗೊಟ್ಟಿರಬಾರದು. ಒಂದುವೇಳೆ ಯಾರ ಮನೆಯಲ್ಲಾದರೂ ಸತ್ತಿದ್ದು. ಹೆಣದ ಮುಂದೆ ಬೆಳಕನ್ನು ಮಾಡಿದ್ದರೆ, ಅವರೆಲ್ಲಾ ಬಾಗಿಲು ಹಾಕಿಕೊಂಡು ಬೆಳಕು ಕಾಣದಂತೆ ಮಾಡಬೇಕು. ಒಂದುವೇಳೆ ಬೆಳಕಿದ್ದುದು ಪಾರಾಗಂಟಿಯ ಜನರಿಗೆ ಕಂಡುಬಂದಿದ್ದೇ ಆದಲ್ಲಿ ಅವರ ಮನೆಗೆ ಕಲ್ಲುಬೀಳುವದು ಖಚಿತ. ಇದನ್ನು ಅವರು ಅನಿಷ್ಟ ಲಕ್ಷಣ ಎಂದು ನಂಬುತ್ತಾರೆ.

೩) ಒಮ್ಮೆ ಪಾರಾಗಂಟಿಯೊಂದಿಗೆ ಹೊರಟವನಿಗೆ ನಾಯಿಯೊಂದು ಕಾಲಿಗೆ ಬಲವಾಗಿ ಕಚ್ಚಿತಂತೆ. ಆದರೇನು ಮಾಡುವದು ಅವನು ಮಾತನಾಡುವಂತಿಲ್ಲ. ಅರ್ಧಕ್ಕೆ ಬಿಟ್ಟು ಹೊರಡುವಂತಿಲ್ಲ. ಅದೇ ನೋವಿನಲ್ಲೇ ಅವನು ಊರೆಲ್ಲಾ ಸುತ್ತಾಡಿದನಂತೆ.

೪) ಊರ ಹೊರಗಿನ ಎರಡು–ಮೂರು ಆಳಿನ ಒಂದು ಹಗೆಯನ್ನು ಒಮ್ಮೆ ತೆಗೆದಿದ್ದರಂತೆ. ರಾತ್ರಿ ಕತ್ತಲಲ್ಲಿ ಹೊರಟ ಪಾರಾಗಂಟಿಯ ಜನರಿಗೆ ಈ ವಿಷಯ ಗೊತ್ತಿರಲಿಲ್ಲ. ಹೀಗಾಗಿ ಅವರಲ್ಲಿಯ ಒಬ್ಬ ವ್ಯಕ್ತಿ ಹಗೆಯಲ್ಲಿ ಬಿದ್ದು ಬಿಟ್ಟನು ಆದರೆ ಅವನು ತನ್ನನ್ನು ಮೇಲೆತ್ತಿರಿ ಎಂದು ಕೂಗುವಂತಿಲ್ಲ. ಅವನ ಹಿಂದೆ ಇದ್ದ ವ್ಯಕ್ತಿಗೆ ಈ ವಿಷಯ ಗೊತ್ತಾಯಿತು. ಅವನು ಮುಂದೆ ಹೋಗದೆ ನಿಂತುಬಿಟ್ಟ. ಅವನ ಹಿಂದೆಯೇ ಉಳಿದ ಜನರೂ ನಿಂತು ವಾದ್ಯ ಬಾರಿಸತೊಡಗಿದರು. ಅಂದು ಗುಡುಗು–ಮಿಂಚು ಇದ್ದ ಕಾರಣ ಮಿಂಚು-ಮಿಂಚಿದಾಗ ಮಾತ್ರ ಹಗೆಯಲ್ಲಿ ಬಿದ್ದ ವ್ಯಕ್ತಿಯನ್ನು ನೋಡುವದು ಸಾಧ್ಯವಾಗಿತ್ತು. ಕೊನೆಗೆ ಒಬ್ಬನು ತನ್ನ ಕಾಲನ್ನು ಇಳಿಯಬಿಟ್ಟು ಒಳಗಿನವನು ಮೇಲೆ ಬರುವಂತೆ ಮಾಡಿದನು. ನಂತರ ಪಾರಾಗಂಟಿಯು ಮುಂದೆ ಹೊರಟಿತು.

೫) ಪಾರಾಗಂಟಿಯ ಹಿಂದೆ ದೆವ್ವಗಳು ಬರುತ್ತಿರುತ್ತವಂತೆ. ಆದ್ದರಿಂದ ಹಿಂದೆ ತಿರುಗಿ ನೋಡಬಾರದು ಎಂದು ಹೇಳುತ್ತಾರೆ.

ವಿವರಣೆ : "ಒಂದು ಜನಾಂಗದ ಸಂಸ್ಕಾರದ ವಿಶೇಷ ಭವ್ಯಬುನಾದಿಯ ಮೇಲೆ ರೂಪಿತಗೊಂಡು ಪರಂಪರಾಗತವಾಗಿ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಆ ಸಮಾಜದಲ್ಲಿ ಮುಂದುವರಿಯುವ ವಿಶಿಷ್ಟ ಉಪಾಸನೆ ಪದ್ಧತಿಗಳೇ ಸಂಪ್ರದಾಯಗಳು ಎನಿಸುತ್ತವೆ. ಸಂಪ್ರದಾಯ ಮೂಲತಃ ವೈಯಕ್ತಿಕ ರೂಢಿ, ವ್ಯಷ್ಟ್ಯಾರೂಪದ ಆ ರೂಢಿ ಸಮಷ್ಟಿಯಿಂದ ಸ್ವೀಕೃತವಾಗುತ್ತದೆ." ಈ ಆಚರಣೆ ಯಾವಾಗ ಹುಟ್ಟಿತು ? ಏಕೆ ಹುಟ್ಟಿತು ? ಎಂಬುದು ಯಾರಿಗೂ ಮುಖ್ಯವಲ್ಲ. "ಹಿರಿಯರು ನಡೆಸಿದಂತೆ ನಡೆಸಿಕೊಂಡು ಹೋಗುವದು ಮಾತ್ರ ಮುಖ್ಯ. ಯಾವುದೇ ಸಂಪ್ರದಾಯ ಮುಕ್ಕಾಗದಂತೆ ಆಚರಿಸಿಕೊಂಡು ಹೋಗುವಾಗ "ಹಿರೇರು ಮಾಡಿದ್ದು" ಎಂಬ ಶ್ರದ್ಧೆಯ ಜೊತೆಗೆ, ಧಾರ್ಮಿಕ ಪ್ರಜ್ಞೆ, ದೈವಭಯ ಗಳೂ ಇಲ್ಲಿ ಕೆಲಸ ಮಾಡುತ್ತವೆ."

'ಪಾರಾಗಂಟಿ' ಈ ಪದದ ನಿಷ್ಪತ್ತಿಯನ್ನು ಹೀಗೆ ಹೇಳಬಹುದು. ಪಹರಾ-ಘಂಟೆ> ಪಹರ ಘಂಟಿ> ಪಾರಾಗಂಟಿ. 'ಪಹರಾ' ಅಂದರೆ ಕಾವಲು ಮಾಡುವುದು, ರಾತ್ರಿಯ ಹೊತ್ತು ಊರನ್ನು ಕಾಯುತ್ತಾ ಸುತ್ತಾಡುವವರಿಗೆ ಪಹರೆಯವರೆಂದು ಕರೆಯುವದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇನ್ನು 'ಘಂಟೆ> ಗಂಟಿ'ಯ ವಿಚಾರ. ಈ ಅಪೂರ್ವವಾದ ಆಚರಣೆಯಲ್ಲಿ ಭಾಗವಹಿಸುವವರು ಘಂಟೆ, ಜಾಗಟೆ ಮತ್ತು ಶಂಖಗಳನ್ನು ಬಾರಿಸುತ್ತಾ ಸಾಗುತ್ತಾರೆ. ಹೀಗಾಗಿ ಈ ಆಚರಣೆಗೆ 'ಪಾರಾ ಗಂಟಿ' ಎಂಬ ಹೆಸರು ಬಂದಿದೆ ಎಂದು ಹೇಳಬಹುದು. ರಾತ್ರಿಯವೇಳೆ ವಾದ್ಯ-ಗಳನ್ನು ಮೊಳಗಿಸುತ್ತಾ ಊರವರಿಗೆ ಎಚ್ಚರಿಕೆಯನ್ನು ಕೊಡುವುದು ಇವರ ಉದ್ದೇಶವಾಗಿರಬಹುದು. ಇದೂ ಅಲ್ಲದೆ ಮುಂದೆ ದೀಪಾವಳಿ ಹಬ್ಬ ಇರುವದು. ಆಗ ಮನೆಯಲ್ಲಿಯ ಎಲ್ಲ ಆಭರಣಗಳ್ನು ಪೂಜೆಗೆಂದು ಹೊರಗೆ ತೆಗೆದಿರುತ್ತಾರೆ ಅಲ್ಲದೆ ಊರಸುತ್ತಲಿನ ಹೊಲಗಳೆಲ್ಲಾ ಮುಂಗಾರಿಜೋಳದಿಂದ ತುಂಬಿತುಳುಕಾಡುತ್ತಿರು-ತ್ತವೆ. ಇಂತಹ ಸಮಯದಲ್ಲಿ ಊರೊಳಗೆ ಯಾವರೀತಿಯ ಕಳ್ಳಕಾಕರ ತಂಟೆ ಜರುಗ ದಿರಲೆಂದು ಪಹರೆಯನ್ನು ಈ ರೀತಿ ಸಾಂಕೇತಿಕವಾಗಿ ಮಾಡುತ್ತಿರಬಹುದು.

ಸಂಸ್ಕೃತದ ಈ ಕೆಳಗಿನ ಶ್ಲೋಕ 'ಘಂಟೆ' ಬಾರಿಸುವವರ ಉದ್ದೇಶವೇನು ಎಂಬುದನ್ನು ನಮಗೆ ಸ್ಪಷ್ಟವಾಗಿ ತಿಳಿಸಿಕೊಡುತ್ತದೆ.

"ಆಗಮಾರ್ಥಂತು ದೇವಾನಾಂ
ಗಮನಾರ್ಥಂತು ರಾಕ್ಷಸಾಂ
ಘಂಟಾನಾದಂ ಕುರ್ವೇನಿತ್ಯಾಃ ॥"

ದೇವರುಗಳ (ಒಳ್ಳೆಯ ಶಕ್ತಿ) ಆಗಮನಕ್ಕೆ ಮತ್ತು ರಾಕ್ಷಸರ (ಕೆಟ್ಟಶಕ್ತಿ) ನಿರ್ಗಮನಕ್ಕೆಂದು ಪೂಜೆಯ ವೇಳೆಯಲ್ಲಿ ಘಂಟೆಯನ್ನು ಬಾರಿಸುತ್ತಾರೆ. ಪಾರಾ-ಗಂಟಿಯ ಜನರನ್ನು ದಾರಿಯಲ್ಲಿ ಕೆಲವು ದೆವ್ವಗಳು ಅಥವಾ ಶಕ್ತಿಗಳು ತಡೆದು-ನಿಲ್ಲಿಸುತ್ತವೆ ಎಂಬುದನ್ನು ಕೇಳಿದಾಗ ಶ್ಲೋಕದಲ್ಲಿನ ಮಾತು ಸತ್ಯ ಎಂದು ಖಚಿತವಾಗುತ್ತದೆ. ಇವರು ಆ ಶಕ್ತಿಯು ಸರಿದು ಹೋಗುವವರೆಗೆ ವಾದ್ಯಬಾರಿಸುತ್ತಲೇ ಇರುತ್ತಾರೆ. ಅವುಗಳು ಸರಿದುಹೋದ ನಂತರ ವಾದ್ಯಗಳು ಸರಾಗವಾಗಿ ಬಾರಿಸ-ತೊಡಗುವವು. ಆಗ ಪಾರಾಗಂಟಿಯು ಮುಂದೆ ಸಾಗುತ್ತದೆ. ಪಾರಾಗಂಟಿಯು ಹೊರಟಾಗ ದಾರಿಯಲ್ಲಿ ದೆವ್ವಹಿಡಿದವರು ಮತ್ತು ರೋಗಪೀಡಿತರು ಮಲಗಿರು-ತ್ತಾರೆ. ದೆವ್ವ ಬಡಿದುಕೊಳ್ಳುವದು ಮತ್ತು ರೋಗಗಳು ಬರುವದು ಇವೆಲ್ಲ ಒಂದು ರೀತಿಯಿಂದ ಕೆಟ್ಟಶಕ್ತಿಗಳ ಕಾಟವೇ ಎಂದು ಜನರು ನಂಬುತ್ತಾರೆ. ಕಾರಣ ಈ ಕೆಟ್ಟಶಕ್ತಿಗಳನ್ನೆಲ್ಲಾ ಹೊಡೆದೋಡಿಸಿ ಊರನ್ನು ಮತ್ತು ಸಮಾಜವನ್ನು ಸುಖಿವಾಗಿರಿಸಲೆಂದೇ ಈ ಆಚರಣೆಯು ಜಾರಿಯಲ್ಲಿ ಬಂದಿರಬಹುದು.

'ಪಾರಾಗಂಟಿಯು ಹೊರಟಾಗ ಎಲ್ಲಿಯೂ ಬೆಳಕು ಇರಬಾರದು' ಎನ್ನುವದು ವಿಚಿತ್ರವಾಗಿ ಕಾಣುತ್ತದೆ. ಹಿಂದೆ ಪಾರಾಗಂಟಿಯಲ್ಲಿ ಭಾಗವಹಿಸುವವರು ಬೆತ್ತಲೆಯಾಗಿದ್ದುಕೊಂಡು ಮೇಲೆ ಕಂಬಳಿಯಕೊಪ್ಪೆ ಕಟ್ಟಿಕೊಂಡು ಹೊರಡುತ್ತಿದ್ದಂತೆ. ಈ ಸ್ಥಿತಿಯಲ್ಲಿ ತಾವು ಯಾರಿಗೂ ಸ್ಪಷ್ಟವಾಗಿ ಗೋಚರಿಸದಿರಲೆಂದು ಬೆಳಕನ್ನು ಇರಗೊಡುತ್ತಿರಲಿಲ್ಲವೇನೋ; ಒಂದುವೇಳೆ ಬೆಳಕಿದ್ದರೆ ಅಲ್ಲಿಗೆ ಕಲ್ಲೊಗೆಯುತ್ತಿದ್ದರು. ಆದರೆ ಈಗ ಬೆತ್ತಲೆಯಾಗಿ ತಿರುಗುವದಿಲ್ಲ. ಮಡಿಬಟ್ಟೆಯನ್ನು ಧರಿಸುವರಾದರೂ ಬೆಳಕಿರಬಾರದೆನ್ನುವುದು ಹಿಂದಿನಿಂದ ಬಂದ ಸಂಪ್ರದಾಯವೆಂದು ಅದನ್ನೇ ಮುಂದುವರೆಸಿಕೊಂಡು ಹೋಗುತ್ತಿರಬಹುದು. ಈಗ ಹಳ್ಳಿಯಲ್ಲಿ ವಿದ್ಯುತ್‌ದೀಪಗಳು ಬಂದಿದ್ದರೂ ಸಹ ಪಾರಾಗಂಟಿಯು ಹೊರಡುವ ದಿನಗಳ ರಾತ್ರಿಯಲ್ಲಿ ಇಡೀ ಊರಿನ ಮೇನ್‌ಸ್ವಿಚ್‌ನ್ನು ತೆಗೆದುಬಿಡುತ್ತಾರೆ. ಗ್ರಾಮಸ್ಥರೂ ಸಹ ಇಂತಹ ಸಂದರ್ಭದಲ್ಲಿ ಬೇಕೆಂದೇ ದೀಪಹಚ್ಚುವ ಸಾಹಸಮಾಡುವದಿಲ್ಲ.

"ಹಿಂದೆ ತಿರುಗಿ ನೋಡಬಾರದು, ಮೌನವಾಗಿ ಸಾಗಬೇಕು" ಇವು ನಮ್ಮ ಜನಪದರ ಮೂಲನಂಬಿಕೆಗಳೇ ಆಗಿವೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯ. ಪಾರಾಗಂಟಿಯ ಹಿಂದೆ ದೆವ್ವಗಳು ಬೆನ್ನುಹತ್ತುತ್ತಿರುತ್ತವಂತೆ, ಹಿಂದೆ ತಿರುಗಿ ಯಾರೇ ನೋಡಿದ್ದೇ ಆದಲ್ಲಿ ಅವು ಅವನಿಗೇ ಬಡಿದುಕೊಳ್ಳುವವು ಎಂಬ ನಂಬಿಕೆ ಜನರಲ್ಲಿದೆ. ನಾಲ್ಕುದಾರಿ ಕೂಡಿದಲ್ಲಿ ಮಂತ್ರಿಸಿದ ಉಪ್ಪು-ಮೆಣಸಿನಕಾಯಿ. ಲಿಂಬೇಹಣ್ಣನ್ನು ಇಟ್ಟು ಬರುವಾಗ ಅವರು ಯಾರೊಂದಿಗೂ ಮಾತನಾಡುವದಿಲ್ಲ. ನಿರ್ದಿಷ್ಟ ಜಾಗದಲ್ಲಿ ಮಂತ್ರಿಸಿದ್ದನ್ನು ಇಟ್ಟುಬರುವಾಗ ಹಿಂದೆ ತಿರುಗಿ ನೋಡುವದಿಲ್ಲ. ಇದೇ ರೀತಿ

ಬೇತಾಳದ ಕಥೆಗಳಲ್ಲಿ ರಾಜಾವಿಕ್ರಮಾದಿತ್ಯನು ಬೇತಾಳವನ್ನು ಹೆಗಲಮೇಲೆ ಹೊತ್ತು ಕೊಂಡು ಸಾಗುವಾಗ ಮೌನವ್ರತಾಧಾರಿ ಆಗಿರುತ್ತಾನೆ. ವಿಕ್ರಮಾದಿತ್ಯನ ಮೌನ-ಭಂಗವಾದ ತಕ್ಷಣವೇ ಆ ಬೇತಾಳವು ರಾಜನಿಗೆ ವಶವಾಗದೆ ಮಾಯವಾಗುತ್ತದೆ. ಈ ಎಲ್ಲ ಪ್ರಸಂಗಗಳನ್ನು ವೀಕ್ಷಿಸಿದಾಗ 'ಮೌನವಾಗಿರುವುದು, ಹಿಂದೆ ತಿರುಗಿ ನೋಡದೆ ಇರುವುದು' ಇವೆಲ್ಲ ಕಾರ್ಯಸಾಧನೆಗೆ ಅವಶ್ಯವಾದ ಅಂಶಗಳಾಗಿವೆ ಎಂದು ತಿಳಿದು ಬರುತ್ತದೆ.

'ಮಠಪತ್ತಿ' ಅಂದರೆ ಮಠದ (ಹಿರೇಮಠದ) ಸೇವಕ. ಈ ಪಾರಾಗಂಟೆಯು ಇವನ ಮುಖಂಡತ್ವದಲ್ಲಿಯೇ ಆಚರಿಸಲ್ಪಡುವದರಿಂದ, ಹಿರೇಮಠದ, ಅಲ್ಲಿರುವ ದೇವಸ್ಥಾನದ ಪಹರೆ ಮಾಡುವದು ಮತ್ತು ಲಿಂಗವಂತ ಸಮಾಜದ ಒಳಿತನ್ನು ಹಾರೈಸುವದು ಮಠಪತ್ತಿಯ ಕರ್ತವ್ಯಗಳಲ್ಲಿ ಒಂದಾಗಿತ್ತು ಎನ್ನುವದು ತಿಳಿದು ಬರುವದು. ಮಠಪತ್ತಿ ಮತ್ತು ಲಿಂಗವಂತರು ಮಾತ್ರ ಇದರಲ್ಲಿ ಭಾಗವಹಿಸುವದ-ರಿಂದ ಈ ಆಚರಣೆಯು ಲಿಂಗವಂತ ಸಮಾಜಕ್ಕೆ ಮಾತ್ರ ಸೀಮಿತವಾದುದು ಎಂದು ಹೇಳಬಹುದು.

ಪಾರಾಗಂಟೆಯು ಸಾಗುವಾಗ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ನಿಲ್ಲುತ್ತದೆ. ಈ ಸ್ಥಳಗಳು ಹಿಂದೆ ನಿರ್ಜನವಾದ, ಯಾರೂ ಸಂಚರಿಸಲಾರದ ಬೀದಿಗಳಾಗಿದ್ದುವು. ಉದಾ : ದೊಡ್ಡಗಾಣಿಗೇರ ಹಿತ್ತಲದ ಹತ್ತಿರ ಪಾರಾಗಂಟೆಯು ನಿಲ್ಲುತ್ತದೆ. ಅಲ್ಲಿ 'ರಾವು' ಇದೆಯೆಂದು ಜನರು ಹೆಚ್ಚಾಗಿ ಸಂಚರಿಸುತ್ತಿದ್ದಿಲ್ಲ. ಹಿಂದೆ ಇಲ್ಲೊಂದು ದೊಡ್ಡ ಅರಳೀಮರವಿತ್ತು ಆದರೆ ಈಗ ಅದನ್ನು ಕಡೆದಿದ್ದಾರೆ.

ಈ ಅರಳೀಮರ. ಆಲದಮರ ಮತ್ತು ಹುಣಸೀಮರಗಳು ಇದ್ದಲ್ಲಿ 'ರಾವು' ಇರುವದೆಂದು ನಂಬುವರಲ್ಲದೆ, ಅಲ್ಲಿ ರಾತ್ರಿಯ ಹೊತ್ತು ಮತ್ತು ಮಧ್ಯಾಹ್ನ ಸಂಚರಿಸಲೂ ಸಹ ಅಂಜುತ್ತಾರೆ. ಹುಣ್ಣಿವೆ ಮುಂತಾದ ಕೆಲವು ದಿನಗಳ ರಾತ್ರಿ ಸಮಯದಲ್ಲಿ ಈ ಗಿಡಗಳೊಳಗೆ ಉಸಿರಾಟ (Respiration) ಜೋರಾಗಿ ನಡೆಯು-ವದು. ಆಗ ಗಿಡಗಳಲ್ಲಿ ಶಾಖ ಉತ್ಪನ್ನ ಆಗುತ್ತದೆ. ಈ ಕ್ರಿಯೆಯು ಚಿಗುರೆಲೆಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಆಗ ಇವುಗಳು ಬೆಂಕಿಯ ಕಿಡಿಗಳಂತೆ ನೋಡುವವರಿಗೆ ಗೋಚರಿಸುತ್ತವೆ. ಕಾರಣ ಮುಗ್ಧಜನರು ಅಲ್ಲಿ 'ರಾವು' ಅಥವಾ 'ಕೆಟ್ಟಶಕ್ತಿ' ಇದೆ-ಯೆಂದು ಸಂಚರಿಸಲು ಹೆದರುತ್ತಾರೆ

ಇಲ್ಲಿ ಜಾನಪದದ ಒಂದು ಆಚರಣೆಯಾದ 'ಪಾರಾಗಂಟೆ'ಯನ್ನು ಕುರಿತು ಮಾತ್ರ ವಿವೇಚಿಸಲಾಗಿದೆ. ಇಂತಹ ಹಲವಾರು ಆಚರಣೆಗಳು ಬೇರೆ ಬೇರೆ ಮಠೀಯ

ರಲ್ಲಿ, ಜನಪದರಲ್ಲಿ ಕಂಡುಬರುತ್ತವೆ. ಅವೆಲ್ಲವುಗಳ ಕೂಲಂಕಷ ಅಧ್ಯಯನದಲ್ಲಿ ಜಾನಪದದ ಅನೇಕಾನೇಕ ಪದರುಗಳು ಅತ್ಯಂತ ನೂತನ ಸಂಗತಿಗಳನ್ನು ಹೊರ ಹಾಕುತ್ತ ನಮ್ಮ ನಾಡಿನ ಸಂಸ್ಕೃತಿ ಅಧ್ಯಯನಕ್ಕೆ ನಿಶ್ಚಯವಾಗಿಯೂ ನೆರವು ನೀಡುತ್ತದೆ ಎಂದು ಹೇಳಬಹುದು.

ಗೀತಾ ನಾಗಭೂಷಣರ

ಹಸಿ ಮಾಂಸ ಮತ್ತು ಹದ್ದುಗಳು : ವಿಮರ್ಶೆ

● ವಿಜಯಶ್ರೀ ಸಬರದ

ಕನ್ನಡ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಜನಜೀವನದ ಸಮಸ್ಯೆಗಳು, ಸಾಮಾಜಿಕ, ರಾಜಕೀಯ, ಐತಿಹಾಸಿಕ ಮತ್ತು ಇನ್ನಿತರ ವಿಷಯ ಘಟನೆಗಳನ್ನು ಸವಿಸ್ತಾರವಾಗಿ ಸ್ಪಷ್ಟವಾದ ಚಿತ್ರಣವನ್ನು ಕೊಡುವುದೇ ಕಾದಂಬರಿಯ ಉದ್ದೇಶ. ಸಾಹಿತ್ಯದ ಎಲ್ಲಾ ಪ್ರಕಾರಗಳಿಗಿಂತಲೂ ಇಪತ್ತು ಕಾದಂಬರಿ ಪ್ರಕಾರ ಹೆಚ್ಚು ಜನಪ್ರಿಯವಾಗಿದೆ. ಈ ವಲಯದಲ್ಲಿ ಕಾದಂಬರಿಕಾರ್ತಿಯರ ಸಂಖ್ಯೆ ಇಂದು ಬಹಳಷ್ಟು ಬೆಳೆದಿದೆ. ಆದರೆ ಸಾಹಿತ್ಯಕವಾಗಿ ಪರಿಗಣಿಸುವ ಕಾದಂಬರಿಗಳು ಕಡಿಮೆ ಇವೆ. ಹೈದ್ರಾಬಾದ ಕರ್ನಾಟಕದಲ್ಲಿ ಕಾದಂಬರಿಕಾರ್ತಿಯರು ಬೆರಳೆಣಿಕೆಯಲ್ಲಿ ಮಾತ್ರ ಸಿಗುವರು. ಈ ಭಾಗದಿಂದ ಪ್ರಮುಖವಾಗಿ ಗೀತಾ ನಾಗಭೂಷಣ ಮತ್ತು ಬಿ. ಟಿ. ಲಲಿತಾನಾಯಕ ಅವರನ್ನು ಹೆಸರಿಸಬಹುದು. ಇವರ ಕೆಲವು ಕಾದಂಬರಿಗಳು ಉದಯೋನ್ಮುಖ ಲೇಖಕಿಯರಿಗೆ ಪ್ರಚೋದನೆ ನೀಡುವಂತಿವೆ.

ಗೀತಾ ನಾಗಭೂಷಣರು ಹಲವಾರು ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳು ಹೆಚ್ಚಾಗಿ ಸಾಮಾಜಿಕ ಮತ್ತು ಹೆಣ್ಣಿನ ಸಮಸ್ಯೆ ಕುರಿತು ರಚಿಸಲಾಗಿವೆ. ಅವರ ಹಲವು ಕಾದಂಬರಿಗಳಲ್ಲಿ ನನ್ನ ಗಮನ ಸೆಳೆದ ಕಾದಂಬರಿಯೆಂದರೆ ಚಲನಚಿತ್ರವಾದ 'ಹಸಿಮಾಂಸ ಮತ್ತು ಹದ್ದುಗಳು'. ಈ ಕಾದಂಬರಿಯ ವಸ್ತು ಹಳೆಯದಾದರೂ ಇವತ್ತಿಗೂ ಜ್ವಲಂತವಾದ ಸಮಸ್ಯೆಯಾಗಿದೆ. ಕ್ರೌರ್ಯ, ದೌರ್ಜನ್ಯ ಮತ್ತು ಅತ್ಯಾಚಾರಕ್ಕೆ ಬಲಿಯಾದ ಹೆಣ್ಣು ಮೇಲೇಳಲಾರದೆ ಮೌನವಾಗಿ ತಾಳ್ಮೆಯಿಂದ ಇದ್ದು ತನ್ನತನವನ್ನೇ ಹೆಜ್ಜೆಹೆಜ್ಜೆಗೂ ಕಳೆದುಕೊಂಡ ಜೀವಂತ ಶವ ಹೇಗೆ ಆಗಿದ್ದಾಳೆ ಎಂಬ ಮುಖ್ಯ ವಿಚಾರದ ಮೇಲೆ ಕಾದಂಬರಿ ರೂಪಗೊಂಡಿದೆ. ಜಾತೀಯತೆ, ಬಡತನ ಮತ್ತು ಮೂಢನಂಬಿಕೆ, ಸಂಪ್ರದಾಯಗಳ ಮುಖಾಂತರ ಶ್ರೀಮಂತರು ನಡೆಸುವ ದಬ್ಬಾಳಿಕೆ ಇವೆಲ್ಲವೂ ಕಾದಂಬರಿಯಲ್ಲಿ ಪೂರಕವಾಗಿ ಬಂದಿವೆ.

ಅಸ್ಪೃಶ್ಯ ಜಾತಿಯಲ್ಲಿ ಹುಟ್ಟಿದ ಲಚ್ಚಿ ತನ್ನ ಜಾತಿಗಿಂತ ಕೀಳಾಗಿದ್ದ ಮಾದಿಗರ ಜಾತಿಯಲ್ಲಿ ಹುಟ್ಟಿದ್ದ ಕಾಶೀನಾಥನನ್ನು ಪ್ರೀತಿಸುತ್ತಾಳೆ. ತಂದೆಯನ್ನು ಕಳೆದುಕೊಂಡು ಅನಾಥಳಾದಾಗ ಕಾಶೀನಾಥನನ್ನೇ ನಂಬಿಕೊಂಡಿದ್ದ ಲಚ್ಚಿ ಕುಲಕರ್ಣಿಯ ಕಾಮುಪಿಪಾಸಕ್ಕೆ ಬಲಿಯಾಗದೆ ಪ್ರತಿಭಟಿಸುತ್ತಾಳೆ. ಕುಲಕರ್ಣಿ

ತ್ತನ್ನ ಆಸೆ ಕೈಗೂಡದಿದ್ದಾಗ ಲಚ್ಚಿಯ ಮೇಲೆ ಕಳ್ಳತನದ ಅಪಾದ ಹೊರಿಸಿ ಪೋಲೀಸರಿಗೆ ಒಪ್ಪಿಸುವನು. ಹಳ್ಳಿಯ ಮುಗ್ಧಳಾದ ಲಚ್ಚಿಯ ಜೀವನದ ಎರಡನೇ ತಿರುವು ಜೈಲಿನಲ್ಲಿ ಪ್ರಾರಂಭವಾಗುವುದು. ಆಮೇಲೆ ಸ್ತ್ರೀನಿಕೇತನದಲ್ಲಿ ಮುಂದು ವರೆಯುವುದು. ಜೀವನದಲ್ಲಿ ಭರವಸೆ ಆಸೆಗಳನ್ನೇ ಕಳೆದುಕೊಂಡವಳಿಗೆ 'ಬಸಣ್ಣ' ಮಿನುಕು ದೀಪವಾಗಿ ಬಂದು ಮುಂದೆ ಲಚ್ಚಿಯ ಜೀವನದಲ್ಲಿ ಮೃಗಜಲದಂತೆ ಪ್ರವೇಶಿಸಿ ಮಾಯವಾಗುವನು. ಬಸಣ್ಣೆಯನ್ನು ಮದುವೆ ಮಾಡಿಕೊಂಡಿದ್ದಕ್ಕೆ ಸಿಕ್ಕ ಕಾಣಿಕೆಯೆಂದರೆ ಆತನ ಮಗುವಿನ ತಾಯಿ ಆದದ್ದು. ಕ್ರಮೇಣ ಅವಳು ಗಂಡು ಜಾತಿಯನ್ನೇ ದ್ವೇಷಿಸುವವಳು. ಅದರ ಪರಿಣಾಮವಾಗಿ ಮಾತೃತ್ವದ ಕುತ್ತಿಗೆಯನ್ನೇ ಹಿಚುಕುವ ರಾಕ್ಷಸಿ ಪ್ರವೃತ್ತಿ ಅವಳಲ್ಲಿ ಜಾಗೃತವಾಗುವುದು. ಮಗುವಿನೊಂದಿಗೆ ತಾನು ಸಾಯಬೇಕೆಂದು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯ ತ್ನಿಸುವಳು. ಆದರೆ ಸಮಾಜ ಅವಳಿಗೆ ಸಾಯಲು ಬಿಡುವದಿಲ್ಲ. ಮಗುವಿನ ಹತ್ಯೆಯ ಆಪಾದನೆಯ ಮೇಲೆ ಅವಳಿಗೆ ನ್ಯಾಯಾಲಯ ಐ.ಪಿ.ಸಿ. ೩೦೪ರ ಕಲಮಿನ ಮೇರೆಗೆ ಜೀವಾವಧಿ ಶಿಕ್ಷೆ ವಿಧಿಸುವದು. ಇದು ಕಾದಂಬರಿಯ ಕಥಾ ವಸ್ತು.

ಕಾದಂಬರಿಯ ಪ್ರಾರಂಭದಿಂದ ಅಂತ್ಯದವರೆಗೂ ತೂಕಬದ್ಧವಾದ ಸಂಭಾ ಷಣೆ ಇದೆ. ವಿಷಯ, ವರ್ಣನೆ ಸಂದರ್ಭಕ್ಕೆ ತಕ್ಕಂತೆ ಸವಿಸ್ತಾರವಾಗಿ ಮತ್ತು ಸ್ಪಷ್ಟ ವಾಗಿ ಸ್ಪಷ್ಟೀಕರಣಗೊಳಿಸುವ ಕಲೆ ಮೆಚ್ಚತಕ್ಕದ್ದಾಗಿದೆ. ಕಾದಂಬರಿಯ ಉದ್ದಕ್ಕೂ ಪ್ರಾದೇಶಿಕ ಶಬ್ದಗಳನ್ನು ನಿರರ್ಗಳವಾಗಿ ಬಳಸಲಾಗಿದೆ. ಇವರಿಂದ ಕಾದಂಬರಿ ಹೊಸ ಮೆರಗು ಪಡೆದಿದೆ. ಗೀತಾ ನಾಗಭೂಷಣ ಅವರ ಹಲವಾರು ಕಾದಂಬರಿಗಳಲ್ಲಿ ಈ ಕಾದಂಬರಿ ಗಟ್ಟಿಯಾಗಿ ನಿಲ್ಲಲು ಕಾರಣ ಅವರು ಬಳಸಿದ ಪ್ರಾದೇಶಿಕ ಭಾಷೆ ಮತ್ತು ಸಮಕಾಲೀನ ವಸ್ತು. ಭಾಷೆ, ಶೈಲಿಯ ಜೊತೆಗೆ ವಸ್ತುವಿನ ಸಮಕಾಲೀನತೆ ಕೂಡ ಇಲ್ಲಿ ಓದುಗನ ಮನಸ್ಸನ್ನು ಸೆರೆಹಿಡಿಯುವವರ ಜೊತೆಯಲ್ಲಿ ನಿರೂಪಣಾ ಶೈಲಿ ಆಕರ್ಷಕವಾಗಿರುವವರಿಂದ ಕಾದಂಬರಿ ಓದಿಸಿಕೊಂಡು ಹೋಗುವದು. ಪ್ರಕೃತಿ ವರ್ಣನೆ ಸಂದರ್ಭಕ್ಕೆ ತಕ್ಕಂತೆ ವರ್ಣಿಸುವವರಲ್ಲಿ ಲೇಖಕಿ ಪಳಗಿದ್ದಾರೆ. ಸೂರ್ಯನ ಉದಯ ಮತ್ತು ಅಸ್ತಮಾನದ ಚಿತ್ರಣ ಅರ್ಥಪೂರ್ಣವಾದ ಧ್ವನಿ ಯಿಂದ ಕೂಡಿದೆ. ಕಾದಂಬರಿಯಲ್ಲಿ ಬರುವ ಕೆಲ ಗ್ರಾಮ್ಯಪದಗಳು ಮೊದಮೊದಲು ಮಡಿವಂತ ಓದುಗರಿಗೆ ಮುಜುಗುರ ಉಂಟು ಮಾಡಿದರೂ ಕೊನೆಗೆ ಖುಷಿ ಕೊಡು ತ್ತವೆ. ಉಸಿರಾಟದಷ್ಟೇ ಸಹಜವಾದ ನೆಲದ ಮಾತನ್ನು ಲೇಖಕಿ ಬಳಸಿದ್ದಾರೆ. ನಮ್ಮಲ್ಲಿ ಅಂಟುರೋಗದಂತೆ ಹಬ್ಬಿರುವ ಮೂಢನಂಬಿಕೆ 'ಹುಲಿಗೆಮ್ಮಳ ಮಹಿಮೆಯನ್ನು ವರ್ಣಿಸುವವರ ಮೂಲಕ' ಒತ್ತುಕೊಟ್ಟು ವಿವರಿಸುವಲ್ಲಿ ಹೊಸತನವಿದೆ. ಶತಮಾನದಿಂದ ಹೆಣ್ಣಿಗೆ ಆಗತಕ್ಕಂತಹ ಅನ್ಯಾಯವನ್ನು ತಿಳಿದು

ಕೊಳ್ಳಲು ಅವರು ಬರೆದಿರುವ ಒಂದು ವಾಕ್ಯವೇ ಸಾಕು. "ಗಂಡನಿಂದ ಬಂಜೆಯಾಗಿ ಉಳಿದವರಿಗೆ ಮಿಂಡರಿಂದ ಮಕ್ಕಳು ಕೊಡುತ್ತಾಳೆ."

ಕಾದಂಬರಿಯ ಪ್ರಾರಂಭದಲ್ಲಿ ಬರುವ ಫಕೀರಪ್ಪನ ಪಾತ್ರ ಸಹೃದಯರ ಗಮನ ಸೆಳೆಯುತ್ತದೆ. ಬದುಕಿನ ಓರೆಕೋರೆಗಳಿಂದ ಗಟ್ಟಿಗೊಂಡ ಅನುಭಾವಿ ಆತ. ದಾಂಪತ್ಯ ಸುಖದ ಬಗ್ಗೆ ವೇದಾಂತದ ಮಾತನ್ನೇ ಆಡಿದ್ದಾನೆ. ಇಡೀ ಕಾದಂಬರಿಯಲ್ಲಿ ಲಚ್ಚಿಯನ್ನು ಬಿಟ್ಟರೆ ಫಕೀರಪ್ಪನ ಪಾತ್ರ ಮುಖ್ಯವೆನಿಸುತ್ತದೆ. ತಮ್ಮ ಜಾತಿಯಲ್ಲಿ ನಡೆದುಕೊಂಡು ಬಂದ ಪದ್ಧತಿಯನ್ನು ಎದುರಿಸುವ ಸಾಹಸಿಗ-ನಾಗುತ್ತಾನೆ. ವೈಯಕ್ತಿಕ ಸಮಸ್ಯೆಯ ಜೊತೆಯಲ್ಲಿ ತನ್ನ ಇಡೀ ಜಾತಿಯ ಸಮಸ್ಯೆ-ಯನ್ನು ವಿವರಿಸುತ್ತಾನೆ. ಆದರೆ ಆತನೊಬ್ಬನೇ ಕುಲಕರ್ಣಿಯನ್ನು ಎದುರಿಸುವದನ್ನು ನೋಡಿದಾಗ ಇದು ಸಮಂಜಸ ಎನಿಸುವದಿಲ್ಲ. ಏಕೆಂದರೆ ವೈಯಕ್ತಿಕ ಪ್ರತಿಭಟನೆಗಿಂತಲೂ ಸಾಮೂಹಿಕ ಪ್ರತಿಭಟನೆ ಪರಿಣಾಮಕಾರಿಯಾಗಿರುತ್ತದೆ. ಫಕೀರಪ್ಪನಿಗೆ ಸಾಮೂಹಿಕವಾಗಿ ಪ್ರತಿಭಟಿಸುವ ತಾಳ್ಮೆ ಮತ್ತು ಸಮಯ ಇರುವದಿಲ್ಲ. ಆದ್ದ-ರಿಂದ ಫಕೀರಪ್ಪ ಪ್ರತ್ಯಕ್ಷವಾಗಿ ಸಿಡಿದೇಳದೆ ಪರೋಕ್ಷವಾಗಿ ಪ್ರತಿಭಟಿಸುತ್ತಾನೆ. "ಭೋಸಡಿ ಮಕ್ಳು ಅವ್ರು ನಮ್ಮೆಂಡ್ರಿಗಿ ಬೇಡವ್ರ ನಾವುನೂ ಅವರ ಹೆಂಡ್ರಿಗಿ ಬೇಡಬೇಕು. ಇದಿರಾಗೇನು ತೆಪ್ಪಯ್ತಿ. ನನ್ ಹೆಂಡ್ತಿ ಅವನ ಮಗ್ಗುಲ ಬಿಸಿ ಮಾಡಬೇಕಂದ್ರ ಅವನ ಹೆಣ್ತಿನೂ ನನ್ ಮಗ್ಗುಲದಾಗ ನೆಳ್ಳಲಿ. ಹೊಯಿಂದೋ ಇಲ್ಲೋ ಖರೇಹೇಳು." ಎನ್ನುವ ಫಕೀರಪ್ಪನ ಮಾತಿನಲ್ಲಿ ಮುಳ್ಳು ಮುಳ್ಳಿನಿಂದಲೇ ತೆಗೆಯಬೇಕೆಂಬ ಪ್ರತಿಕಾರ ಮತ್ತು ಸಂಪೂರ್ಣ ಬದಲಾವಣೆ ತರುವ ಹೋರಾಟದ ಮನೋಭಾವವಿದೆ. "ತಗಂಬರ್ರಿ-ತಗಂಬರ್ರಿ-ತಿನ್ರಿ-ತಿನ್ರೋ-ಅವರ ಸತ್ತದನಗೊಳ ಖಂಡಾತಿಲ್ಲಿಕ್ಕೆ ಹುಟ್ಟಿದವ್ರು ನಾವು" ಎನ್ನುವಲ್ಲಿ ತಮ್ಮ ಜಾತಿಯ ವ್ಯವಸ್ಥೆ ಬಗ್ಗೆ ಇದ್ದ ಅಸಮಧಾನ, ಅಸಹಾಯಕತೆಯೊಂದಿಗೆ ಫಕೀರಪ್ಪ ದಲಿತರ ಪ್ರತಿನಿಧಿಯಾಗಿ ನುಡಿಯುತ್ತಾನೆ. ಬಡವರ ಆಶೆ-ಆಕಾಂಕ್ಷೆಗಳನ್ನು ಲೆಕ್ಕಿಸದೆ ಅವರ ಅಸ್ತಿತ್ವಕ್ಕೆ ಬೆಂಕಿ ಹಚ್ಚಿ ತಮ್ಮ ಸ್ವಾರ್ಥಕ್ಕಾಗಿ ದುಡಸಿಕೊಳ್ಳುವ ಶ್ರೀಮಂತರ ಸೊಕ್ಕನ್ನು ಅಡಗಿಸಿ ಎಲ್ಲರೂ ಜಾಗ್ರುತರಾಗಬೇಕೆನ್ನುವ ಹೆಬ್ಬಯಕೆ ಫಕೀರಪ್ಪನದು.

ಶ್ರೀಮಂತರು ಬಡವರ ಮೇಲೆ ನಡೆಸುವ ದಬ್ಬಾಳಿಕೆಯ ಹುಟ್ಟನ್ನು ಅಡಗಿಸಬೇಕೆಂದು ಪೌರುಷದ ಮಾತನಾಡುವ ಫಕೀರಪ್ಪನ ಮಗಳು ಲಚ್ಚಿ ಪುರುಷನ ದಬ್ಬಾಳಿಕೆಗೆ ತುತ್ತಾಗುವಳು. ಭೀಮಳ್ಳಿಗೆ ಉಣ್ಣಲಿಕ್ಕೆ-ಉಡಲಿಕ್ಕೆ ಬರಗಾಲ ಬಂದರೆ ಲಚ್ಚಿಯ ಶೀಲಕ್ಕೆ ಬರ ಬರುತ್ತದೆ. ಲಚ್ಚಿಯ ಜೀವಕ್ಕೆ ಜೀವವಾಗಿರುವ ಕಾಶೀನಾಥ ಲಚ್ಚಿಯ ಮೇಲೆ ಕಳ್ಳತನದ ಅಪವಾದ ಬಂದಾಗ ಮೌನ ತಾಳುತ್ತಾನೆ. ತನಗೆ ಗೊತ್ತೇ ಇಲ್ಲ ಅನ್ನುವ ಹಾಗೆ ನಟಿಸುತ್ತಾನೆ. ಅವಳಲ್ಲಿ ನಿಜವಾದ ಪ್ರೀತಿ ಅವನಿಗೆ

ಇದ್ದಾಗ ಇದು ಹೇಗೆ ಸಾಧ್ಯ ? ಕಳವು ಮಾಡಿದ್ದು ಲಚ್ಚಿ ಅಲ್ಲ, ನಾನೇ ಎಂದು ಕಾಶೀನಾಥ ಒಪ್ಪಿ ಕುಲಕರ್ಣಿಯಿಂದ ಲಚ್ಚಿಯನ್ನು ಬಿಡಿಸಿ ತನ್ನ ಗಂಡಸುತನ ಸಾಬೀತು ಮಾಡಬೇಕಿತ್ತು. ಆದರೆ ಹಾಗೆ ಮಾಡದೆ ಸುಮ್ಮನೆ ಇರುವದರಿಂದ ಕಾಶೀ-ನಾಥನಿಗೆ ಲಚ್ಚಿಯಲ್ಲಿ ಪ್ರೀತಿ ಇರಲಿಲ್ಲ ಎಂದರ್ಥ. ಕಾಶೀನಾಥನ ಪ್ರೀತಿಯ ಆಟದಲ್ಲಿ ಬಲವಾದ ಪೆಟ್ಟನ್ನು ತಿಂದು, ಪೋಲೀಸರ ಅಮಾನುಷ ನಡತೆಯಿಂದ ನರಕಯಾತನೆ ಅನುಭವಿಸಿ ಜರ್ಜರಿತಳಾದ ಲಚ್ಚಿ ಜೀವಂತ ಶವದಂತೆ ಜೈಲಿನಲ್ಲಿ ಕೊಳೆಯುತ್ತಾಳೆ.

ಲಚ್ಚಿ ಜೈಲಿನ ನಾಲ್ಕು ಗೋಡೆಗಳಿಂದ ಬಿಡುಗಡೆ ಹೊಂದಿದರೂ ಪುರುಷನ ಕಾಮುಕ ದೃಷ್ಟಿಯಿಂದ ಬಿಡುಗಡೆ ಹೊಂದುವದಿಲ್ಲ. ಅದರಲ್ಲಿ ಅವಳ ತಪ್ಪೆಂದರೆ ಅವಳ ಸೌಂದರ್ಯ. ಸ್ತ್ರೀನಿಕೇತನಕ್ಕೆ ಹೋದಮೇಲೆ ಲಚ್ಚಿ ಮನುಷ್ಯಳಾಗಿ ಬದುಕಬೇಕಾಗಿತ್ತು. ಆದರೆ ಸ್ತ್ರೀನಿಕೇತನದ ಅಧಿಕಾರಣಿಯಾದವಳು ಅವಳಿಗೆ ಪುನಃ ಪುರುಷರ ಕಾಮಪಿಪಾಸಕ್ಕೆ ಬಲಿಕೊಡುತ್ತಾಳೆ. ಸಮಾಜದಲ್ಲಿ ಒಂದು ಹೆಣ್ಣು ಇನ್ನೊಂದು ಹೆಣ್ಣಿಗೆ ಯಾವ ರೀತಿ ಶೋಷಣೆ ಮಾಡುತ್ತಾಳೆ ಎಂಬುದನ್ನು ಗೀತಾ ನಾಗಭೂಷಣ ಅವರು ತಾವು ಸ್ವತಃ ಹೆಣ್ಣಾದರೂ ಹೆಣ್ಣಿನ ತಪ್ಪು ಮುಚ್ಚಿಕೊಳ್ಳಲಾರದೆ ಪ್ರಾಮಾಣಿಕವಾಗಿ ಹೆಣ್ಣು ಹೆಣ್ಣಿಗೆ ವೈರಿಯೆಂಬುದನ್ನು ತಮ್ಮ ಕಾದಂಬರಿಯಲ್ಲಿ ಬಿಚ್ಚು ಮನಸ್ಸಿನಿಂದ ಇದ್ದಿದ್ದು ಇದ್ದ ಹಾಗೆ ಚಿತ್ರಿಸಿರುವದು ಮೆಚ್ಚತಕ್ಕದ್ದಾಗಿದೆ. ಹೆಣ್ಣು ಶೋಷಣೆಗೆ ಒಳಗಾಗುವವು ಕೇವಲ ಗಂಡಸಿನಿಂದ ಅಲ್ಲ. ಅದಕ್ಕೆ ಹೆಣ್ಣು ಕಾರಣಳು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. "ರಾತ್ರಿ ಬಸೆಣ್ಣಿ ನಾಯಿಯಂತೆ ಮೈನೆಕ್ಕಿದಾಗ ಗಿಡುಗಿನಂತೆ ಅಪ್ಪಿ ಹಿಡಿದಾಗ ಕಾಗೆಯಂತೆ ಕುಕ್ಕಿದಾಗ ರಣಹದ್ದಿನಂತೆರಗಿ ಹಸಿಮಾಂಸ ಹಿಂಡಿದಾಗ ಲಚ್ಚಿ ಕಂಗಾಲಾಗಿ ನರಳಿ" ತಾನು ಬಸೆಣ್ಣಿಯಿಂದ ನಿಜವಾದ ಪ್ರೀತಿಯನ್ನು ಪಡೆಯುವ ಕನಸು ನಿರಾಶೆಯಲ್ಲಿ ಪರಿವರ್ತನೆಗೊಳ್ಳುವದು. ಆತನ ಒರಟು ನಡತೆಗೆ ಜಿಗುಪ್ಸೆಗೊಂಡು ಆತನನ್ನು 'ಕಾಶೀನಾಥ, ಪೋಲೀಸರು, ಸ್ತ್ರೀನಿಕೇತನದಲ್ಲಿದ್ದಾಗ ಸಹವಾಸದಲ್ಲಿ ಬಂದ ಪುರುಷರು ಇವರ ಸಾಲಿಗೆ' ಸೇರಿಸುತ್ತಾಳೆ.

ಬಸೆಣ್ಣಿ ನಾಯಿಯಂತೆ ಅವಳ ಮೈಸುಖವನ್ನು ಅನುಭವಿಸಿ ಎಂಜಲ ಎಲೆಯಂತೆ ಒಗೆಯುತ್ತಾನೆ. ಅವಳನ್ನು ಅರಿತುಕೊಳ್ಳದೆ ಮಾನವೀಯತೆಯನ್ನು ಕಳೆದುಕೊಂಡು ಪಶುವಿನಂತೆ ವರ್ತಿಸುತ್ತಾನೆ. ಅವಳೆದುರಿಗೇನೇ ಇನ್ನೊಬ್ಬಳನ್ನು ತಂದು ಚಕ್ಕಂದ ಆಡುತ್ತಾನೆ. ನಮ್ಮ ಸಮಾಜ ಗಂಡಸು ಹಲವು ಹೆಣ್ಣು ಮಕ್ಕಳ ಜೊತೆಯಲ್ಲಿ ಚಕ್ಕಂದ ಆಡಿದರೆ ಯಾವ ಪ್ರತಿಕ್ರಿಯೆ ತೋರಿಸುವುದಿಲ್ಲ. ಆದರೆ ಅದೇ ಹೆಣ್ಣು ಮಾಡಿದರೆ ಅದರ ಪರಿಣಾಮವೇನೆಂಬುದಕ್ಕೆ ಲಚ್ಚಿಯೇ ಸಾಕ್ಷಿ. ಸಮಾಜ ಗಂಡು ಹೆಣ್ಣಿನ ನಡುವೆ ಕಾಣುವ ಭೇದ. ಗಂಡಿಗೆ ಕೊಡುವ ಸ್ಥಾನವನ್ನು ಕಟುವಾಗಿ

ಲೇಖಕಿಯರು ಬಯಲಿಗೆಳೆದಿದ್ದಾರೆ. ಕಾದಂಬರಿಯ ಕೊನೆಯವರೆಗೂ ಲಚ್ಚಿಯನ್ನು ಯಾವ ಪುರುಷನೂ ಅರಿತುಕೊಳ್ಳುವುದಿಲ್ಲ. ನ್ಯಾಯಾಲಯ ಅವಳ ವಿರುದ್ಧವೇ ತೀರ್ಪು ಕೊಡುತ್ತದೆ. ಏಕೆಂದರೆ ಅಲ್ಲಿ ನ್ಯಾಯ ತೀರ್ಮಾನ ಮಾಡುವವನು ಪುರುಷನಲ್ಲವೇ ? ಲಚ್ಚಿಯಂತಹ ಸಾವಿರಾರು ಮುಗ್ಧ ಹೆಣ್ಣುಗಳಿಗೆ ಆಗುವಂತಹ ಅನ್ಯಾಯಕ್ಕೆ ಪರಿಹಾರ ಇಲ್ಲವೇ ಇಲ್ಲ ಎನ್ನುವ ಮಾತನ್ನು ಕಾದಂಬರಿಯ ಕೊನೆಯಲ್ಲಿ ಸಾಬೀತಾಗುತ್ತದೆ. ಕಾಶೀನಾಥ, ಪೋಲೀಸರು, ಸ್ತ್ರೀನಿಕೇತನದ ಸಹವಾಸದಲ್ಲಿ ಬಂದ ಪುರುಷರು ಮತ್ತು ಗಂಡ ಬಸಣ್ಣ ಇವರೆಲ್ಲರೂ ಲಚ್ಚಿಯ ಬದುಕು ಹಾಳುಮಾಡಿದ ವಿಷಜಂತುಗಳು. ಇವರೆಲ್ಲರೂ ಲಚ್ಚಿಯನ್ನು ಲಚ್ಚಿಯನ್ನಾಗಿ ಕಾಣದೆ ಅವಳನ್ನು ಭೋಗದ ವಸ್ತುವನ್ನಾಗಿ ಕಂಡವರು. ಸನಾತನಕಾಲದಿಂದ ಸ್ತ್ರೀ, ಪುರುಷನ ದೃಷ್ಟಿಯಲ್ಲಿ ಯಾವ ಸ್ಥಾನ ಪಡೆದಿದ್ದಾಳೆಂಬುವಕ್ಕೆ ಉತ್ತರ ಲಚ್ಚಿ. ಹೆಣ್ಣಿನ ವ್ಯಕ್ತಿತ್ವವನ್ನೇ ಕುಂಠಿತಗೊಳಿಸುವ ಸಾಮಾಜಿಕ ಮೌಲ್ಯಗಳಿಗೆ ಉಸಿರುಗಟ್ಟಿ ಹೆಜ್ಜೆ ಹೆಜ್ಜೆಗೆ ಸಾಯುವುದಕ್ಕಿಂತಲೂ ಒಂದೇ ಸಲ ಸಾಯಬೇಕೆಂದು ಮಗುವಿನ ಜೊತೆಯಲ್ಲಿ ಲಚ್ಚಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಆದರೆ ಅವಳು ಸಾಯುವುದಿಲ್ಲ. ಸಮಾಜ ಅವಳಿಗೆ ಇತ್ತ ಸಾಯಲು ಬಿಡುವುದಿಲ್ಲ ಅತ್ತ ಬದುಕಲೂ ಬಿಡುವುದಿಲ್ಲ. ಹೀಗಾಗಿ ಅವಳು ಸಮಾಜದ ಕೈಗೊಂಬೆಯಾಗುತ್ತಾಳೆ.

ಮಗುವನ್ನು ಸಾಯಿಸಿ ತಾನು ಸಾಯುವುದರಿಂದ ಅನ್ಯಾಯವನ್ನು ಖಂಡಿಸಿದಂತೆ ಆಗುವುದಿಲ್ಲ. ತನ್ನ ಮೇಲಾದ ಅತ್ಯಾಚಾರವನ್ನು ನೇರವಾಗಿ ಪ್ರತಿಭಟಿಸಬೇಕು. ಇಂತಹ ಧೈರ್ಯ ಲಚ್ಚಿಯಲ್ಲಿ ಇರಲಿಲ್ಲ. ಅವಳೇನು, ಇತಿಹಾಸದಲ್ಲಿ ದಾಖಲೆಯಾದ ಸಬಲೆ ಮಹಿಳೆಯರ ಗುಂಪಿಗೆ ಸೇರಿದವಳಲ್ಲ. ಅನಕ್ಷರತೆ, ಅವೈಚಾರಿಕತೆಯಿಂದ ಕೂಡಿದ ಅವಳು ಎಲ್ಲಾ ಅವಕಾಶಗಳಿಂದ ವಂಚಿತಳಾದ ಅಮಾಯಕ ಮುಗ್ಧ ಹೆಣ್ಣಾಗಿದ್ದವಳು. ನಮ್ಮ ವೈಯಕ್ತಿಕ ಕಷ್ಟ-ನಷ್ಟಗಳಿಗೆ ಬೇರೆಯವರು ಯಾರೇ ಹೊಣೆಗಾರರಾಗಿರುವುದಿಲ್ಲ ಎಂದಾಗ ಲಚ್ಚಿಯ ವೈಯಕ್ತಿಕ-ನಷ್ಟಗಳಿಗೆ ಹೊಣೆಗಾರರು ಯಾರು? ಪುರುಷಜಾತಿಯೋ ಸಮಾಜವೋ ?ಅಥವಾ ಈ ದೇಶದ ಸಂಸ್ಕೃತಿಯೋ? ಈ ಎಲ್ಲಾ ಪ್ರಶ್ನೆಗಳನ್ನು ಕಾದಂಬರಿ ಹುಟ್ಟು ಹಾಕುವುದರಿಂದ ಅಲ್ಲಿಯ ಕಥಾವಸ್ತುವಾಗುತ್ತಲೇ ಪ್ರಾಮುಖ್ಯತೆ ಪಡೆಯುತ್ತದೆ.

ಒಂದು ಹೆಣ್ಣಿನ ಶೋಷಣೆಯನ್ನು ಹೇಳುವಾಗ ಒಂದೇತರಹದ ದೃಷ್ಟಿಕೋನವಿದ್ದಂತೆ ಕಂಡು ಬಂದರೂ ಪಾತ್ರಗಳ ಬೆಳವಣಿಗೆಯಲ್ಲಂತೂ ಅತಿಶಯೋಕ್ತಿಯಿಲ್ಲ. ಗುಲಬರ್ಗಾ ವಿಭಾಗದ ಗಂಡು ಭಾಷೆ ಕಾದಂಬರಿಯ ತುಂಬಾ ವಿಜೃಂಭಿಸಿ ಓದುಗರಲ್ಲಿ ಹಸಿರಾಗಿ ಉಳಿಯುತ್ತದೆ. ಒಂದು ಹೆಣ್ಣಿನ ಶೋಷಣೆಯ ಅನಂತಪರಿಗಳನ್ನು ಬಿಚ್ಚಿಕೊಳ್ಳುತ್ತಲೇ ಈ ವ್ಯವಸ್ಥೆಯ ಸೋಗಲಾಡಿತನವನ್ನೂ ಪರೋಕ್ಷವಾಗಿ ಹೇಳುವದರಿಂದ "ಹಸಿಮಾಂಸ" ನಮಗೆ ತುಂಬಾ ಪ್ರಮುಖವಾಗುತ್ತದೆ.

ಆಡಳಿತದಲ್ಲಿ ಅನುವಾದಿತ ಭಾಷೆ-ಪ್ರಾದೇಶಿಕ ಭಾಷೆ

● ಎಂ. ಎಂ. ಕಲಬುರ್ಗಿ

ಪೀಠಿಕೆ :

ಜಗತ್ತಿನಲ್ಲಿ ಈವರೆಗೆ ಒಂದೊಂದಾಗಿ ದೇಶಗಳು ಸ್ವತಂತ್ರವಾಗುತ್ತ ಬಂದವು. ಈಗ ಭಾಷೆಗಳು ಸ್ವತಂತ್ರವಾಗುವ ಕಾಲ ಸನ್ನಿಹಿತವಾಗಿದೆ. ಯಾವುದೇ ದೇಶವನ್ನು ಸ್ವತಂತ್ರಗೊಳಿಸಿ, ಅದರ ಭಾಷೆಯನ್ನು ಪರತಂತ್ರವನ್ನಿಟ್ಟರೆ ಆ ಜನಾಂಗವನ್ನು ಭೌತಿಕವಾಗಿ ಬದುಕಿಸಿ, ಸಾಂಸ್ಕೃತಿಕವಾಗಿ ಸಂಹರಿಸಿದಂತಾಗುತ್ತದೆ.* ಈ ಭಯ ಇಂದು ಎಲ್ಲ ಜನಾಂಗಗಳಲ್ಲಿ ಜಾಗೃತವಾಗುತ್ತಲಿರುವ ಕಾರಣ "ಭೌತಿಕವಾಗಿ ಉಪ ಜೀವಿಸಲು" ಅಂತರ್ರಾಷ್ಟ್ರೀಯ ಭಾಷೆಯನ್ನು ಆಧರಿಸಿದರೂ "ಸಾಂಸ್ಕೃತಿಕವಾಗಿ ಜೀವಿಸಲು" ರಾಜ್ಯಭಾಷೆ ಅವಶ್ಯವೆಂದು ಅವರಿಗೆ ಮನವರಿಕೆಯಾಗಿದೆ. ಆದುದರಿಂದ ಇಂದು ಜಗತ್ತಿನ ಬೇರೆ ಬೇರೆ ಭಾಗಗಳಂತೆ ಕರ್ನಾಟಕದಲ್ಲಿಯೂ ರಾಜ್ಯಭಾಷಾ ಪ್ರಜ್ಞೆ ಒಂದು ಆಂದೋಲನ ಸ್ವರೂಪದಲ್ಲಿ ಬಿಚ್ಚಿಕೊಳ್ಳುತ್ತಲಿದೆ.

ನಮ್ಮ 'ಭಾಷಾನೀತಿ' ವೈಜ್ಞಾನಿಕ ನೆಲೆಗಟ್ಟಿನ ಮೇಲೆ ನಿಂತಿಲ್ಲ, ರಾಜಕೀಯ ಬುನಾದಿಯ ಮೇಲೆ ತಲೆಯೆತ್ತಿದೆ. ಹೀಗಾಗಿ ಮಾತೃಭಾಷೆ, ರಾಷ್ಟ್ರಭಾಷೆ, ಪ್ರಾಚೀನ ಭಾಷೆಗಳೆಂಬ ಭಾವನಾತ್ಮಕ ನೆವಗಳನ್ನು ದಟ್ಟವಾಗಿ ಒಡ್ಡಿ 'ರಾಜ್ಯಭಾಷೆ'ಯ ವಾಸ್ತವವನ್ನು ಹತ್ತಿಕ್ಕಲಾಗುತ್ತಿದೆ.

ಪ್ರಾಚೀನ ಕಾಲದಲ್ಲಿ ಕೃಷಿಪ್ರಧಾನ ಜೀವನ ಕಾರಣವಾಗಿ ಕುಟುಂಬಗಳು ಒಂದು ಪ್ರದೇಶದಲ್ಲಿ ಶಾಶ್ವತ ನೆಲೆಯೂರುತ್ತಿದ್ದುದರಿಂದ ಅಲ್ಲಿ 'ವಿಶಿಷ್ಟ ಸಮಾಜ' ರೂಪುಗೊಳ್ಳುತ್ತಿದ್ದಿತು. ಆಗ ಎಲ್ಲರ ಮನೆಯ ಮಾತೃಭಾಷೆಯೇ ಸಮಾಜಭಾಷೆ ಯಾಗುತ್ತಿತ್ತು. ಇಂದು ನೌಕರಿ, ವಾಣಿಜ್ಯ ಇತ್ಯಾದಿ ಸಂಚಾರಿ ಬದುಕಿನ ಅನಿ ವಾರ್ಯತೆಯಿಂದಾಗಿ 'ಮಿಶ್ರಸಮಾಜ' ಅಸ್ತಿತ್ವಕ್ಕೆ ಬಂದಿದೆ. ಹೀಗಾಗಿ ಮನೆಯಲ್ಲಿಯ ಮಾತೃಭಾಷೆ ಮತ್ತು ಮನೆಯ ಹೊರಗಿನ ಸಮಾಜಭಾಷೆಗಳಲ್ಲಿ ಈಗ ಪ್ರತ್ಯೇಕತೆ ತಲೆ ದೋರುತ್ತಲಿದೆ. ಅಂದರೆ ಮಾತೃಭಾಷೆಯನ್ನು ಮನೆಗೆ ಸೀಮಿತಗೊಳಿಸಿ, ಸಮಾಜ ದಲ್ಲಿ ರಾಜ್ಯಭಾಷೆಯನ್ನು ಬಳಸುವುದು ಅನಿವಾರ್ಯವಾಗಿದೆ. ಆದುದರಿಂದ ಮನೆಗೆ ಮಾತ್ರ ಸೀಮಿತವಾಗುತ್ತಲಿರುವ ಮಾತೃಭಾಷೆಯನ್ನು ಐಚ್ಛಿಕಗೊಳಿಸಿ, ರಾಜ್ಯದ ತುಂಬ ಬಳಕೆಯಾಗುವ ರಾಜ್ಯಭಾಷೆಯನ್ನು ಕಡ್ಡಾಯ ಭಾಷೆ-೧ ಎಂಬ, ರಾಜ್ಯಪೂ

---

* "If you want to kill the Culture, you kill their language" ಎಂಬ ಜಾನ್ ಮೆಕಾಲೆ ಮಾತನ್ನು ಇಲ್ಲಿ ಗಮನಿಸಬಹುದು.

ಒಳಕೊಂಡಂತೆ ಲೋಕದ ಅಂಚಿನ ವರೆಗೆ ಬಳಕೆಯಾಗುವ ಅಂತರ್ರಾಷ್ಟ್ರೀಯ ಭಾಷೆಯನ್ನು ಕಡ್ಡಾಯ ಭಾಷೆ-೨ ಎಂಬ "ಭಾಷಾನೀತಿ" ಭಾರತದ ಯಾವುದೇ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬರಬೇಕಾಗಿವೆ. ಈ ಸತ್ಯದ ಒಂದು ಭಾಗವೆಂಬಂತೆ ನಮ್ಮಲ್ಲಿ ಕನ್ನಡವು ಕಡ್ಡಾಯ ಆಡಳಿತಭಾಷೆಯಾಗಬೇಕಾಗಿದೆ.

ಸೂರ್ಯನನ್ನು ಕೆಲವು ನಿಮಿಷ ತುಂಡುಮೋಡ ಮುಸುಕುವಂತೆ ಸತ್ಯವನ್ನು ಕೆಲವುದಿನ ಹತ್ತಿಕ್ಕಬಹುದೇ ಹೊರತು ಶಾಶ್ವತ ಹತ್ತಿಕ್ಕಲು ಸಾಧ್ಯವಿಲ್ಲ. ಭಾರತ ಸ್ವಾತಂತ್ರ್ಯವನ್ನು ವಿರೋಧಿಸಿದರು; ಅವರನ್ನು ತುಳಿದು ನಮ್ಮ ದೇಶ ಸ್ವತಂತ್ರವಾಯಿತು. ಕರ್ನಾಟಕ ಏಕೀಕರಣವನ್ನು ವಿರೋಧಿಸಿದರು; ಅವರನ್ನು ಬದಿಗೊತ್ತಿ ನಮ್ಮ ನಾಡು ಒಂದುಗೂಡಿತು. ಇಂದು ಕನ್ನಡ ಆಡಳಿತಭಾಷೆಯಾಗಬಾರದೆಂದು ಕೆಲವರು ಅಡ್ಡಗಾಲು ನೀಡುತ್ತಿದ್ದಾರೆ. ಆದರೆ ಅವರನ್ನು ಹಿಂದೆ ಸರಿಸಿ ಕನ್ನಡ ಆಡಳಿತಭಾಷೆ ಆಗಿಯೇ ತೀರುತ್ತದೆ.

ಆಡಳಿತ, ಸಾಮಾಜಿಕ ಬದುಕಿನ ಅನಿವಾರ್ಯ ಕ್ರಿಯೆ. ಈ ಆಡಳಿತ ನಮ್ಮೊಳಗಿನಿಂದಲೇ ರೂಪಗೊಂಡರೆ, ಅದರೊಂದಿಗೆ ನಮ್ಮದೇ ಆದ ಆಡಳಿತಭಾಷೆಯೂ ರೂಪಗೊಳ್ಳುತ್ತದೆ. ಅಲ್ಲಿ ಆಡಳಿತಭಾಷಾ ಸಮಸ್ಯೆಯೇ ಉದ್ಭವಿಸುವುದಿಲ್ಲ. ಆಡಳಿತಪದ್ಧತಿ ಹೊರಗಿನಿಂದ ಬಂದರೆ ಮಾತ್ರ ಹೊರಗಿನ ಆ ಪದ್ಧತಿ, ಒಳಗಿನ ಈ ಭಾಷೆಗಳಲ್ಲಿ ಹೊಂದಿಕೆ ತಪ್ಪಿಹೋಗಿ ತಟ್ಟನೆ ಸಮಸ್ಯೆ ಉದ್ಭವಿಸುತ್ತದೆ. ನಮ್ಮ ಆಡಳಿತದಲ್ಲಿ ಕನ್ನಡ ಪದಗಳು ಎಂದೋ ನಷ್ಟಾಗಿ ಸಂಸ್ಕೃತ, ಉರ್ದು, ಮರಾಠಿ ಪದಗಳು ದಟ್ಟವಾಗಿ ಬಳಕೆಯಾದರೂ ೧೮ನೆಯ ಶತಮಾನದ ವರೆಗೆ ನಮ್ಮ ಆಡಳಿತದಲ್ಲಿ ನಮ್ಮ ಭಾಷೆ-ನಮ್ಮ ಆಡಳಿತ ಪದ್ಧತಿಗಳು ಅಸ್ತಿತ್ವದಲ್ಲಿದ್ದವು. ಆದರೆ ೧೯ನೆಯ ಶತಮಾನದಲ್ಲಿ ಈ ಆಡಳಿತಪದ್ಧತಿ ಮತ್ತು ಆಡಳಿತಭಾಷೆಗಳನ್ನು ಬದಿಗೊತ್ತಿ ಇಂಗ್ಲಿಷ್ ಆಡಳಿತಪದ್ಧತಿ, ಇಂಗ್ಲಿಷ್ ಆಡಳಿತಭಾಷೆಗಳು ಅಸ್ತಿತ್ವಕ್ಕೆ ಬಂದವು. ಈಗ, ಕಳೆದುಕೊಂಡ ನಮ್ಮ ಆಡಳಿತ ಪದ್ಧತಿಯನ್ನಾಗಲೀ ನಮ್ಮ ಆಡಳಿತ ಭಾಷೆಯನ್ನಾಗಲೀ ಮರಳಿ ರೂಢಿಸುವುದು ಅಸಾಧ್ಯ. ಇಂತಹ ಪರಿಸ್ಥಿತಿಯಲ್ಲಿ ಇಂದು ನಮ್ಮದೇ ಆಗಿಬಿಟ್ಟಿರುವ ಇಂಗ್ಲಿಷ್ ಆಡಳಿತ ಪದ್ಧತಿಗೆ ಈಗಿನ ನಮ್ಮ ಭಾಷೆಯನ್ನು ಅಳವಡಿಸಬೇಕಾಗಿದೆ. ಇದರಿಂದ ಉದ್ಭವಿಸುವ ಸಮಸ್ಯೆಗಳ ಶೋಧ ಮತ್ತು ಪರಿಹಾರಗಳ ಅಧ್ಯಯನ ತುಂಬ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ.

ಭಾಷೆಯೆನ್ನುವುದು ಒಂದು ಜನಾಂಗದ ಭೌತಿಕ ಮತ್ತು ಸಾಂಸ್ಕೃತಿಕ ಬದುಕಿನ ಸೃಷ್ಟಿ. ಇದರಿಂದಾಗಿ ಯಾವುದೇ ಭಾಷೆಯಲ್ಲಿ Intimate Vocabulary (ಸಂಪರ್ಕ ಪದಸಂಪತ್ತು) ಮತ್ತು Cultural Vocabulary (ಸಾಂಸ್ಕೃತಿಕ ಪದಸಂಪತ್ತು)

ಬೆಳೆದುಬಂದಿರುತ್ತವೆ. ಇವುಗಳಲ್ಲಿ Intimate Vocabulary ಯನ್ನು ಬಳಸುವುದು ಮತ್ತು ಭಾಷಾಂತರಿಸುವುದು ಕಠಿಣ ಕೆಲಸವೇನಲ್ಲ. ಆದುದರಿಂದ Intimate Vocabulary ವರ್ಗಕ್ಕೆ ಸೇರುವ ಆಡಳಿತಭಾಷಾ ಬಳಕೆ ಮತ್ತು ಆಡಳಿತಭಾಷಾ ಅನುವಾದ ಕ್ರಿಯೆಗಳು ಕಠಿಣಸಮಸ್ಯೆಗಳಲ್ಲವೆಂದೇ ಹೇಳಬೇಕು.

ಭಾಷೆಯ ಸಾರ್ಥಕತೆ ಒಂದು ಅಭಿಪ್ರಾಯವನ್ನು ಪೂರ್ಣಪ್ರಮಾಣದಲ್ಲಿ ಇನ್ನೊಬ್ಬರಿಗೆ ಮುಟ್ಟಿಸುವುದೇ ಆಗಿದೆ. ಈ ಪ್ರಮಾಣ ಎಷ್ಟು ಕಡಿಮೆಯಾಗುತ್ತ ಹೋಗುವುದೋ ಆ ಭಾಷೆ ಅಷ್ಟು ಅನ್ಯವಾಗುತ್ತ ಹೋಗುತ್ತದೆ. ಕೊನೆಗೆ ಅನ್ಯ ಭಾಷೆಯಂತೆ ಶೋಷಣೆಯ ಮಾಧ್ಯಮವೂ ಆಗುತ್ತದೆ. ಹೀಗಾಗಿ ಆಡಳಿತದಲ್ಲಿ ತಿಳಿಯದ ಅನ್ಯಭಾಷೆ ಬಳಸುವಷ್ಟೇ ತಿಳಿಯುವ ಸ್ವಭಾಷೆ ಬಳಸುವುದೂ ಅಪ್ರಯೋಜಕ ಮತ್ತು ಅಪಾಯಕಾರಿ. ಈ ಸ್ಪಷ್ಟ ತಿಳಿವಳಿಕೆಯಿಂದ ಆಡಳಿತದಲ್ಲಿ ಅನುವಾದಿತ ಮತ್ತು ಪ್ರಾದೇಶಿಕ ಕನ್ನಡವನ್ನು ರೂಢಿಸಬೇಕಾಗಿದೆ.

ಅನುವಾದಿತ ಭಾಷೆ :

ಯಾವುದೇ ಅನ್ಯಭಾಷೆಯ ಕಾವ್ಯಸಾಹಿತ್ಯ ಅಥವಾ ಶಾಸ್ತ್ರಸಾಹಿತ್ಯವನ್ನು ಇನ್ನೊಂದು ಜನಾಂಗ ಸ್ವೀಕರಿಸುವಲ್ಲಿ ನೇರ ಬಳಕೆ; ಅನುವಾದ ಕ್ರಿಯೆಯೆಂಬ ಎರಡು ಘಟ್ಟಗಳು ಮುಗಿದ ಬಳಿಕ ಅಲ್ಲಿ ಸ್ವತಂತ್ರ ಸೃಷ್ಟಿ ಪ್ರಾರಂಭವಾಗುತ್ತದೆ. ಈ ಮಾತು ಕನ್ನಡದಲ್ಲಿ ಆಡಳಿತಭಾಷೆ ನಡೆದುಬಂದ ಇತಿಹಾಸಕ್ಕೂ ಅನ್ವಯಿಸುತ್ತದೆ. ಏಕೀಕರಣ ಪೂರ್ವದ ಆಡಳಿತದಲ್ಲಿ ನೇರವಾಗಿ ಇಂಗ್ಲಿಷ್ ಭಾಷೆಯನ್ನು ಬಳಸುತ್ತಿದ್ದೆವು, ಇದು ಒಂದು ಘಟ್ಟ, ಆಮೇಲೆ ಕನ್ನಡ ಜಾಗೃತಿಯ ಪರಿಣಾಮದಿಂದಾಗಿ ಭಾಷಾಂತರಕ್ರಿಯೆ ನಮ್ಮಲ್ಲಿ ಪ್ರಾರಂಭವಾಯಿತು. ಆಗ ಪದ–ವಾಕ್ಯಗಳ ಮಕ್ಕಿ–ಕ–ಮಕ್ಕಿ ಅನುವಾದವೇ ಪ್ರಧಾನಪಾತ್ರ ವಹಿಸಿತು. ಇದರಿಂದ ಕೃತಕಪದಗಳೂ ಕೃತಕವಾಕ್ಯಗಳೂ ಆಡಳಿತ ಮತ್ತು ಆಡಳಿತೇತರ ಕ್ಷೇತ್ರಗಳಲ್ಲಿ ನುಗ್ಗಿಬಂದುದು ದುರ್ದೈವದ ಸಂಗತಿ. ಇದಕ್ಕೆ ಕಾರಣ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಬಳಸಬೇಕೆಂದು ಸಾರುತ್ತಿರುವ ರಾಜಕಾರಣಿಗಳಿಗಾಗಲೀ, ಇದರ ಉಸ್ತುವಾರಿ ನೋಡಿಕೊಳ್ಳುತ್ತಲಿರುವ ಅಧಿಕಾರಿಗಳಿಗಾಗಲೀ, ಅನುವಾದಿಸುತ್ತಿರುವ ವಿಷಯ ಪರಿಣತರಿಗಾಗಲೀ ಭಾಷೆಯೆಂದರೆ ಏನು ? ಎಂಬ ವೈಜ್ಞಾನಿಕದೃಷ್ಟಿಯಿಲ್ಲದುದು. ಇವರಿಗೆ ತಮ್ಮ ಬರವಣಿಗೆಯನ್ನು ಓದುವ ಜನತೆ ಅಮುಖ್ಯ; ತಾವು ಅನುವಾದ ಮಾಡುವ ಪದ, ವಾಕ್ಯಗಳೇ ಮುಖ್ಯ. ಹೀಗಾಗಿ ಇವರು ಒಂದು ಇಂಗ್ಲಿಷ್ ಪದಕ್ಕೆ ರೂಢಿಯಲ್ಲಿರುವ ಒಂದು ಉರ್ದು, ಮರಾಠಿ ಪದ ಇಲ್ಲವೆ ಪರಿಚಿತ-ಅಪರಿಚಿತ ಸಂಸ್ಕೃತಪದ ಬಳಸಿದರೆ ತಮ್ಮ ಕೆಲಸ ಮುಗಿಯಿತೆಂದು ಭ್ರಮಿಸಿದರು. ಇದರಿಂದಾಗಿ ಬೆಂಗಳೂರು ಪ್ರದೇಶದ ಆಡಳಿತದಲ್ಲಿ ಪ್ರಚಲಿತವಿರುವ ಉರ್ದು, ಮರಾಠಿ ಪದಗಳೂ ಅನುವಾದಜನ್ಯ ಆರಕ್ಷಕ, ಅಭಿಯಂತ, ಅಧೀಕ್ಷಕ ಎಂಬಂಥ ಭಯಂಕರ ಸಂಸ್ಕೃತಪದಗಳೂ ನಮ್ಮ

ಆಡಳಿತವನ್ನಿ ತಲೆಹಾಕಿದವು. ಈ ಸಂದರ್ಭದಲ್ಲಿ "ಆಡಳಿತ ಪದಕೋಶ", "ಕಾನೂನು ಪದಕೋಶ" ಇತ್ಯಾದಿ ಕೃತಿಗಳು ಭಯಹುಟ್ಟಿಸುವ ವಿಕೃತಶಿಶುಗಳಂತೆ ರಚನೆಗೊಂಡವು. 'ತಿಲಕಾಷ್ಠ ಮಹಿಷಬಂಧ'ಗಳಾಗಿ ಕಚೇರಿಗಳಲ್ಲಿ, ಸಂಸ್ಥೆಗಳಲ್ಲಿ ಧೂಳು ತಿನ್ನುತ್ತ ಮಲಗಿದವು.

ಈ ಬಗೆಯ ಅನುವಾದಿತ ಪದಬಳಕೆಯಿಂದಾಗಿ ಆಡಳಿತವಲ್ಲಿ ಇತ್ತೀಚೆ ಕೃತಕ ಕನ್ನಡವೇ ಅವತರಿಸಿತು. ಧಾರವಾಡ ಸಮೀಪದ ಮನ್ಸೂರ ಗ್ರಾಮದ ಹೆಣ್ಣುಮಗಳಿಗೆ ಸರಕಾರದಿಂದ ಬಂದ ಒಂದು ಪತ್ರ ಇದಕ್ಕೆ ಉದಾಹರಣೆಯಾಗಿದೆ :

"ಶ್ರೀಮತಿ ಮಲ್ಲವ್ವಾ ಕೋಂ. ನಿಂಗಪ್ಪ ಯರಿಹಕ್ಕಲ. ಸಾ॥ ಮನಸೂರ ಇವರು ಕೆಳಗೆ ನಿರ್ದಿಷ್ಟಪಡಿಸಿದ ಭೂಮಿಗಳಿಗೆ ಸಂಬಂಧಿಸಿ ಈ ಅಧಿನಿಯಮದ ೪೫ನೇ ಪ್ರಕರಣದ ಮೇರೆಗೆ ಸದರಿ ಭೂಮಿಯ ಅಧಿಭೋಗದಾರಳೆಂದಾಗಿ ತನ್ನನ್ನು ನೋಂದಣಿ ಮಾಡುವಂತೆ ೪೮ ಅ ಪ್ರಕರಣ ಮೇರೆಗೆ ಆವೇದನ ಮಾಡಿಕೊಂಡಿರುವುದರಿಂದ : ಈಗ ಶ್ರೀ ಗಿರೀಶ ರಂಗರಾವ ದೇಶಪಾಂಡೆ ೨) ಭೀಮಾಬಾಯಿ ದೇಶಪಾಂಡೆ ವಗೈರೆ ನಾಲ್ಕು ಜನರು ಸಾ॥ ಧಾರವಾಡ ಇವರಿಗೆ (ಆ ಭೂಮಿಯಲ್ಲಿ ಹಿತಾಸಕ್ತಿಯುಳ್ಳವರೆಂದು ನ್ಯಾಯಾಧಿಕರಣಕ್ಕೆ ಕಂಡುಬರುವಂಥ ಆವೇದಕನ/ಳ ಅಥವಾ ವ್ಯಕ್ತಿಯ ಹೆಸರನ್ನು ಇಲ್ಲಿ ಬರೆಯತಕ್ಕದ್ದು). ಲಿಖಿತ ಸಾಕ್ಷ್ಯ ಅಥವಾ ಇತರ ಸಾಕ್ಷ್ಯ ಏನಾದರೂ ಇದ್ದರೆ ಅವುಗಳನ್ನು ತೆಗೆದುಕೊಂಡು ೨೫-೧೧-೮೧, ೧೧-೩೦ಕ್ಕೆ ಬಂದು ನ್ಯಾಯಾಧಿಕರಣದ ಮುಂದೆ ಹಾಜರಾಗಬೇಕೆಂದು ಈ ಮೂಲಕ ನೋಟೀಸು ಕೊಡಲಾಗಿದೆ." ಅಧಿಕಾರಿಗಳು ಬಳಸುವ ಇದು ಯಾರ ಕನ್ನಡ ? ಕನ್ನಡಿಗರ ಕನ್ನಡವಂತೂ ಅಲ್ಲ. ಹಳ್ಳಿಗರಿಗೆ ಇಂಥ ಕನ್ನಡ ಪತ್ರ ಕಳಿಸುವುದೂ ಒಂದೇ, ಇಂಗ್ಲಿಷ್ ಪತ್ರ ಕಳಿಸುವುದೂ ಒಂದೇ. ಇಂಗ್ಲಿಷ್ ಪತ್ರ ಇಂಗ್ಲಿಷ್ ಬಲ್ಲವರಿಗಾದರೂ ತಿಳಿಯುತ್ತದೆ. ಈ ಕನ್ನಡ ಪತ್ರ ಇಂಗ್ಲಿಷ್ ಬಲ್ಲವರಿಗೂ ತಿಳಿಯುವುದಿಲ್ಲ, ಕನ್ನಡ ಬಲ್ಲವರಿಗೂ ತಿಳಿಯುವುದಿಲ್ಲ. ಆದುದರಿಂದ ಇಂಥ ಕೃತಕ ಕನ್ನಡವನ್ನು ಬಳಸಬಾರದೆಂದು ಅಧಿಕಾರಿಗಳಿಗೆ ಎಚ್ಚರ ನೀಡಬೇಕು; ಇವರಿಗೆ ಸರಳ ಕನ್ನಡ ಬಳಕೆಯ ತರಬೇತಿ ನೀಡಬೇಕು.

ಇಂಥ ಅನುವಾದ ಒಂದು ಘಟ್ಟದಲ್ಲಿ ಅನಿವಾರ್ಯವೆಂದೇ ಹೇಳಬೇಕು. ನಾವು ಈಗ ಈ ಘಟ್ಟದಲ್ಲಿದ್ದೇವೆ. ಇನ್ನುಮೇಲೆ ಈ ಘಟ್ಟವನ್ನು ದಾಟಿ ಸ್ವತಂತ್ರ ಸೃಷ್ಟಿಕ್ರಿಯೆಯ ಘಟ್ಟವನ್ನು ಏರಬೇಕಾಗಿದೆ. ಪದಕೋಶ ನೋಡದೆ, ಪ್ರಯೋಜಕತೆಯನ್ನು ನೋಡಿ ನಾವು ಯಾರಿಗಾಗಿ ಈ ಕಾರ್ಯ ಮಾಡುತ್ತಲಿದ್ದೇವೆ ಎಂಬ ಎಚ್ಚರದಿಂದ ಭಾಷೆಯನ್ನು ರೂಢಿಸಬೇಕಾಗಿದೆ. ಆಗ ಆ ಬರವಣಿಗೆ ನಮ್ಮದಾಗುತ್ತದೆ. ನಮ್ಮ ನಾಡಿನದಾಗುತ್ತದೆ.

ಪ್ರಾದೇಶಿಕಭಾಷೆ :

ಆಡಳಿತಭಾಷಾ ಅನುಷ್ಠಾನದಲ್ಲಿ ಎದುರಾಗುವ ಸಮಸ್ಯೆಗಳನ್ನು ಕೃತಕ ಮತ್ತು ನೈಸರ್ಗಿಕವೆಂದು ವರ್ಗೀಕರಿಸಿದಲ್ಲಿ, 'ಪ್ರಾದೇಶಿಕ ಭಾಷೆ'ಯೆನ್ನುವುದು ನೈಸರ್ಗಿಕ ಸಮಸ್ಯೆಯ ವರ್ಗಕ್ಕೆ ಸೇರುತ್ತದೆ. ಭಾಷೆಯಲ್ಲಿ ಪ್ರಾದೇಶಿಕತೆಗಳು ಒಂದು ಶಕ್ತಿಯೂ ಹೌದು, ಒಂದು ಮಿತಿಯೂ ಹೌದು. ಯಾವುದೇ ದೇಶದ ಭಾಷೆ ತನ್ನ ಪ್ರದೇಶಗಳ ಭೌತಿಕ ಮತ್ತು ಸಾಂಸ್ಕೃತಿಕ ಬದುಕಿಗನುಗುಣವಾಗಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನರೂಪ ತಾಳುತ್ತದೆ. ಆಗ ಆ ನಾಡಿನಲ್ಲಿ ಏಕರೂಪದ ಆಡಳಿತ ನಡೆಸಬೇಕೆಂದಾಗ ಈ ಭಿನ್ನರೂಪಗಳು ಕಿರಿಕಿರಿಕೊಡುತ್ತವೆ.

ಕರ್ನಾಟಕದಲ್ಲಿ ತುಂಗಭದ್ರಾನದಿ ಮತ್ತು ಪಶ್ಚಿಮಘಟ್ಟಗಳಿಂದಾಗಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕಗಳೆಂಬ ಮೂರು ನೈಸರ್ಗಿಕ ವಲಯಗಳು ರೂಪಗೊಂಡಿವೆ. ಮರಾಠಾ ಆಡಳಿತ, ನಿಜಾಂ ಆಡಳಿತಗಳಿಂದಾಗಿ ಉತ್ತರ ಕರ್ನಾಟಕವು ಮುಂಬೈ ಕರ್ನಾಟಕ ಮತ್ತು ಹೈದ್ರಾಬಾದ ಕರ್ನಾಟಕಗಳೆಂಬ ಎರಡು ಉಪವಲಯಗಳನ್ನು ಹೊಂದಿದೆ. ಇದರಿಂದಾಗಿ ದಕ್ಷಿಣ ಕರ್ನಾಟಕ, ಕರಾವಳಿ ಕರ್ನಾಟಕ, ಮುಂಬೈ ಕರ್ನಾಟಕ, ಹೈದ್ರಾಬಾದ ಕರ್ನಾಟಕಗಳೆಂಬ ನಾಲ್ಕು ರಾಜಕೀಯ ವಲಯಗಳು ಕಳೆದ ಶತಮಾನದಲ್ಲಿ ನಿರ್ಮಾಣಗೊಂಡವು. ಈ ನೈಸರ್ಗಿಕ ಮತ್ತು ರಾಜಕೀಯ ವಲಯಗಳಿಂದಾಗಿ ಇಲ್ಲಿಯ ಸಾಮಾಜಿಕ ಭಾಷೆಯಂತೆ ಆಡಳಿತ ಭಾಷೆಯಲ್ಲಿಯೂ ಭಿನ್ನತೆ ಬೆಳೆದುಬಂದಿತು. ಆಡಳಿತವೆನ್ನುವುದು ರಾಜಕೀಯದ ಒಂದು ಭಾಗವಾಗಿರುವುದರಿಂದ ಮುಸಲ್ಮಾನ ಮತ್ತು ಮರಾಠಾ ರಾಜರ ಭಾಷೆಯ ಪ್ರಭಾವವೇ ಆಯಾಪ್ರದೇಶದ ಆಡಳಿತದಲ್ಲಿ ಇಳಿದುಬಂದಿತು; ಆಡಳಿತದ ಮೂಲಕ ಜನಜೀವನವನ್ನೂ ಪ್ರವೇಶಿಸಿತು. ಇಂಥ ಭಿನ್ನಭಾಷಾ ವಲಯಗಳನ್ನುಳ್ಳ ಕರ್ನಾಟಕ ರಾಜ್ಯದಲ್ಲಿ ಏಕರೂಪದ ಭಾಷಾ ಆಡಳಿತ ತರುವುದು ಸಾಧ್ಯವೇ ? ಆಗ ಉದ್ಭವಿಸುವ ತೊಂದರೆಗಳೇನು ? ಅವುಗಳಿಗೆ ಪರಿಹಾರವೇನು ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾಗಿದೆ.

ದೇಶ ದೊಡ್ಡದಾದಷ್ಟೂ, ಭೌಗೋಲಿಕ ಆತಂಕಗಳು ಅಧಿಕವಾದಷ್ಟೂ, ಆಡಳಿತ ವ್ಯವಸ್ಥೆ ಅನೇಕವಿದ್ದಷ್ಟೂ, ಸಂಪರ್ಕಸಾಧನ(ಸಾರಿಗೆ, ಸಮೂಹಮಾಧ್ಯಮ) ವಿರಳವಿದ್ದಷ್ಟೂ ಭಾಷಾಪ್ರಭೇದಗಳ ಸಂಖ್ಯೆ ವರ್ಧಿಸುತ್ತದೆ. ಕರ್ನಾಟಕ ಅಂಥ ದೊಡ್ಡ ಪ್ರಾಂತವಲ್ಲ. ಭೌಗೋಲಿಕ ಆತಂಕಗಳೂ ಅಧಿಕವಾಗಿಲ್ಲ. ಆದರೆ ಅನೇಕ ಅರಸರ ಆಡಳಿತ, ಸಂಪರ್ಕ ಸಾಧನಗಳ ಕೊರತೆಗಳಿಂದಾಗಿ ಈ ಹಿಂದೆ ಆಡಳಿತ ಭಾಷೆಯಲ್ಲಿ ಕೆಲವು ಪ್ರಭೇದಗಳು ಬೆಳೆದುಬಂದಿದ್ದವು. ಆದರೆ ಈ ೩೦ ವರ್ಷಗಳಲ್ಲಿ ಆಡಳಿತದ ಏಕತೆ, ಸಂಪರ್ಕಸಾಧನ ಸಮೂಹಮಾಧ್ಯಮಗಳ ಬಾಹುಳ್ಯಗಳಿಂದಾಗಿ

ಭಾಷಾ ಪ್ರಾಂತಭೇದಗಳು ಕಡಿದುಯಾಗುತ್ತಲಿವೆ; ವೈವಿಧ್ಯತೆ ಏಕತೆಯತ್ತ ತಿರುಗುತ್ತಲಿದೆ. ಈ ಪ್ರಮಾಣಕ್ಕೆ ಅನುಗುಣವಾಗಿ ಈಗ ಪ್ರದೇಶವಿಶಿಷ್ಟ ಆಡಳಿತಪದಗಳು ಹಿಂದೆ ಸರಿದು ಸಾರ್ವತ್ರಿಕ ಮನ್ನಣೆಯ ಪದಗಳು ಅಸ್ತಿತ್ವಕ್ಕೆ ಬಂದಿವೆ; ಬರುತ್ತಲಿವೆ. ಆದುದರಿಂದ ಈಗ ಅಲ್ಲಲ್ಲಿ ಅಳಿದುಳಿದಿರುವ ಪ್ರದೇಶನಿಷ್ಠ ಪಾರಿಭಾಷಿಕ ಪದಗಳು ಆಡಳಿತದಲ್ಲಿ ಅಷ್ಟಾಗಿ ತೊಂದರೆ ಕೊಡುವುದಿಲ್ಲ. ಇನ್ನು ಕೆಲವೇ ವರ್ಷಗಳಲ್ಲಿ ಇವೂ ವೇಗವಾಗಿ ಮಾಯವಾಗುತ್ತವೆ. ಹೀಗೆ ಮಾಯವಾಗುವಲ್ಲಿ ಯಾವ ಪ್ರದೇಶದ ಪದಗಳು ಈ ಸ್ಥಾನವನ್ನು ಆಕ್ರಮಿಸುತ್ತವೆ ? ಎಂಬುದು ಇಲ್ಲಿಯ ಪ್ರಶ್ನೆ. ಯಾವ ಪ್ರದೇಶದಲ್ಲಿ ಆಡಳಿತದ ಕೇಂದ್ರವಿರುತ್ತದೆಯೋ ಅಲ್ಲಿಯ ಆಡಳಿತ ಪದಗಳು ಎಲ್ಲ ಪ್ರದೇಶಗಳನ್ನು ಆಕ್ರಮಿಸುತ್ತವೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ರಾಜಧಾನಿ ಬೆಂಗಳೂರು ಪ್ರದೇಶದ ಅಂದರೆ ಹಳೆಯ ಮೈಸೂರು ಪ್ರದೇಶದ ಆಡಳಿತ ಪದಗಳು ಮಿಕ್ಕ ಪ್ರದೇಶದ ಪದಗಳನ್ನು ಮೂಲೆಗುಂಪಾಗಿಸಿ, ತಮ್ಮ ಅಧಿಕಾರ ನಡೆಸುತ್ತವೆ. ಈಗಾಗಲೇ ಮೈಸೂರು ಪ್ರದೇಶದ ಖಜಾನೆ, ಗೇಣೀದಾರ್, ಹೋಬಳಿ, ಬಡಾವಣೆ, ಪಿಂಚಣಿ, ದಾಸ್ತಾನು ಇತ್ಯಾದಿ ಪದಗಳು ೧೫–೨೦ ವರ್ಷಗಳಲ್ಲಿ ಉತ್ತರ ಕರ್ನಾಟಕದಲ್ಲಿಯೂ ಬೇರೂರಿರುವುದು ಇದಕ್ಕೆ ನಿದರ್ಶನ. ಇದಕ್ಕೆ ಪ್ರತಿಯಾಗಿ ಉತ್ತರಕರ್ನಾಟಕ ವಿಶಿಷ್ಟವಾದ ಒಂದೂ ಪದ ಬಹುಶಃ ಇಂದು ಆಡಳಿತದ ಕಡತ ಏರಿರಲಾರದು. ಇದು ಅನಿವಾರ್ಯ. ಸಹಜ.

ಈ ಬಗೆಯ ಸ್ಥಿತ್ಯಂತರ ಬೆಂಗಳೂರೇತರ ಪ್ರದೇಶಗಳ ಒಂದು ತಲೆಮಾರಿನ ಜನತೆಗೆ ತೊಂದರೆಯನ್ನುಂಟುಮಾಡಬಹುದು. ಮುಂದಿನ ತಲೆಮಾರಿನವರು ಮಾತ್ರ ಹೀಗೆ ಬದಲಾದ ಪಾರಿಭಾಷಿಕಪದಗಳನ್ನು ಸಲೀಸಾಗಿ ಬಳಸುತ್ತಾರೆ. ಇಂದು ನಾವು ಮಾಡುವ ಯಾವುದೇ ಕೆಲಸದ ಫಲ ನಮಗಾಗಿ ಅಲ್ಲ; ಮುಂದಿನ ತಲೆಮಾರಿನವರಿಗಾಗಿ–ಎಂಬ ತತ್ವದಂತೆ ಈ ಕ್ರಿಯೆ ಜರುಗುತ್ತದೆ. ಆದರೆ ಆಡಳಿತದ ಏಕತೆಯ ರಭಸದಲ್ಲಿ ಪ್ರಾಂತಭೇದಗಳಲ್ಲಿ ಸಿಗುವ ಅಪರೂಪದ ಪದಗಳು ಹಾಳಾಗಿಹೋಗದಂತೆ ಎಚ್ಚರವಹಿಸಬೇಕಾಗಿದೆ; ಅವುಗಳನ್ನು ಸಾರ್ವತ್ರಿಕ ಬಳಕೆಗೆ ಬಳಸಿಕೊಳ್ಳಬೇಕಾಗಿದೆ.

ಆಡಳಿತ ಭಾಷೆಯನ್ನು ಪರಿಣಾಮಕಾರಿಯಾಗಿ ಬಳಕೆಗೆ ತರುವುದೆಂದರೆ ಪಾರಿಭಾಷಿಕ ಪದಗಳನ್ನು ಸೃಷ್ಟಿಸುವುದು, ಬಳಸುವುದು ಎಂದು ಮಾತ್ರ ಕೆಲವರು ತಿಳಿದಿದ್ದಾರೆ. ಆದರೆ ಪರಿಭಾಷಾ ಸಂಪತ್ತಿನಷ್ಟೇ ಭಾಷಾಸೂಹತ್ರೂ ಅಗತ್ಯವಾಗಿದೆ. ಏಕೆಂದರೆ ಭಾಷೆಯೆಂದರೆ ಕೇವಲ ಪದಗಳಲ್ಲ; ಪದ ಯಾವುದೇ ಭಾಷೆಗೆ ಸಂಬಂಧಿಸಿದ್ದರೂ ವಾಕ್ಯಸಂಯೋಜನೆಯಲ್ಲಿ ಅವು ಕನ್ನಡವಾಗುತ್ತವೆ. ಉದಾ :

ಪೂರ್ವ, ಸೂರ್ಯ, ಉದಯ–ಇವು ಸಂಸ್ಕೃತ ಪದಗಳು. ಇದ್ದ ಸ್ಥಿತಿಯಲ್ಲಿ ಇವು ಒಂದು ವಿಷಯವನ್ನು ವ್ಯಕ್ತಪಡಿಸುವುದಿಲ್ಲ. 'ಪೂರ್ವದಲ್ಲಿ ಸೂರ್ಯನ ಉದಯ' ಎಂಬಂತೆ ಕನ್ನಡ ವಾಕ್ಯಸಂಯೋಜನೆಯಲ್ಲಿ ಹೊಂದಿಕೊಂಡಾಗ ಮಾತ್ರ ಅವು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತವೆ. ಆದುದರಿಂದ ಪರಿಭಾಷೆಗಳಷ್ಟೇ ಶಬ್ದಸಂಯೋಜನೆಯೂ ಆಡಳಿತದಲ್ಲಿ ಅವಶ್ಯ ಲಕ್ಷಿಸತಕ್ಕ ಸಂಗತಿಯಾಗಿದೆ. ಆಗ ಮಾತ್ರ ಒಂದು ಅಭಿಪ್ರಾಯ ಸರಿಯಾಗಿ ಸಂವಹನಗೊಳ್ಳುತ್ತದೆ. ಈ ತಿಳಿವಳಿಕೆಯ ಕೊರತೆಯಿಂದಾಗಿ ಎಷ್ಟೋ ಸಲ ವಾಕ್ಯದಲ್ಲಿ ಪ್ರಾದೇಶಿಕ ಪದಗಳನ್ನು ಕಿಕ್ಕಿರಿದು ತುಂಬಿ ಅರ್ಥ ಸಂವಹನತೆಯನ್ನು ಹಾಳು ಮಾಡುತ್ತೇವೆ. ಉದಾ : ಬೆಳಗಾವಿಯಿಂದ ಹೊರಡುವ 'ಕನ್ನಡಮ್ಮ' ದಿನಪತ್ರಿಕೆಯ (೪, ಫೆಬ್ರುವರಿ ೧೯೮೫) ಒಂದು ನೋಟೀಸಿನ ಭಾಗವನ್ನು ಇಲ್ಲಿ ನೋಡಬಹುದು.

"ಶಹರ ಬೆಳಗಾಂವ ಶಹಾಪೂರ ಹದ್ದಿನಲ್ಲಿ ಇರುವ ದಾನೆಗಲ್ಲಿಯಲ್ಲಿ ಇದ್ದ ಮನೆ ನಂ. ೭೯ ಅ (ಹಳೇಮನೆ ನಂ. ೭೯-೮೦) ಇದು, ನಮ್ಮ ಪಕ್ಷಗಾರನಾದ ಮೇಲೆ ತಿಳಿಸಿದವರ ಮಾಲಕಿ ನಾತೆ ಇಂದೆ ಕಬಜಾ ವಹಿವಾಟಿಯಲ್ಲಿ ಇರುತ್ತದೆ. ಹೀಗಿದ್ದಾಗಿಯೂ ಶ್ರೀ ಭರ್ಮಣ್ಣ ಅನಂತಪ್ಪಾ ಸಾಬನ್ನವರ ಇವರು ತಮ್ಮ ಹೆಸರು ಸಿ. ಟಿ. ಎಸ್. ರಿಕಾರ್ಡದಲ್ಲಿ ಇದ್ದ ಬಗ್ಗೆ ಗೈರಫಾಯದೆ ತೆಗೆದುಕೊಂಡು ಬೇರೆ ಜನರಿಗೆ ಮಾರುವ ವ ವಿಲೆವಾಟ್ ಮಾಡುವ ಕಟಪಟಿಯಲ್ಲಿ ಇರುತ್ತಾರೆ".

ಇದು ವಕೀಲರ.ಸ್ಟ್ಯಾಂಪ್‌ವೇಂಡರರ ಭಾಷೆ.[1] ಮೇಲೆ ಸೂಚಿಸಿದಂತೆ ಅಧಿಕಾರಿಗಳು ಸಂಸ್ಕೃತಪದಗಳನ್ನು ಅಗತ್ಯಮೀರಿ ಬಳಸಿ, ಕನ್ನಡ ವಾಕ್ಯಶಯ್ಯೆಯನ್ನು ಹಾಳು ಮಾಡುತ್ತಿದ್ದರೆ, ಈ ವಕೀಲರೂ ಸ್ಟ್ಯಾಂಪ್‌ವೆಂಡರರೂ ಪ್ರಾದೇಶಿಕ ಪದಗಳನ್ನು ಅಗತ್ಯಮೀರಿ ಬಳಸಿ ಕನ್ನಡದ ವಾಕ್ಯಶಯ್ಯೆಯನ್ನು ಹಾಳುಮಾಡುತ್ತ ನಡೆದಿದ್ದಾರೆ. ತಾವು ನಿವೃತ್ತರಾಗುವ ಮೊದಲು ತಮ್ಮ ಅಸಿಸ್ಟಂಟರಿಗೆ ಈ ಪ್ರಾದೇಶಿಕ ಬರವಣಿಗೆ ಶೈಲಿಯಲ್ಲಿ ತರಬೇತುಗೊಳಿಸುವುದರಿಂದ, ಸಾರ್ವತ್ರಿಕ ಆಡಳಿತ ಭಾಷಾ ಅನುಷ್ಠಾನ ಕಾರ್ಯದಲ್ಲಿ ಇವರು ಉದ್ದಕ್ಕೂ ಅಡ್ಡಿಯಾಗುತ್ತಾರೆ. ಆದುದರಿಂದ ಇಂದು ಅಧಿಕಾರಿಗಳಿಗಾಗಿ ನಡೆಸುವಂತೆ ಈ ವಕೀಲರಿಗೂ, ಸ್ಟ್ಯಾಂಫ್‌ವೇಂಡರರಿಗೂ ತರಬೇತಿ ಶಿಬಿರ ನಡೆಸುವುದು ಅವಶ್ಯವಿದೆ. ಒಟ್ಟಿನಲ್ಲಿ ಮೇಲಿನ ಸ್ತರವಲ್ಲಿ ಅನುವಾದ ಮೂಲದ ಕೃತಕಭಾಷೆ, ಕೆಳಗಿನ ಸ್ತರದಲ್ಲಿ ಪ್ರಾದೇಶಿಕತೆ ಮೂಲದ ಕೃತಕ ಭಾಷೆಗಳು ಸಮಾಂತರವಾಗಿ ನಮ್ಮ ಆಡಳಿದಲ್ಲಿ ಪ್ರಸಾರಗೊಳ್ಳುತ್ತಲಿವೆ. ಈಗ ಇಬ್ಬರಲ್ಲಿಯೂ ಕಂಡು

೧. ಇವರು ಇಂದಿನ ಜನರಿಗಾಗಿ ನೂರು ವರ್ಷಗಳಷ್ಟು ಹಿಂದಿನ ವಾಕ್ಯಶೈಲಿಯನ್ನು, ಶಿಷ್ಟ ವಾಕ್ಯಗಳನ್ನು ಬಳಸಿ ಜನತೆ ಮತ್ತು ಬರವಣಿಗೆಗಳ ಮಧ್ಯೆ ಅಂತರವನ್ನು ಕಾಪಾಡುತ್ತ ನಡೆದಿದ್ದಾರೆ.

ಬರುವ ಈ ವಿಶಿಷ್ಟ ಕೃತಕತೆಯನ್ನು ನಿವಾರಿಸುವುದಲ್ಲದೆ, ಇಬ್ಬರ ಮಧ್ಯದ ಕಂದರವನ್ನು ಕಡಿಮೆ ಮಾಡಬೇಕು.

ಶಿಕ್ಷಣ, ಕೃಷಿ, ಇತ್ಯಾದಿ ಕ್ಷೇತ್ರಗಳು ಆಯಾ ಕ್ಷೇತ್ರದ ವ್ಯಕ್ತಿಗಳಿಗೆ ಸಂಬಂಧಿಸಿದ್ದರೆ, ಆಡಳಿತ ಕ್ಷೇತ್ರ ಇವರೂ ಒಳಗೊಂಡಂತೆ ಸಮಸ್ತ ಪ್ರಜೆಗಳಿಗೆ ಸಂಬಂಧಿಸಿದೆ. ಆದುದರಿಂದ ಆಡಳಿತ ಭಾಷೆ ಎಲ್ಲ ಸ್ತರದವರಿಗೂ ಅರ್ಥವಾಗುವಂತೆ ಹೀಗೆ ಹದಗೊಳ್ಳಬೇಕು:

೧. ಕನ್ನಡಪದಗಳೆಂದರೆ ಕೇವಲ ಕನ್ನಡ ಪದಗಳಲ್ಲ. ಕೇವಲ ಸಂಸ್ಕೃತ ಪದಗಳೂ ಅಲ್ಲ. ಕನ್ನಡಿಗರಿಗೆ ದಟ್ಟ ಪರಿಚಿತವಿರುವ ಯಾವುದೇ ಭಾಷೆಯ ಪದಗಳು. ಇಂಥ ಸಾರ್ವತ್ರಿಕ ಪರಿಚಯದ ಪದಗಳನ್ನು ಆಡಳಿತದಲ್ಲಿ ಬಳಸಬೇಕು.

೨. ಆಡಳಿತ ಭಾಷೆಯಲ್ಲಿ ಈ ವರೆಗೆ ಬಳಕೆಯಾಗುತ್ತ ಬಂದ ವಾಕ್ಯಶೈಲಿ ಬದಲಾಗಬೇಕು. ಅಂದರೆ ಕನ್ನಡೇತರ ಪದಗಳನ್ನು ಪರಿಮಿತ ಸಂಖ್ಯೆಯಲ್ಲಿ ಬಳಸುವುದು, ಕಾರಕಸಂಬಂಧ ಸ್ಪಷ್ಟವಾಗಿರುವಂತೆ ನೋಡಿಕೊಳ್ಳುವುದು–ಇತ್ಯಾದಿ ಕ್ರಿಯೆಗಳಿಂದ ಕನ್ನಡ ಭಾಷೆಯ ವಾಕ್ಯಶಯ್ಯೆ ಕೆಡದಂತೆ ಎಚ್ಚರವಹಿಸಬೇಕು.

ಈ ಎರಡು ದೃಷ್ಟಿಯಿಂದ ಅಧಿಕಾರಿಗಳಿಗೆ, ಸ್ಟ್ಯಾಂಪ್‌ವೆಂಡರ್–ವಕೀಲರಿಗೆ ತರಬೇತಿ ನೀಡಬೇಕು, ಮತ್ತು ಆಡಳಿತ ಸುಗಮತೆಗಾಗಿ ಈಗ ಬಳಕೆಯಲ್ಲಿರುವ ನಮೂನೆ ಫಾರ್ಮುಗಳನ್ನು ಸಾರ್ವತ್ರಿಕ ಸಂವಹನ ದೃಷ್ಟಿಯಿಂದ ತಿದ್ದುಪಡಿ ಮಾಡಬೇಕು, ಸರಳಗೊಳಿಸಬೇಕು.

ಈ ಎಲ್ಲ ಕೆಲಸಗಳಾಗಬೇಕಾದರೆ ನಮ್ಮ ನಾಡಿನ ಆಡಳಿತದ ಶಿರೋಸಂಸ್ಥೆಯಾದ ವಿಧಾನಸೌಧ ಮೊದಲು ಸುಧಾರಿಸಬೇಕು. ಇಲ್ಲದಿದ್ದರೆ 'ಯಥಾ ರಾಜಾ ತಥಾ ಪ್ರಜಾ' ಎಂಬಂತೆ ವಿಧಾನಸೌಧ ಮಾಡುವ ತಪ್ಪನ್ನು ಎಲ್ಲರೂ ಮಾಡುತ್ತಾರೆ.

ಹಕ್ಕಿಯ ಗೂಡು (ಕವನ)

● ಎಂ. ಬಿ. ಮಂಜುನಾಥಾಚಾರ್

ಹಕ್ಕಿಯೊಂದು ಗೂಡು ಕಟ್ಟಿದೆ ನಮ್ಮ ಹಿತ್ತಲ ಬೇಲಿಯಲಿ
ಆ ಬೇಲಿಯ ರೆಂಬೆಯೊಂದರ ಆಧಾರದ ಮೇಲೆ
ನೇತಾಡುತ್ತಾ ನಿಂತಿದೆ ಹಕ್ಕಿಯ ಗೂಡು.

ಗೂಡು ಕಟ್ಟಲು ವಿವಿಧ ವಸ್ತುಗಳನ್ನು ಬಳಸಿದೆ
ಹುಲ್ಲುಗರಿಗಳು–ಚೂರು ಬಟ್ಟೆಗಳು–ತುಪ್ಪಟಗಳು
ವಿವಿಧ ರೀತಿಯ ಕಡ್ಡಿಗಳು ಹೀಗೆ ಹಲವಾರು.

ಆ ಗೂಡಿನಲ್ಲಿ ಅದರ ಮರಿ ವಾಸಿಸುತ್ತಿದೆ
ಅದಕ್ಕೆ ತಿನಿಸನು ತರಲು ಅನ್ವೇಷಣೆ–
ಯಲ್ಲಿ ತೊಡಗಿವೆ ಆ ಹಕ್ಕಿ ದಂಪತಿಗಳು.

ಸಾಯಂಕಾಲವಾಯಿತು__ಹೆಣ್ಣು ಹಕ್ಕಿ ಬಂದಿತು
ತನ್ನ ಸಂಗಾತಿಯನ್ನು ಕಾಣದೆ ಅಲ್ಲಿ ಇಲ್ಲಿ
ಕುಳಿತು, ನೆಗೆದು, ಹಾರಿ, ಕುಪ್ಪಳಿಸಿ,
ತನ್ನ ಅಳಲನ್ನು ವ್ಯಕ್ತಪಡಿಸುತ್ತಿದೆ.

ತನ್ನಿನಿಯನು ಬಂದ ಮೇಲೆ ಸಂತಸದಿ ಕೂಡಿ
ತಿನಿಸವ ನೀಡಿದವು ಮುದ್ದುಮರಿಗೆ
ಈ ದೃಶ್ಯವನ್ನು ನೋಡುತ್ತಿದ್ದಾಗ
ನನ್ನ ಮನ ಆನಂದದಿಂ ಕೂಡಿ
ಕ್ಷಣ ಕಾಲ ನಿರ್ಮಲವಾದ ಹೃದಯದಿಂದ
ಯಾವುದೋ ಆನಂದಸಾಗರದಲ್ಲಿ ಮುಳುಗಿತ್ತು.

●

'ಪ್ರಜ್ಞೆ'

● ಮೂರ್ತಿಗೌಡ ಅಬ್ಬಿಗೇರಿ

ಜೀವಂತ__
ಕಟ್ಟಿದೀ ಕುರಿಯಾಡು ಹೋತುಗಳ
ಕಣ್ಮುಟ್ಟ ಕಡಿದುದ ನೋಡಿ
ಮಾಂಸದಂಗಡಿಯೋ
ಅನಿಸಿ
ಕ್ಷಣಕ್ಷಣಗಳು ನಗು ಬೀರುತ್ತವೆ
ಮನಸಿನೊಳಗೆ—
ಗರ್ಭಗುಡಿ ಸುತ್ತುವ
ಭಕ್ತಾದಿಗಳು
ಗುಂಗುವಚನಗಳ ಹಾಡಿನಲಿ
ಮರೆತಿರುವರು ಅಂದು ಅಂದಿಗೆ

ಅಹುದು ಸತ್ಯಸಾಕ್ಷಿ
ಕಟುಕನಿಗೆ ಕರುಳೆಂದರಿವರೇ
ಹಬ್ಬ ಸುಗ್ಗಿ ಸಂಭ್ರಮವೂ ಇವರೇ
ಛೇ! ನಾ ಕೇಳಲಾರೆ
ಕೊಲುವನೇ ಮಾದಿಗ......ನೆಂದು;
ಬಸವಣ್ಣಾ! ಅಯ್ಯಾ ಬಸವಣ್ಣಾ
ನಿನ್ನ ನಾಮ ಶೃತಿಯಲ್ಲಿಯೇ

ಮೂಳೆ ಕೋಡು ಕೊಂಬು ಚಿಗಿತು
ಮಗ್ನರಾದ ಇವರಿಗೆ
ಚೈತನ್ಯ ಬಸಿಯುತ್ತದೆ
ಅಂದು ಅಂದಿಗೆ
ಹಸಿವೆಂಬ ಹೆಬ್ಬಾವು
ಹರಿದು ಹೋಗುತ್ತದೆ
ಗುಡಿಯಿಂದಾಚೆಗೆ—

●

ಕೃತಿ ವಿಮರ್ಶೆ.

ಗಾಳಿಗುದರಿ : ಲೇಖಕರು– **ಬಿ.ಆರ್. ವಾಡಪ್ಪಿ**

ಪ್ರಕಾಶಕರು : ಎಂ. ಆರ್. ಸತ್ಯನಾರಾಯಣ

ಸಾಹಿತ್ಯ ಕೃತಿಗಳೆಲ್ಲ ವಾಚ್ಯಾರ್ಥ, ಭಾವಾರ್ಥ ಹಾಗೂ ವ್ಯಂಗ್ಯಾರ್ಥಗಳನ್ನು ಒಳಗೊಂಡಿರುವುದು ಸಾಮಾನ್ಯವಾದುದು. ವಾಚ್ಯಾರ್ಥ ಶಬ್ದಶಃ ಅರ್ಥವನ್ನು, ಭಾವಾರ್ಥ ಸಾಹಿತ್ಯದಲ್ಲಿ ಹುದುಗಿದ ಭಾವವನ್ನು ಹೊರಪಡಿಸುತ್ತಿದ್ದರೆ ವ್ಯಂಗ್ಯಾರ್ಥ ಸಾಹಿತ್ಯದ ವಿಮರ್ಶನ ಮಾಡುತ್ತದೆ. ವ್ಯಂಗ್ಯವಾಗಿ ಕಂಡರೂ ಅವರಲ್ಲಿ ಸಾಹಿತ್ಯದ ವಿವಿಧ ಮುಖಗಳ ಚರ್ವಿತ ಚರ್ವಣ ಮಾಡುವಲ್ಲಿ ವ್ಯಂಗ್ಯಾರ್ಥ ಓದುಗರ ಬುದ್ಧಿಗೆ ವಿಚಾರದ ಮಿಂಚನ್ನು ಒದಗಿಸಿಕೊಡುತ್ತದೆ. ಹೀಗೆ, ಪ್ರಸ್ತುತ ಶ್ರೀ ಬಿ. ಆರ್. ವಾಡಪ್ಪಿಯವರ 'ಗಾಳಿಗುದರಿ' ಪ್ರಬಂಧ ಸಂಗ್ರಹವನ್ನು ಸಾಮಾನ್ಯವಾಗಿ ವರ್ಣನ ಪರ ಪ್ರಧಾನ, ವಿಚಾರಪ್ರಧಾನ ಹಾಗೂ ವಿಮರ್ಶಾ ಪ್ರಧಾನವಾದುದೆಂದು ಮೂರು ಸಾಮಾನ್ಯ ಭಾಗಗಳನ್ನು ಮಾಡಬಹುದಾಗಿದೆ. ಪ್ರಬಂಧ ಸಂಗ್ರಹದ ಮೊದಲನೆಯ 'ಚಾವಡಿ' ಲೇಖನವು ಹಳ್ಳಿಯ ಸಮಗ್ರ ಆಡಳಿತ ವ್ಯವಸ್ಥೆಯನ್ನು ನಿರೂಪಿಸಿ, ಚಾವಡಿಯು ಹಳ್ಳಿಗರ ಮಟ್ಟಿಗೆ ದೊಡ್ಡದು ಎಂಬ ವಿಷಯವನ್ನು ವಿವೇಚಿಸುತ್ತ ಚಾವಡಿಯ ಬಗೆಗೆ ಹಳ್ಳಿಗರಲ್ಲಿದ್ದ ಭಯ–ಗೌರವ; ಓಲೆಕಾರ, ತಲಾಠಿ, ಗೌಡ ಇವರ ಠಾಕು–ಠೀಕು, ಕಾರಭಾರ ಮುಂತಾದವುಗಳನ್ನು ಕಣ್ಮುಂದೆ ಕಟ್ಟುವ ಹಾಗೆ, ಮನಂಬುಗುವಂತೆ ಸರಳಶೈಲಿಯಲ್ಲಿ ಎತ್ತಿ ಹೇಳಿದೆ. ಸ್ವಾತಂತ್ರ್ಯ ನಂತರದ ಪೀಳಿಗೆಗೆ ಚಾವಡಿಯ ಕಲ್ಪನೆ ಬಾರದು. ಸ್ವಾತಂತ್ರ್ಯ ಪೂರ್ವದಲ್ಲಿ ಆಂಗ್ಲರು ರಾಜ್ಯಭಾರ ಮಾಡುತ್ತಿದ್ದಾಗ ಹಳ್ಳಿಗಳಲ್ಲಿ ಚಾವಡಿ ಎಂದರೆ ಸರಕಾರಿ ಆಡಳಿತಕ್ಕೆ ಸಂಬಂಧಿಸಿದ ಮಹತ್ವದ ಸ್ಥಾನವಾಗಿತ್ತು. ಆ ಚಾವಡಿಯ ಅಂದಿನ ಸಮಗ್ರ ಚಿತ್ರವನ್ನು ಪ್ರಬಂಧ-ದಲ್ಲಿ ಚೆನ್ನಾಗಿ ಮೂಡಿಸಿದ್ದಾರೆ ಪ್ರಬಂಧಕಾರರು. ಇಂದಿನ ಹೊಸ ಪೀಳಿಗೆ ಹಳೆಯ ಕಾಲದ ಚಾವಡಿ ಬಗೆಗೆ ಈ ಪ್ರಬಂಧ ತಿಳಿಸಿ ಕೊಡುವಂತಿದೆ.

ನಾಗಾಲೋಟದಿಂದ ಮುನ್ನಡೆಯುತ್ತಿರುವ ಇಂದಿನ ವೈಜ್ಞಾನಿಕ–ಸ್ಪುಟನಿಕ್ ಯುಗದಲ್ಲಿಯೂ ಹಳ್ಳಿಗರು–ಪಟ್ಟಣಿಗರು, ಅಶಿಕ್ಷಿತರು–ಶಿಕ್ಷಿತರು, ಬಡವ–ಬಲ್ಲಿದ ಎಂಬ ತಾರತಮ್ಯವಿಲ್ಲದೆ ಜ್ಯೋತಿಷ್ಶಾಸ್ತ್ರದ ಮೊರೆಹೊಕ್ಕು ತಮ್ಮ ಮನಸ್ಸಿನ ದುಗುಡ-ದುಮ್ಮಾನಗಳನ್ನು ಕಡಿಮೆ ಮಾಡಿಕೊಳ್ಳುವವರ ಸುಂದರ ಚಿತ್ರಣವನ್ನು ಎರಡನೆಯ ಪ್ರಬಂಧವಾದ 'ಜ್ಯೋತಿಷಿ'ಯಲ್ಲಿ ಲೇಖಕರು ಚೆನ್ನಾಗಿ ನಿರೂಪಿಸಿದ್ದಾರೆ. ಜ್ಯೋತಿಷ್ಶಾಸ್ತ್ರದ ಬಿಸಿ ದೇವ-ದೇವತೆಯರಿಗೂ ಬಿಟ್ಟಿಲ್ಲವೆಂಬ ಅಂಶವನ್ನು ಪ್ರಸ್ತಾಪಿಸುವಲ್ಲಿ ಮರೆತಿಲ್ಲ ಪ್ರಬಂಧಕಾರರು. ಜ್ಯೋತಿಷಿಯು ಸಮಾಜದಲ್ಲಿ ತನ್ನ ಸ್ಥಾನವನ್ನು ಭದ್ರವಾಗಿರಿಸಿಕೊಂಡಿರುವ ಉಲ್ಲೇಖವೂ ಬಂದಿದೆ ಇಲ್ಲಿ. ಪ್ರತಿ

ಯೊಬ್ಬರೂ ತಮ್ಮ ಅಸಮರ್ಥತೆಯನ್ನು ಅರಿತೂ ತಾವು ಶ್ರೇಷ್ಠ ಮಟ್ಟದ ಸಾಹಿತಿ ಎಂಬ ಭ್ರಮೆ; ಮತ್ತು ಶ್ರೇಷ್ಠದರ್ಜೆಯ ಸಾಹಿತಿಗಳ ಸಾಲಿನಲ್ಲಿ ಬರಬೇಕೆಂಬ ಹುಚ್ಚು ಹಂಬಲ ಅವರ ಮನಸ್ಸಿನಲ್ಲಿ ಆಳವಾಗಿ ಬೇರೂರಿರುತ್ತದೆಯಲ್ಲದೆ ಇವರಿಂದಾಗುವ ಏರು-ಪೇರುಗಳ ಚಿತ್ರಣವನ್ನು ಬರಹಗಾರರು ಹಾಸ್ಯಮಯ ಶೈಲಿಯಲ್ಲಿ 'ಸ್ಕಂದ ಪುರಾಣ'ವೆಂಬ ಪ್ರಬಂಧದಲ್ಲಿ ನಿರೂಪಿಸಿದ್ದಾರೆ.

ವೃತ್ತ ಪತ್ರಿಕೆಗಳು ಜಗತ್ತನ್ನು ಅತೀ ಹತ್ತಿರ ತಂದಿವೆಯಲ್ಲದೆ ಇವುಗಳ ವ್ಯಾಪ್ತಿ ವಿಶ್ವವ್ಯಾಪಿಯಾಗಿ ಹರಡಿದೆ. ಊಟಕ್ಕೆ ಮೊದಲು ಉಪ್ಪಿನಕಾಯಿಯೆಂಬಂತೆ ದಿನದ ದೈನಂದಿನ ಚಟುವಟಿಕೆಗಳಿಗೆ ಮೂಲ ಪ್ರೇರಣೆ ವೃತ್ತಪತ್ರಿಕೆಗಳೇ ಎಂಬ ಅಂಶವನ್ನು ಇಲ್ಲಿ ಹೇಳಿದ್ದಾರೆಯಲ್ಲದೆ ಗೊಡ್ಡು ಹರಟೆಗೆ, ಸಮಯವನ್ನು ಕಳೆಯಲಿಕ್ಕೆ ವರ್ತಮಾನ ಪತ್ರಿಕೆಗಳು ಒಳ್ಳೆಯ ಮಾಧ್ಯಮವಾಗಿವೆ ಎಂದು ಲೇಖಕರು 'ವರ್ತಪತ್ರದ ವಿಶ್ವವ್ಯಾಪ್ತಿ' ಪ್ರಬಂಧದಲ್ಲಿ ನಿರೂಪಿಸಿದ್ದಾರೆ. ಗಾಳಿಯ ಸುದ್ದಿಯನ್ನು ಹಾಳಿಯಲ್ಲಿ ಮೂಡಿಸಿದ ಪತ್ರಿಕೆಗಳು ಕೊನೆಗೆ ಅವಲಕ್ಕಿ ತಿನ್ನಲು ಉಪಯೋಗವಾಗುತ್ತವೆಂಬ ವಿನೋದಾತ್ಮಕ ಹಾಗೂ ವಿಡಂಬನಾತ್ಮಕ ವಿಚಾರಗಳಿಗೂ ಇಲ್ಲಿ ಅನುವು ಮಾಡಿ ಜನಸಾಮಾನ್ಯರ ಅನಿಸಿಕೆಗಳನ್ನು ಈ ಪ್ರಬಂಧದಲ್ಲಿ ಎತ್ತಿತೋರಿಸಿದ್ದಾರೆ.

ಮನುಷ್ಯನ ಮನಸ್ಸು ಪಾದರಸದಷ್ಟು ಚಂಚಲವಾಗಿದ್ದು, ಮನಸ್ಸಿನ ಸ್ವಾಸ್ಥತೆಯನ್ನು ತಂದುಕೊಳ್ಳುವುದಕ್ಕಾಗಿ ಚಟಗಳ ಆಧೀನನಾಗಿ, ಮುಂದೆ ಆ ಚಟಗಳು ಅವನನ್ನು ಮತ್ತೊಮ್ಮೆ ಜೀವನದಲ್ಲಿ ಮೇಲೇರದಂತೆ; ಸಮಾಜದಲ್ಲಿ ಮುಖವೆತ್ತಿ ತಿರುಗಾಡದಂತೆ ಮಾಡುತ್ತವೆ ಎಂಬ ಪ್ರಮುಖವಾದ ವಿಷಯಗಳನ್ನು ಪ್ರಬಂಧಕಾರರು 'ಚಟಗಳು' ಎಂಬ ಲೇಖನದಲ್ಲಿ ಅನೇಕ ಉದಾಹರಣೆಗಳ ಮೂಲಕ ಹಿತವಾದ, ಸೂಕ್ಷ್ಮವಾದ ವಿಚಾರಗಳನ್ನು ಮಂಡಿಸಿ, ಓದುಗರನ್ನು ಚಿಂತನ-ಮಂಥನಕ್ಕೆ ತೊಡಗಿಸಿದ್ದಾರೆ. ಪ್ರತಿಯೊಬ್ಬರೂ ಸುಖ-ಶಾಂತಿ, ಸಮೃದ್ಧಿ ಮುಂತಾದವುಗಳನ್ನು ಆಶಿಸುವದು ಸಹಜ. ಆದರೆ ಇವುಗಳನ್ನು ಪ್ರತಿಯೊಬ್ಬರೂ ಸ್ವಪ್ರಯತ್ನದಿಂದ, ದೊರಕಿಸಿಕೊಳ್ಳಬೇಕು ಮತ್ತು 'ಗಡಿಯಾರ'ದಂತೆ ಕ್ರಮಬದ್ಧವಾಗಿ ಜೀವನದಲ್ಲಿ ಮುನ್ನಡೆಯಬೇಕೆಂಬ ವಿಚಾರಗಳನ್ನು ಮಂಡಿಸಿದ್ದಾರೆ ಲೇಖಕರು 'ಗಡಿಯಾರ' ಎಂಬ ಪ್ರಬಂಧದಲ್ಲಿ.

ಏರಿಳಿತದ ಜೀವನ ಚಕ್ರದಲ್ಲಿ ಮಾನವ ಅನೇಕ ಎಡರು-ತೊಡರು ತೊಂದರೆಗಳನ್ನು ಅನುಭವಿಸುತ್ತಾನೆ. ತೊಂದರೆಯ ಬಂಧನದಿಂದ ಯಾರೂ ಹೊರತಾಗಿಲ್ಲ; ತೊಂದರೆಗಳನ್ನು ಎದುರಿಸುವುದರಿಂದ ಜೀವನದ ನಿಜವಾದ ಅರ್ಥ ಗೊತ್ತಾಗುತ್ತದೆ ಎಂಬ ತಾತ್ತ್ವಿಕ ವಿಷಯಗಳನ್ನು ತರ್ಕ-ವಿತರ್ಕಗಳ ಒರೆಗಲ್ಲಿಗೆ ಹಚ್ಚಿ ನಿರೂಪಿಸಿದ್ದಾರೆ ಲೇಖಕರು 'ತೊಂದರೆ' ಪ್ರಬಂಧದಲ್ಲಿ. 'ಬೇಸರ' ಎನ್ನುವ ಮಹಾವ್ಯಾಧಿ ಯಾರನ್ನೂ

ಬಿಟ್ಟಿಲ್ಲ. ಬೇಸರ ಯಾವುದನ್ನು ಲೆಕ್ಕಿಸದೆ ತನ್ನ ಬಲೆಯನ್ನು ಬೀಸುತ್ತದೆ. ಮುಂದೆ ಬೇಸರಗೊಂಡ ಜೀವಿ ಇದರಿಂದ ಮುಕ್ತಿ ಹೊಂದಲು ಅನೇಕ ಚಟಗಳ ದಾಸನಾಗಿ ಅಧಃಪತನಕ್ಕಿಳಿಯುತ್ತಾನೆ ಎಂಬ ವಿಷಯಗಳ ಮೇಲೆ ಒತ್ತುಕೊಟ್ಟು ಹೇಳಿದ್ದಾರೆ ಪ್ರಬಂಧಕಾರರು 'ಬೇಸರ' ಲೇಖನದಲ್ಲಿ. ಸುಖ-ದುಃಖ, ಪ್ರೀತಿ-ದ್ವೇಷ, ಯಶ–ಅಪ ಯಶಗಳ ದ್ವಂದ್ವಗಳಲ್ಲಿ ಸಿಲುಕಿ ಮಾನವ ಜರ್ಜರಿತನಾಗಿದ್ದಾನೆ. ಆದರೆ ಇವುಗಳಿಗೆ ಧೈರ್ಯಗೆಡದೆ ಇವು ಆಹ್ವಾನವೆಂದು ಸ್ವೀಕರಿಸಿ, ಇವೆಲ್ಲವುಗಳನ್ನು ಎದುರಿಸಿ ಗೆಲ್ಲ ಬೇಕು ಎಂಬ ಆರೋಗ್ಯಕರ ವಿಚಾರಗಳನ್ನು ಮಂಡಿಸಿದ್ದಾರೆ 'ಯಶ–ಅಪಯಶ' ಲೇಖನದಲ್ಲಿ. ಬೀದಿ ನಳವು ಸಮಾಜದ ಹಲವು ಹತ್ತು ಬಗೆಯ ಜನರನ್ನು ಪರಿಚಯಿ ಸುತ್ತದೆ; ಇದರ ದರ್ಶನ ಲಾಭವನ್ನು ಪಡೆದುಕೊಳ್ಳುವುದು ಅನುಭವದ ದೃಷ್ಟಿ ಯಿಂದ ಆವಶ್ಯಕ ಎಂಬ ವಿಚಾರವನ್ನು ಪ್ರಸ್ತಾಪಿಸಿದ್ದಾರೆ 'ಬೀದಿನಳ' ಪ್ರಬಂಧದಲ್ಲಿ. ಬೀದಿನಳವು ಎಷ್ಟೋ ಜನರನ್ನು ತನ್ನ ಕಡೆಗೆ ಆಕರ್ಷಿಸಿಕೊಳ್ಳುವ ಸಂಸ್ಥೆಯೆಂದು ಲೇಖಕರು ಹೇಳಿದ ಮಾತು ಸಮಂಜಸವಾಗಿದೆ.

ಇಂದು ರಾಷ್ಟ್ರೀಯ ಪಕ್ಷಿಯಾಗಿ ಬಿರುದು ಗಳಿಸಿದ 'ನವಿಲು' ಸರ್ವರ ಪ್ರೀತಿಗೆ, ಮೆಚ್ಚುಗೆಗೆ ಪಾತ್ರವಾದ ಪಕ್ಷಿಯಾಗಿದೆ. ಶಾರದೆಯ ವಾಹನವಾದ ನವಿಲಿನ ಸ್ವಚ್ಛಂದ ಕುಣಿತ, ಅದರ ಬಣ್ಣಬಣ್ಣದ ಗರಿಗಳ ಅಂದ–ಚಂದ ಎಲ್ಲರ ಮನಸ್ಸನ್ನು ಆಹ್ಲಾದ ಗೊಳಿಸುತ್ತದೆ; ನೋಡುವವರ ಹೃದಯಾರವಿಂದ ಅರಳುವಂತೆ ಮಾಡುತ್ತದೆ ಎಂಬು ದರ ವಿವರಣೆ 'ನವಿಲು' ಲೇಖನದಲ್ಲಿದೆ. ನವಿಲಿನಂತೆ ಪ್ರತಿಯೊಬ್ಬರ ಮನಸ್ಸು ಸ್ವಚ್ಛಂದವಾಗಿ, ಶುದ್ಧವಾಗಿರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ಸರಕಾರಿ ಬಸ್ಸುಗಳ ಯಥಾವತ್ತಾದ ಸ್ಥಿತಿಗತಿಗಳನ್ನು, ಲೇಖಕರು 'ಬಸ್ಸುಗಳು' ಲೇಖನದಲ್ಲಿ ಎತ್ತಿ ಹೇಳಿರುವರು. ಕೃತ, ತ್ರೇತ, ದ್ವಾಪರಯುಗಗಳಲ್ಲಿ ನಾರಾಯಣನು ಲೋಕೋದ್ಧಾರಕ್ಕಾಗಿ ಅವತಾರಗಳನ್ನು ತಾಳಿದರೆ, ಕಲಿಯುಗದ ಮಾನವ ಪ್ರತಿ ನಿತ್ಯ ಅನೇಕ ಅವತಾರಗಳನ್ನು ಸ್ವಲಾಭಕ್ಕೆ, ಸ್ವಪ್ರತಿಷ್ಠೆಗೆ, ಸ್ವಾರ್ಥಕ್ಕೆ ತಾಳುತ್ತಿದ್ದಾನೆ ಎಂಬ ಗಹನವಾದ ವಿಷಯವನ್ನು ಲೇಖಕರು 'ಅವತಾರಗಳು' ಪ್ರಬಂಧದಲ್ಲಿ ಮಂಡಿಸಿದ್ದಾರೆ. ಮಾತುಗಾರ ಬೇಂದ್ರೆಯವರು ತಮ್ಮನ್ನು ತಾವೇ ಮರೆತು. ತಮ್ಮ ಸ್ವಾನುಭವದ ಮಾತುಗಳನ್ನು ಮಾತಿಗೆ ಸಿಕ್ಕವರ ಮುಂದೆ ಪ್ರಸ್ತಾಪಿಸುತ್ತಿದ್ದರು ಎಂಬ ವಿಷಯವನ್ನು ಹಾಸ್ಯಮಯ ಶೈಲಿಯಲ್ಲಿ ಲೇಖಕರು 'ಮಾತುಗಾರ ಬೇಂದ್ರೆ-ಯವರು' ಪ್ರಬಂಧದಲ್ಲಿ ನಿರೂಪಿಸಿ ವರಕವಿಗೆ ಗೌರವವನ್ನು ಸಲ್ಲಿಸಿದ್ದಾರೆ.

ಒಟ್ಟಾರೆ ಇಲ್ಲಿಯ ಎಲ್ಲ ಪ್ರಬಂಧಗಳು ಜೀವನದ, ಸಮಾಜದ ವಿವಿಧ ಸ್ತರಗಳ ಯಥಾವತ್ತಾದ ಚಿತ್ರಣವನ್ನು ಮತ್ತು ಮಾನವನ ಹುಚ್ಚು ಮನಸ್ಸಿನ ಹತ್ತು ಮುಖ ಗಳನ್ನು ಪರಿಚಯಿಸಿ ಕೊಟ್ಟಿವೆ. ಹಾಸ್ಯ, ವಿಡಂಬನೆ, ವಿಮರ್ಶೆ ಈ ಎಲ್ಲ ಅಂಶಗಳು

ಪ್ರಬಂಧಗಳಲ್ಲಿ ಸೂಕ್ಷ್ಮವಾಗಿ, ನವುರಾಗಿ, ಹಿತ–ಮಿತವಾಗಿ ಬಂದಿವೆ. ಪ್ರತಿ ಪ್ರಬಂಧದಲ್ಲಿ ಇವರು ಉಪಯೋಗಿಸಿದ ಅವತರಣಿಕೆಗಳು, ಸುಭಾಷಿತಗಳು, ತಾತ್ವಿಕ ಮಾತುಗಳು, ಲೇಖಕರ ಆಳವಾದ ಅಭ್ಯಾಸ, ಸಮಯೋಚಿತ ವಿಷಯ ಪ್ರಜ್ಞೆಯನ್ನು ಎತ್ತಿ ತೋರಿಸುತ್ತಿವೆ. 'ಸಾಹಿತ್ಯವು ಜೀವನದ ಪ್ರತಿಬಿಂಬ' ಎಂಬ ಕಾವ್ಯ ಮೀಮಾಂಸಕರ ಮಾತನ್ನು 'ಗಾಳಿಗುದರಿ' ಪ್ರಬಂಧ ಸಂಕಲನವು ಸಿದ್ಧಪಡಿಸಿದೆ. ಲಲಿತ ಪ್ರಬಂಧಗಳಿಗೆ ಮಾದರಿಯಾದ ಕೃತಿಯಾಗಿದೆ 'ಗಾಳಿಗುದರಿ'.

—ಬಿ. ವಿ. ಯಕ್ಕುಂಡಿಮಠ

ಈ ಸಂಚಿಕೆಯ ಲೇಖಕರು

○ ಶ್ರೀ ಸಿ. ಯಂ. ವೀರಭದ್ರಯ್ಯ
ಅಧ್ಯಾಪಕ, ಪದವಿಪೂರ್ವ ಕಾಲೇಜ
ಮರಿಯಮ್ಮನ ಹಳ್ಳಿ, ಬಳ್ಳಾರಿ ಜಿಲ್ಲೆ

○ ಡಾ. ಎ. ಮುರಿಗೆಪ್ಪ
ಪ್ರವಾಚಕ, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

○ ಶ್ರೀ ವ್ಹಿ. ಎಸ್. ಮಾಳಿ
ಕನ್ನಡ ಅಧ್ಯಾಪಕ
ಶ್ರೀ ವೃಷಭೇಂದ್ರ ಶಿಕ್ಷಣ ಸಂಸ್ಥೆಯ
ಕಲಾ–ವಾಣಿಜ್ಯ ಮಹಾವಿದ್ಯಾಲಯ, ಹಾರೂಗೇರಿ
ಜಿಲ್ಲಾ : ಬೆಳಗಾಂವ

○ ಶ್ರೀ ಗುರುಪಾದ ಮರಿಗುದ್ದಿ
ಕಲಾ, ವಿಜ್ಞಾನ ಕಾಲೇಜು, ಸಂಕೇಶ್ವರ
ಜಿಲ್ಲೆ : ಬೆಳಗಾಂವ

○ ಡಾ. ವಿ. ವಿ. ಹೆಬ್ಬಳ್ಳಿ
ಲಿಂಗರಾಜ ಕಾಲೇಜ
ಬೆಳಗಾಂವ

○ ಡಾ. ಎಸ್. ಜಯಪ್ರಕಾಶ್
ತೆಲುಗು ವಿಭಾಗ
ಮಧುರೈ ಕಾಮರಾಜ ವಿಶ್ವವಿದ್ಯಾಲಯ,
ಮಧುರೈ–೬೨೫ ೦೨೧

○ ಡಾ. ಹರಿಕೃಷ್ಣ ಭಟ್ ಭರಣ್ಯ
ಕನ್ನಡ ವಿಭಾಗ
ಮಧುರೈ ಕಾಮರಾಜ ವಿಶ್ವವಿದ್ಯಾಲಯ
ಮಧುರೈ–೬೨೫ ೦೨೧

- ಶ್ರೀ ಜಿ. ಎ. ತಿಗಡಿ
  ಕನ್ನಡ ಅಧ್ಯಾಪಕ, ಸರ್ಕಾರಿ ಕಿರಿಯ ಕಾಲೇಜು
  ದೇವಲ–ಗಾಣಗಾಪೂರ

- ಶ್ರೀ ಲಿಂಗನಗೌಡ ಗು. ಮಾಲೀಪಾಟೀಲ
  ಪೋಸ್ಟ : ಕೆಂಭಾವಿ
  ತಾಲೂಕ : ಸುರಪೂರ
  ಜಿಲ್ಲಾ : ಕಲಬುರ್ಗಿ

- ಕು. ಶೈಲಜಾ ಹಿರೇಮಠ
  C/o, ಶ್ರೀ ಸಿ. ವ್ಹಿ. ಹಿರೇಮಠ
  ಮುನಿಸಿಪಲ್ ಕಾಲನಿ, ಮನೆ, ನಂ. ೧೬
  ರಾಮನಗರ, ಧಾರವಾಡ

- ಶ್ರೀಮತಿ ವಿಜಯಶ್ರೀ ಸಬರದ
  ಕನ್ನಡ ಅಧ್ಯಾಪಕಿ
  ಅಕ್ಕಮಹಾದೇವಿ ಮಹಿಳಾ ಕಾಲೇಜ
  ಬೀದರ–೫೮೫೪೦೧

- ಡಾ. ಎಂ. ಎಂ. ಕಲಬುರ್ಗಿ
  ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಶ್ರೀ ಎಂ. ಬಿ. ಮಂಜುನಾಥಾಚಾರ್
  ಮಣಿಕುಪ್ಪೆ, ಸಿಂಗೋನಹಳ್ಳಿ
  ತುಮಕೂರ ಜಿಲ್ಲೆ, ೫೭೨ ೧೩೦

- ಶ್ರೀ ಮೂರ್ತಿಗೌಡ ಅಬ್ಬೀಗೇರಿ
  ಪೋಸ್ಟ : ಹಲಗೇರಿ
  ತಾಲೂಕ : ಕೊಪ್ಪಳ
  ಜಿಲ್ಲೆ : ರಾಯಚೂರು

- ಡಾ॥ ಬಿ. ವ್ಹಿ. ಯಕ್ಕುಂಡಿಮಠ
  ಅಧ್ಯಾಪಕ, ಕನ್ನಡ ಅಧ್ಯಯನ ಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ರೂ. ೧೦೦-೦೦ (ಒಂದು ನೂರು ರೂಪಾಯಿಗಳು) ಕಳಿಸಿ, ವಿಶ್ವವಿದ್ಯಾಲಯು ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯು ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮–೦೦ (ಅಂಚೆ ವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨–೫೦ (ಅಂಚೆ ವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೪-೦೦

ಹಣವನ್ನು **ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** – ೫೮೦ ೦೦೩ ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ ಅಥವಾ ಪೋಸ್ಟಲ್ ಆರ್ಡರ್ ತೆಗೆಯಿಸಿ, **ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು,
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ